

ಪೇಜಾವರ ಪ್ರಶಸ್ತಿ

ಪೇಜಾವರ ಪ್ರಶಸ್ತಿ

(ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಜೀವನ ಸಾಧನೆಗಳ ಸಮೀಕ್ಷೆ)

ಸಂಪಾದಕರು

ಹೆರಂಜೆ ಕೃಷ್ಣ ಭಟ್ಟ

ಮುರಳೀಧರ ಉಪಾಧ್ಯ, ಹಿರಿಯಡಕ

ಪ್ರಕಾಶಕರು

ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಪೀಠಾರೋಹಣ ವಜ್ರ ಮಹೋತ್ಸವ ಸಮಿತಿ

ಪೂರ್ಣಪ್ರಜ್ಞ ವಿದ್ಯಾಪೀಠ

ಬೆಂಗಳೂರು – ೫೬೦ ೦೨೮

PEJAVARA PRASHASTHI: Life and Achievements of Shri Vishwesha Theertha Swamiji of Sri Pejavara Matha, Udupi. Published on the occasion of the "Diamond Jubilee" celeberation of taking up the life of consecration and taking charge of the Sri Pejavara Matha. Edited by Heranje Krishna Bhat and Muraleedhara Upadhya, Hiriadka, 1999.

PP : 770 + 32 + 48 (Photo Pages)

COVER DESIGN:

Conception : Ramesh Rao

Art work : Shailesh Kotian

Photo : Yajna, Mangalore

Printed at Manipal Power Press, Manipal 576 119

‘ಪೇಜಾವರ ಪ್ರಶಸ್ತಿ’ಯಲ್ಲಿ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಚಿಕಣಿ ಆತ್ಮಕತೆ ಹಾಗೂ ಮಹಾ ಪರಂಪರೆಯ ಧಾರ್ಮಿಕ ಗ್ರಂಥಗಳ ಕುರಿತು ಅವರು ಬರೆದಿರುವ ೩೪ ಲೇಖನಗಳಿವೆ. ಶ್ರೀ ವಿಶ್ವೇಶತೀರ್ಥರ ಜೀವನ, ಸಾಧನೆ, ವ್ಯಕ್ತಿತ್ವ, ಸಾಮಾಜಿಕ - ರಾಜಕೀಯ ನಿಲುವುಗಳ ಕುರಿತು, ದ. ರಾ. ಬೇಂದ್ರೆ, ಗೌರೀಶ ಕಾಯ್ಕಿಣಿ, ಕು. ಶಿ. ಹರಿದಾಸ ಭಟ್ಟ, ಪಾ. ವೆಂ. ಆಚಾರ್ಯ, ಡಾ। ಎಂ. ಪ್ರಭಾಕರ ಜೋಶಿ, ಲಕ್ಷ್ಮೀಶ ತೋಳ್ಪಾಡಿ, ಬನ್ನಂಜೆ ಗೋವಿಂದಾಚಾರ್ಯ, ಪಂಡರೀನಾಥಾಚಾರ್ಯ ಗಲಗಲಿ, ಪ್ರೊ। ಪಿ. ಶ್ರೀಪತಿ ತಂತ್ರಿ, ರಾಜಾರಾಮ ತೋಳ್ಪಾಡಿ, ಪಾಟೀಲ ಪುಟ್ಟಪ್ಪ, ಕೆ. ಕೆ. ಪೈ, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಡಾ। ಸಿ. ಎಚ್. ಶ್ರೀನಿವಾಸ ಮೂರ್ತಿ, ಎ. ಹರಿದಾಸ ಭಟ್ ಮತ್ತಿತರ ವಿದ್ವಾಂಸರು ಬರೆದಿರುವ ಎಪ್ಪತ್ತು ಲೇಖನಗಳು ಈ ಗ್ರಂಥದಲ್ಲಿವೆ. ‘ಗೋವಿಂದ ಪೈ ಸಂಶೋಧನ ಸಂಪುಟ’ ಖ್ಯಾತಿಯ ಪ್ರೊ। ಹೆರಂಜೆ ಕೃಷ್ಣ ಭಟ್ಟ ಹಾಗೂ ಪ್ರೊ। ಮುರಳೀಧರ ಉಪಾಧ್ಯ, ಹಿರಿಯಡಕ ಈ ಗ್ರಂಥದ ಸಂಪಾದಕರು.

ಅನುಕ್ರಮಣಿಕೆ

೨. ಶ್ರೀ ವಿಶ್ವೇಶತೀರ್ಥರ ಜೀವನ

ಶ್ರೀ ವಿಶ್ವೇಶತೀರ್ಥರ ಜೀವನ

೨-೧

ಸನ್ಯಾಸಿಯ ನೆನಪುಗಳು

ನನ್ನ ಪೂರ್ವಾಶ್ರಮದ ಕುಟುಂಬವು ವೈದಿಕ ಮನೆತನದ್ದು. ನಮ್ಮ ಪೂರ್ವಾಶ್ರಮದ ಅಜ್ಜಂದಿರನ್ನು ನಾನು ನೋಡಿಯೇ ಇಲ್ಲ. ಅವರ ನಿಧನದ ನಂತರವೇ ನನ್ನ ಜನನವಾಗಿದೆ. ಆದರೆ ಪೂರ್ವಾಶ್ರಮದ ಅಜ್ಜಿ, ತಂದೆಯ ತಾಯಿ ಮತ್ತು ತಾಯಿಯ ತಾಯಿ ಇಬ್ಬರನ್ನೂ ನಾನು ಚೆನ್ನಾಗಿ ಬಲ್ಲೆ. ನನ್ನ ಮೊದಲನೆಯ ಪರ್ಯಾಯದ ೧೯೫೩-೧೯೫೪ರ ವರೆಗೂ ಅವರಿಬ್ಬರೂ ಇದ್ದರು. ಇಬ್ಬರೂ ನನ್ನನ್ನು ಬಾಲ್ಯದಲ್ಲಿ ಅತ್ಯಂತ ಪ್ರೀತಿಯಿಂದ ನೋಡುತ್ತಿದ್ದರು. ನಮ್ಮ ಪೂರ್ವಾಶ್ರಮದ ತಂದೆಯವರು ಕೊಡಗಿನ ತಲಕಾವೇರಿ ಸಮೀಪದ ಭಾಗಮಂಡಲ ದೇವಸ್ಥಾನಕ್ಕೆ ಅರ್ಚಕ ಕೆಲಸಕ್ಕಾಗಿ ಆಗಾಗ್ಗೆ ಹೋಗುತ್ತಿದ್ದುದು ನನಗೆ ನೆನಪಿದೆ. ನಮ್ಮ ಗುರುಗಳಾದ ವಿಶ್ವಮಾನ್ಯತೀರ್ಥರ ಜೊತೆಗೂ ಸೇವೆ ಸಲ್ಲಿಸುತ್ತಿದ್ದರು. ಅವರ ಪರ್ಯಾಯ (೧೯೩೬-೩೮) ಕಾಲದಲ್ಲಿ ಸಿಂಹಾಸನದ ಸೇವಾ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿದ್ದರು. ನಮ್ಮ ಪೂರ್ವಾಶ್ರಮದ ಚಿಕ್ಕಪ್ಪ ನರಸಿಂಹಾಚಾರ್ಯರು ಉಡುಪಿಯಲ್ಲಿ ಸಂಸ್ಕೃತ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ನಮ್ಮ ಗುರುಗಳ ಜೊತೆಗೆ ಸಂಪರ್ಕ ಹಾಗೂ ಆತ್ಮೀಯತೆ ಬೆಳೆದು ಕೊನೆಗೆ ಅವರು ಮಠದ ಪ್ರಧಾನ ಆಡಳಿತಗಾರರಾಗಿ ಕೆಲಸ ಮಾಡುತ್ತಿದ್ದರು. ನಮ್ಮ ಪೂರ್ವಾಶ್ರಮದ ತಂದೆ, ತಾಯಿಯಂದಿರು ೧೯೬೮ ಮತ್ತು ೧೯೬೬ರ ವರೆಗೂ ಬದುಕಿದ್ದರು. ಅವರಿಬ್ಬರ ನೆನಪು ನನ್ನಲ್ಲಿ ಅಚ್ಚಳಿಯದೆ ಉಳಿದಿದೆ. ಅವರಿಬ್ಬರೂ ಹಾಗೂ ಉಳಿದ ಬಂಧುಗಳೂ ನನ್ನನ್ನು "ಅಣ್ಣ" ಎಂದೇ ಕರೆಯುತ್ತಿದ್ದರು. ಅವರಿಬ್ಬರೂ ಹಿರಿಯ ಮಗನಾದ ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು. ನಾನೂ ಅವರನ್ನು ಪ್ರೀತಿಸುತ್ತಿದ್ದೆ. ತಂದೆಯವರ ಬಗ್ಗೆ ಭಯ, ತಾಯಿಯ ವಿಷಯದಲ್ಲಿ ಬಹಳ ಸಲುಗೆ. ನಾನು ಬಾಲ್ಯದಲ್ಲಿ ರೋಗಪೀಡಿತನಾಗಿದ್ದಾಗ ಕಹಿ ಔಷಧವನ್ನು ಸ್ವೀಕರಿಸುತ್ತಿದ್ದ ಘಟನೆ ಇನ್ನೂ ನನ್ನ ನೆನಪಿನಲ್ಲಿದೆ. ತಾಯಿಯು ನೀಡುವ ಔಷಧವನ್ನು ಸ್ವೀಕರಿಸಲು ನಾನು ಪ್ರತಿಭಟಿಸಿ ರಂಪಾಟವಾಡುತ್ತಿದ್ದೆ. ಆಗ ತಂದೆ ಒಂದು ಉಪಾಯ ಹೂಡಿದರು. ಮಗುವಿಗೆ ಕಹಿ ಔಷಧವನ್ನು ಯಾಕೆ ಕೊಡುತ್ತಿ ಎಂದು ಜೋರಾಗಿ ಗದರಿಸಿ ತಾಯಿಯನ್ನು ಹೊಡೆಯಲು ಬರುವಂತೆ ನಾಟಕ ಆಡಿದರು. ತಾಯಿಗೆ ತಂದೆಯು ಹೊಡೆಯಬಾರದೆಂದು ತಾಯಿಯ ಮೇಲಿನ ಅಕ್ಕರೆಯಿಂದ ಕಷ್ಟವಾದರೂ ಸಹಿಸಿಕೊಂಡು ತತ್‌ಕ್ಷಣ ಕಹಿ ಔಷಧವನ್ನು ಕುಡಿದೆ.

ಮಠದ ಪೂರ್ವಾಶ್ರಮದ ಬಂಧುಗಳಿಗೆ ಮಠಗಳಲ್ಲಿ ಹೆಚ್ಚಿನ ಸವಲತ್ತುಗಳು ದೊರೆಯುತ್ತಿದ್ದವು.

ನಾನು ನನ್ನ ೧೫-೧೬ ವರ್ಷಗಳ ನಂತರ ಇದನ್ನು ವಿರೋಧಿಸುತ್ತಿದ್ದೆ. ಪೂರ್ವಾಶ್ರಮದ ಬಂಧುಗಳಿಗೆ ಉಳಿದವರಿಗಿಂತ ಹೆಚ್ಚಿನ ಯಾವ ಸವಲತ್ತುಗಳೂ ಇರಬಾರದು. ಮಠದ ಸಂಪತ್ತಿನ ವಿತರಣೆಯು ಎಲ್ಲರಿಗೂ ಸಮಾನವಾಗಿರಬೇಕು ಎಂದು ನಾನು ಪ್ರತಿಪಾದಿಸುತ್ತಿದ್ದೆ. ಅದರಂತೆಯೇ ಮಠದಲ್ಲಿ ನಡೆಯುತ್ತಿದ್ದೆ. ಇದರಿಂದ ನಮ್ಮ ತಂದೆ ತಾಯಿಯವರಿಗೆ ಅಸಮಾಧಾನವಾಗುತ್ತಿದ್ದರೂ ನನ್ನ ಧೋರಣೆಗೆ ಹೊಂದಿಕೊಂಡೇ ಇರುತ್ತಿದ್ದರು. ನನ್ನಲ್ಲಿ ಅವರ ವಿಶ್ವಾಸವು ಏನೂ ಕಡಿಮೆಯಾಗಿರಲಿಲ್ಲ. ನನ್ನ ೩೬ ವರ್ಷದವರೆಗೂ ತಾಯಿ ಬದುಕಿದ್ದರು. ಅವರಿಗೆ ನಾನು ಯಾವ ರೀತಿಯಿಂದಲೂ ವಿಶೇಷ ಉಪಚಾರ ಮಾಡಿಲ್ಲ. ಅವರಿಗೆ ಸೀರೆ, ಆಭರಣಗಳನ್ನೂ ನಾನು ಅರ್ಪಿಸಲಿಲ್ಲ. ಮಠದಲ್ಲಿ ಊಟ, ವಸತಿ ಮಾತ್ರ ದೊರೆಯುತ್ತಿತ್ತು. ಉಳಿದ ಏನನ್ನೂ ನಾನು ಅವರಿಗೆ ನೀಡಿಲ್ಲ. ಆದರೂ ಅವರು ಒಮ್ಮೆಯೂ ನನ್ನಲ್ಲಿ ಇಂತಹ ಯಾವ ವಸ್ತುಗಳನ್ನೂ ಬಯಸಲಿಲ್ಲ. ಏನೂ ಬೇಸರವನ್ನೂ ಮಾಡಿಲ್ಲ. ನಾನೇ ಆಗಾಗ್ಗೆ ಅವರನ್ನು ವಿಚಾರಿಸಿ ಅವರಿಗೆ ಉಪಯುಕ್ತ ವಸ್ತುಗಳು ಮತ್ತು ಅದರ ಖರ್ಚಿಗಾಗಿ ಹಣವನ್ನೂ ಕೊಡಲಿಲ್ಲ. ಈ ವಿಷಯದಲ್ಲಿ ನಾನು ತಪ್ಪು ಮಾಡಿದೆನೋ ಎಂದು ನನಗೆ ಈಗ ಅನಿಸುತ್ತಿದೆ. ನಾನು ಸನ್ಯಾಸವನ್ನು ಸ್ವೀಕರಿಸಿದ ಮೇಲೆ ನಮ್ಮ ತಾಯಿಯು ವಿಶೇಷ ಮಡಿ, ನಿಯಮಗಳನ್ನು ಅನುಸರಿಸಿಕೊಂಡು ನನಗೆ ಬೇಕಾದ ಪದಾರ್ಥಗಳನ್ನು ಬಹಳ ಶ್ರದ್ಧೆಯಿಂದ ಸಿದ್ಧಪಡಿಸಿ ನನ್ನನ್ನು ಬಹಳ ಪ್ರೀತಿಯಿಂದ ಉಪಚರಿಸುತ್ತಿದ್ದರು. ಅವರ ಪ್ರೀತಿ ಮತ್ತು ಶುಶ್ರೂಷೆಯನ್ನು ನಾನು ಎಂದಿಗೂ ಮರೆಯಲಾರೆ. ನಾನು ಅವರನ್ನು ೧೯೫೪ರಲ್ಲಿ ಬದರಿಗೆ ಕರೆದುಕೊಂಡು ಹೋಗಿದ್ದೆ. ನಾನು ಮುಂಬಯಿಯಿಂದ ಪತ್ರ ಬರೆದ ಕೂಡಲೇ ಬಹಳ ಸಂತೋಷದಿಂದ ನನ್ನಲ್ಲಿಗೆ ಬಂದಿದ್ದರು. ಜೋಷಿ ಮಠದಿಂದ ನನ್ನ ಜೊತೆಗೆ ತಂದೆ, ತಾಯಿಯರಿಬ್ಬರೂ ಕಾಲುನಡಿಗೆಯಲ್ಲಿ ಬಂದಿದ್ದರು. ಬದರಿಯ ನಾರಾಯಣ ದೇವರ ಗುಡಿಯ ಎದುರಿಗೆ ಬಂದಾಗ ಅತ್ಯಂತ ಸಂತೋಷದಿಂದ ಧನ್ಯತೆಯ ಭಾವದಿಂದ ಅವರು ನನ್ನ ಬಗ್ಗೆ ಆಡಿದ ಮಾತುಗಳನ್ನು ನೆನೆದು ಇಂದಿಗೂ ನನ್ನ ಹೃದಯ ತುಂಬಿ ಬರುತ್ತಿದೆ. ನನ್ನ ತಾಯಿಗೆ ನಾನು ನೀಡಿದ ದೊಡ್ಡ ಕಾಣಿಕೆಯೆಂದರೆ ಇದೊಂದೇ. ಬೇರೆ ಬೇರೆ ಊರಿನ ನಮ್ಮ ಅಭಿಮಾನಿಗಳು ಉಡುಪಿಗೆ ಬಂದಾಗ ತಾಯಿಯನ್ನು ಸಂದರ್ಶಿಸಿ ನನ್ನ ಬಗ್ಗೆ ಒಳ್ಳೆ ಮಾತನ್ನು ಹೇಳುತ್ತಾ ಅವರಿಗೆ ನಮಸ್ಕರಿಸಿದಾಗ ಅವರು ಸಂತೋಷದಿಂದ ಉಬ್ಬುತ್ತಿದ್ದರು. ಅವರು ನನ್ನಿಂದ ಯಾವ ಭೌತಿಕ ಸಂಪತ್ತನ್ನು ಪಡೆಯಲಿಲ್ಲ. ಈ ಗೌರವ ಮರ್ಯಾದೆಗಳಿಂದಲೇ ಅವರು ಆನಂದಿಸುತ್ತಿದ್ದರು. ಸಾದಾ, ಸರಳ ಜೀವನವನ್ನೇ ಅವರು ನಡೆಸಿದ್ದಾರೆ.

ನಮ್ಮ ಪೂರ್ವಾಶ್ರಮದ ತಂದೆಯವರು ನನ್ನ ಸನ್ಯಾಸ ಸ್ವೀಕಾರದ ನಂತರ ನಾನು ಬಾಲ್ಯದಲ್ಲಿದ್ದುದರಿಂದ ಮದರಾಸ್ ಎಂಡೋಮೆಂಟ್ ಬೋರ್ಡಿನ ಆದೇಶದಂತೆ ಮಠದ ಆಡಳಿತವನ್ನು ನರಸಿಂಹಾಚಾರ್ಯರಿಂದ ಸ್ವೀಕರಿಸಿದರು. ತಮ್ಮ ಆಡಳಿತದಲ್ಲಿ ಪ್ರಾಮಾಣಿಕತನದಿಂದ ಮಠದ ಸೇವೆಯನ್ನು ಸಲ್ಲಿಸಿದರು. ಹಿಂದಿನ ಪರ್ಯಾಯದ ಸಾಲದ ಭಾರದಿಂದ ಮಠದ ಆರ್ಥಿಕ ಸ್ಥಿತಿಯು ಹದಗೆಟ್ಟಿತ್ತು. ಆಗ ಮಠಕ್ಕೆ ತುಂಬಾ ಆಸ್ತಿಯಿದ್ದರೂ ಅಕ್ಕಿಯ ಆಗಿನ ಬೆಲೆಯಲ್ಲಿ ಬಡ್ಡಿಯನ್ನು ಕೊಟ್ಟು ಸಾಲವನ್ನು ತೀರಿಸುವುದು ಬಹಳ ಕಠಿಣವಿತ್ತು. ಆದರೂ ಬಹಳ ಎಚ್ಚರವಹಿಸಿ ಎಲ್ಲಾ ಸಾಲ ಪರಿಹಾರವಾಗುವಂತೆ ಮಾಡಿ ಉಡುಪಿಯ ಮಠದ ಜೀರ್ಣೋದ್ಧಾರವನ್ನು ಮಾಡಿದರು. ಮೊದಲನೆಯ ಪರ್ಯಾಯದಲ್ಲಿ ಆರ್ಥಿಕ ಪರಿಸ್ಥಿತಿಯು ತುಂಬಾ ಕಠಿಣವಾಗಿತ್ತು. ಕೃಷ್ಣ ಮಠದ ಆಡಳಿತವು ಎಂಡೋಮೆಂಟ್ ಆಡಳಿತಾಧಿಕಾರಿಯ ಕೈಯಲ್ಲಿತ್ತು. ಸೇವೆಯಿಂದ ಏನೇ ಹಣ ಬಂದರೂ ನಮ್ಮ ಕೈ ಸೇರುತ್ತಿರಲಿಲ್ಲ. ನಮಗೆ ಹಣವು ನಿಯಮಿತ ರೂಪದಲ್ಲಿ ಮಾತ್ರ ಬರುತ್ತಿತ್ತು. ಸೇವೆ, ಉತ್ಸವ, ಸಂತರ್ಪಣೆ, ಸಂಬಳ ಎಲ್ಲಾ ಖರ್ಚನ್ನೂ ನಮ್ಮ ಮಠದಿಂದಲೇ ನಿರ್ವಹಿಸಬೇಕಿತ್ತು. ಯುದ್ಧ ಕಾಲದ ಪಡಿತರ ಪದ್ಧತಿ (ರೇಶನ್ ಪದ್ಧತಿ) ಜಾರಿಯಲ್ಲಿತ್ತು. ನಾನು ಬಾಲ್ಯದಲ್ಲಿದ್ದುದರಿಂದ ಈಗಿನಂತೆ ಇನ್ನೂ

ಜನತೆಯ ಸಂಪರ್ಕ, ಸಹಕಾರಗಳು ಪ್ರಾರಂಭವಾಗಿರಲಿಲ್ಲ. ಬಾಲ್ಯದ ಉತ್ಸಾಹದಿಂದಾಗಿ ರೇಶನ್ ಕಾಲದಲ್ಲಿ ಊಟದ ನಿಯಂತ್ರಣವನ್ನು ರದ್ದುಪಡಿಸಿ ಜನರಿಗೆ, ಯಾತ್ರಿಕರಿಗೆ, ವಿದ್ಯಾರ್ಥಿಗಳಿಗೆ ವ್ಯಾಪಕ ರೀತಿಯಲ್ಲಿ ಸಂತರ್ಪಣೆಯನ್ನು ಆರಂಭಿಸಿದೆ. ಊಟದ ಮಟ್ಟವನ್ನೂ ಏರಿಸಿದೆ. ಇದರಿಂದಾಗುವ ಆರ್ಥಿಕ ಪರಿಣಾಮವನ್ನೂ ನಾನು ಲೆಕ್ಕಿಸಲಿಲ್ಲ. ಈ ಸಂದರ್ಭದಲ್ಲಿ ನಮ್ಮ ಪೂರ್ವಾಶ್ರಮದ ತಂದೆಯವರು ನಾನು ಯಾರಲ್ಲಿಯೂ ಪರಾಮರ್ಶಿಸದೆ ಆಗಾಗ ಕೈಗೊಳ್ಳುವ ನಿರ್ಧಾರಗಳನ್ನು ಪ್ರಶ್ನಿಸದೆ ಎಲ್ಲಾ ಆರ್ಥಿಕ ಜವಾಬ್ದಾರಿಯನ್ನು ತಾನು ವಹಿಸಿಕೊಂಡು ಬಹಳ ಕಷ್ಟಪಟ್ಟು ಎಲ್ಲವನ್ನೂ ನಿಭಾಯಿಸಿದ್ದಾರೆ. ಆಗಿನ ಸನ್ನಿವೇಶದಲ್ಲಿ ಯಾವ ಆದಾಯ ಮೂಲವೂ ಇಲ್ಲದೆ ಇದನ್ನು ಹೇಗೆ ನಿರ್ವಹಿಸಿದರು ಎಂಬುದೇ ನನಗೆ ಆಶ್ಚರ್ಯವಾಗುತ್ತಿದೆ. ಬೇರೆ ಬೇರೆ ಜನರಿಂದ ಇದಕ್ಕಾಗಿ ಸಾಲವನ್ನು ಪಡೆಯಲೂ ತುಂಬಾ ಪರಿಶ್ರಮ ವಹಿಸಬೇಕಾಗಿತ್ತು. ಅವರು ಇದನ್ನೆಲ್ಲಾ ಬಹಳ ಚೆನ್ನಾಗಿ ನಿರ್ವಹಿಸಿದರು. ಪರ್ಯಾಯದ ನಂತರ ಸ್ವಾತಂತ್ರ್ಯೋತ್ತರದ ರೈತ ಜಾಗೃತಿಯ ಪರಿಣಾಮವಾಗಿ ಸರಿಯಾಗಿ ಗೇಣಿ ವಸೂಲಿಯಾಗದಿದ್ದರೂ ಈ ಸಾಲವನ್ನು ಪರಿಹಾರ ಮಾಡಲು ತುಂಬಾ ಪರಿಶ್ರಮ ಪಟ್ಟಿದ್ದಾರೆ. ಅವರ ಈ ಸೇವೆಯೂ ಅವಿಸ್ಮರಣೀಯ. ಅವರೂ ಸರಳ, ನಿರಾಡಂಬರ ಜೀವನವನ್ನೇ ನಡೆಸಿದ್ದಾರೆ. ತಮ್ಮ ಅಧಿಕಾರದ ಅವಧಿಯಲ್ಲಿ ಅಧಿಕಾರವನ್ನು ದುರುಪಯೋಗಿಸಿ ತನಗಾಗಿ ಏನೂ ಆಸ್ತಿ; ಸಂಪತ್ತನ್ನೂ ಮಾಡಿಕೊಳ್ಳಲಿಲ್ಲ. ಮಠದ ಸೇವೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ.

ನಾನು ಬಾಲ್ಯದಲ್ಲಿ ನಮ್ಮ ಹಳ್ಳಿಯ ಎಲಿಮೆಂಟರಿ ಶಾಲೆ ನಂತರ ನಮ್ಮ ತಾಯಿಯ ಹಳ್ಳಿಯ ಎಲಿಮೆಂಟರಿ ಶಾಲೆಗೆ ಹೋಗುತ್ತಿದ್ದೆ. ಆಗ ಬಸ್, ಕಾರ್‌ಗಳೆಂದರೆ ನಮಗೆ ಬಹಳ ಅಚ್ಚರಿ. ನಮ್ಮ ಶಾಲೆಯ ಎದುರಿನ ರಸ್ತೆಯಲ್ಲಿ ಒಬ್ಬ ಶ್ರೀಮಂತರ ಕಾರು ಹೋಗಲಿದೆಯೆಂದು ತಿಳಿದುಬಂದರೆ ಅಧ್ಯಾಪಕರೂ, ವಿದ್ಯಾರ್ಥಿಗಳೂ ಎಲ್ಲರೂ ಸೇರಿ ಶಾಲೆಗೆ ರಜೆ ಕೊಟ್ಟು ಶಾಲೆ ಹೊರಗೆ ನಿಂತು ಕಾರು ಬರುವುದನ್ನು ಕಾಯುತ್ತಿದ್ದರು. ಆಗ ನಾನು ಏನು ಕಲಿಯುತ್ತಿದ್ದೆನೆಂದು ನನಗೆ ಜ್ಞಾಪಕವಿಲ್ಲ. ಅಂತೂ ಶಾಲೆಗೆ ಪ್ರತಿದಿನವೂ ತಪ್ಪದೆ ಹೋಗುತ್ತಿದ್ದೆ. ಅನಂತರ ಉಡುಪಿಯ ಮೈನ್ ಶಾಲೆಯಲ್ಲಿ ೧೯೩೭-೩೮ರಲ್ಲಿ ಕೆಲವು ಸಮಯ ಅಭ್ಯಾಸ ಮಾಡಿದ್ದೆ. ಆಗ ನನ್ನ ಜೊತೆಗೆ ಯಾರು ಕಲಿಯುತ್ತಿದ್ದರೆಂಬುದು ನನಗೆ ಜ್ಞಾಪಕವಿಲ್ಲ. ನಂತರ ೧೯೩೮ರಲ್ಲಿ ರಾಮಕುಂಜದ ಸಂಸ್ಕೃತ ಶಾಲೆಯಲ್ಲಿ ೨ನೇ ತರಗತಿ ಕಲಿಯುತ್ತಿದ್ದೆ. ೧೯೩೮ ನವಂಬರ್‌ದಲ್ಲಿ ಶಾಲೆಯನ್ನು ತೊರೆದು ಡಿಸೆಂಬರ್‌ನಲ್ಲಿ ಹಂಪಿಗೆ ಬಂದು ಸನ್ಯಾಸವನ್ನು ಸ್ವೀಕರಿಸಿದೆ .

ಬಾಲ್ಯದ ಕೆಲವು ಘಟನೆಗಳು

ಅಸ್ಪೃಶ್ಯತೆಯ ಬಗ್ಗೆ ನನಗೆ ಬಾಲ್ಯದಿಂದಲೇ ಪ್ರಶ್ನೆಗಳು ಏಳುತ್ತಿದ್ದವು. ನಾನು ಹಳ್ಳಿಯಲ್ಲಿ ಶಾಲೆಗೆ ಹೋಗುತ್ತಿರುವಾಗ ಬಿಲ್ಲವರ ಹುಡುಗರೂ, ಬೇರೆ ಹುಡುಗರೂ ಜೊತೆಗೆ ಇರುತ್ತಿದ್ದರು. ದಾರಿಯಲ್ಲಿ ಹೋಗುವಾಗ ಬಿಲ್ಲವ ಹುಡುಗನನ್ನು ನಾನು ಮುಟ್ಟುವುದುಂಟು. ಬಿಲ್ಲವನಾದ ತನ್ನನ್ನು ಮುಟ್ಟಿದ್ದ ವಿಷಯವನ್ನು ನನ್ನ ಮನೆಯವರಿಗೆ ತಿಳಿಸುತ್ತೇನೆಂದು ಅವನು ಹೆದರಿಸುತ್ತಿದ್ದ. ಆಗ ನಾನು ಉದ್ದೇಶಪೂರ್ವಕವಾಗಿ ಅವನನ್ನು ಮುಟ್ಟುತ್ತಿದ್ದೆ.

ನಾನು ಚಿಕ್ಕ ಹುಡುಗನಾಗಿದ್ದಾಗ ನಮ್ಮ ಮನೆಯಲ್ಲಿ ಒಮ್ಮೆ ಕೆರೆಗೆ ಬಿದ್ದು ಮುಳುಗಿದೆ. ನಮ್ಮ ತಂದೆಯವರು ಕೆರೆಯಿಂದ ತುಸು ದೂರದಲ್ಲಿ ಇದ್ದರು. ನನ್ನ ಪೂರ್ವಾಶ್ರಮದ ಅಕ್ಕನೂ ಚಿಕ್ಕವಳಾಗಿದ್ದರಿಂದ ನನ್ನನ್ನು ಮೇಲೆತ್ತಲು ಸಾಧ್ಯವಾಗದೆ ಬೊಬ್ಬಿಡುತ್ತಿದ್ದರು. ನಾನು ನೀರಲ್ಲಿ ಪೂರ್ಣವಾಗಿ ಮುಳುಗಿದ್ದೇನೆ. ಉಸುರುಗಟ್ಟಿದೆ, ಕೆರೆಯ ಪಕ್ಕದ ಗುಡಿಸಲಲ್ಲಿ ಹರಿಜನ ಕುಟುಂಬವು ವಾಸಿಸುತ್ತಿತ್ತು. ಅಲ್ಲಿಯ ಯಜಮಾನನು, ಹಿರಿಯನೂ, ನಮ್ಮ ಮನೆಯ ನಿತ್ಯ ಕೆಲಸಗಾರನೂ ಆಗಿದ್ದ. ಅವನು ಮುಳುಗಿದ

ನನ್ನನ್ನು ಎತ್ತಬಲ್ಲನು. ಆದರೆ ಅಸ್ಪೃಶ್ಯತೆಯ ಕಟ್ಟುನಿಟ್ಟಿನಿಂದಾಗಿ ಕೆರೆಗೆ ಹಾರಿ ನನ್ನನ್ನು ಮುಟ್ಟಿ ಎತ್ತಬಹುದೇ ಎಂದು ಭಯ, ಸಂಕೋಚ. ನನ್ನ ಪ್ರಾಣಾಂತಿಕ ಸ್ಥಿತಿಯಲ್ಲಿ ನನ್ನನ್ನು ಮೇಲೆತ್ತಲೂ ಸಾಧ್ಯವಾಗದೆ ಸುಮ್ಮನೆ ಇರಲೂ ಸಾಧ್ಯವಾಗದೆ ಬೊಬ್ಬಿಡುತ್ತಿದ್ದನು. ಆಮೇಲೆ ತಂದೆಯವರು ಓಡಿಬಂದು ಎತ್ತಿ ನನ್ನ ಪ್ರಾಣ ಉಳಿಯುವಂತಾಯಿತು. ಆಗಲೇ ಆ ಚಿಕ್ಕ ವಯಸ್ಸಿನಲ್ಲಿಯೇ ನನ್ನಲ್ಲಿ ಈ ಪ್ರಶ್ನೆ ಕಾಡಿತ್ತು. ಹರಿಜನರು ಯಾಕೆ ಅಸ್ಪೃಶ್ಯರು? ನಮ್ಮ ಪೂರ್ವಾಶ್ರಮದ ಸಂಬಂಧಿಯೊಬ್ಬರನ್ನು ಎಲ್ಲರೂ ಬಾಲ್ಯದ ಉಪನಾಮವಾಗಿ 'ಕೊರಗ' ಎಂದೇ ಕರೆಯುತ್ತಿದ್ದರು. ನಾನು ನನ್ನ ೭-೮ರ ವಯಸ್ಸಿನಲ್ಲಿಯೇ 'ಮನೆಯೊಳಗೆ ಒಬ್ಬರು ಕೊರಗರು ಇರುವುದಾದರೆ ಉಳಿದ ಕೊರಗರೂ ಮನೆಯೊಳಗೆ ಏಕೆ ಇರಬಾರದು'? ಎಂಬುದಾಗಿ ಎಲ್ಲರನ್ನೂ ಪ್ರಶ್ನಿಸುತ್ತಿದ್ದೆ. ಹೀಗೆ ನಮ್ಮ ಸಮಾಜದ ಒಂದು ವರ್ಗವನ್ನು ಅಸ್ಪೃಶ್ಯರನ್ನಾಗಿ ನೋಡುವ ಬಗ್ಗೆ ಬಾಲ್ಯದಲ್ಲಿಯೇ ನನ್ನಲ್ಲಿ ಪ್ರಶ್ನೆಗಳು ಕಾಡುತ್ತಿದ್ದವು.

ನಾನು ಪೀಠಾಧಿಪತಿಯಾದ ಮೇಲೆ ಕೆಲ ವರ್ಷಗಳ ನಂತರ ನಮ್ಮ ಪೇಜಾವರ ಗ್ರಾಮದ ಮಠದಲ್ಲಿ ರೈತರ ಜೊತೆಗೆ ಗೇಣಿ ವಸೂಲಿ ಮತ್ತು ಇತರ ಸಮಸ್ಯೆಗಳ ಬಗ್ಗೆ ಮಾತಾಡುತ್ತಿದ್ದಾಗ ಎಲ್ಲಾ ರೈತರೂ ಮಠದ ಒಳಗೆ ಚಾವಡಿಯಲ್ಲಿ ಕುಳಿತಿದ್ದರು. ಅದರಲ್ಲಿ ಕ್ರೈಸ್ತ ಮತ್ತು ಮುಸಲ್ಮಾನ ರೈತರೂ ಇದ್ದರು. ಹಿಂದೂ ರೈತರೂ ಇದ್ದರು. ಆದರೆ ಬಿಲ್ಲವ ರೈತರು ಚಾವಡಿಯ ಹೊರಗೆ ಕೈಮುಗಿದು ನಿಂತಿದ್ದರು. ನಾನು ಅವರನ್ನೂ ಒಳಗೆ ಬಂದು ಕುಳಿತುಕೊಳ್ಳಲು ಹೇಳಿದೆ. ಅವರು ಸಂಕೋಚಪಟ್ಟರು. ಆಗ ಅಲ್ಲಿದ್ದ ಉಳಿದ ರೈತರು ಕ್ರೈಸ್ತ, ಮುಸಲ್ಮಾನರೂ ಸೇರಿ ಸಹಜವಾಗಿ ''ಅವರು ಒಳಗೆ ಬರುವ ಜಾತಿಯವರಲ್ಲ'' ಎಂದರು. ಇದನ್ನು ಕೇಳಿದಾಗ ನನಗೆ ತುಂಬಾ ಇರಿಸುಮುರುಸಾಯಿತು. ಹಿಂದೂ ಧರ್ಮಕ್ಕೆ ಸೇರಿದ ಕೆಲವು ವರ್ಗದವರನ್ನು ಹಿಂದೂ ಪೀಠಾಧಿಪತಿಗಳ ಎದುರಿಗೇ ಅವರು ಒಳಗೆ ಬರುವವರಲ್ಲವೆಂದು ಇತರ ಮತೀಯರು ಹೇಳುವುದೆಂದರೆ ಇದು ಹಿಂದೂ ಧರ್ಮದ ದೌರ್ಬಲ್ಯ ಮತ್ತು ಅವಮಾನವೆಂದು ಭಾವಿಸಿದೆ. ಕೂಡಲೇ 'ಅಂತಹ ಯಾವ ನಿರ್ಬಂಧವೂ ಇಲ್ಲ, ಬಿಲ್ಲವ ರೈತರೂ ಒಳಗೆ ಬರಬಹುದೆಂದು' ಹೇಳಿ ಅವರನ್ನು ಒಳಗೆ ಕರೆಸಿದೆ. ಆಗ ಬಿಲ್ಲವರನ್ನು ಅಸ್ಪೃಶ್ಯರಂತೆ ನೋಡುತ್ತಿದ್ದರು. ಬಿಲ್ಲವರನ್ನೂ ಉಳಿದವರಂತೆ ನೋಡಬೇಕೆಂದು ಎಲ್ಲಾ ಕಡೆ ಹೇಳಿ ಎಲ್ಲಾ ಕಡೆ ಅವರಿಗೆ ಅವಕಾಶ ಕೊಡಿಸಲು ಪ್ರಾರಂಭಿಸಿದೆ. ಈಗಂತೂ ಬಿಲ್ಲವರು ಇಡೀ ಹಿಂದೂ ಸಮಾಜದಲ್ಲಿ ಎಲ್ಲರ ಜೊತೆಗೆ ಪೂರ್ಣವಾಗಿ ಸೇರಿಕೊಂಡಿದ್ದಾರೆ.

ಬಾಲ್ಯದ ನೆನಪು

ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಚಿಕ್ಕ ಮಗುವಾಗಿದ್ದಾಗಿನ ನೆನಪುಗಳನ್ನು ಹೇಳುವುದಾದರೆ ಇನಾಕ್ಯುಲೇಷನಿಗಾಗಿ ನನ್ನನ್ನು ತಾಯಿ ಎತ್ತಿಕೊಂಡು ಹೋಗುತ್ತಿದ್ದಾಗ ಇನಾಕ್ಯುಲೇಷನಿಗೆ ಹೆದರಿ ಜೋರಾಗಿ ಅಳುತ್ತಾ ರಂಪಾಟ ಮಾಡಿಕೊಂಡು ಹೋದದ್ದು ನೆನಪಿದೆ. ಊಟ ಮಾಡುವಾಗ ನನಗೆ ಬೇಡವಾದ ಖಾರದ ತಿಂಡಿಯನ್ನು ಎಲೆಗೆ ಹಾಕಿದಾಗ ಸಿಟ್ಟಿನಿಂದ ಅದನ್ನು ತೆಗೆದು ಅಕ್ಕಪಕ್ಕಕ್ಕೆ ಎಸೆದಾಗ ಮಗುವಾಗಿದ್ದರಿಂದ ಯಾರೂ ನನ್ನನ್ನು ಶಿಕ್ಷಿಸದಿದ್ದರೂ ಹೀಗೂ ನೀನು ಮಾಡುವುದೇ? ಎಂದು ಎಲ್ಲರೂ ಆಶ್ಚರ್ಯ, ಅಸಮಾಧಾನ ವ್ಯಕ್ತಪಡಿಸಿದಾಗ ನನ್ನ ಅತಿರೇಕದ ವರ್ತನೆಗಾಗಿ ನನ್ನ ಬಗ್ಗೆಯೇ ಸಂಕೋಚ, ಪಶ್ಚಾತ್ತಾಪಪಟ್ಟದ್ದು ನೆನಪಿದೆ.

ಉಡುಪಿಯ ಮೈನ್ ಶಾಲೆಯಲ್ಲಿ ಒಂದನೇ ತರಗತಿಯಲ್ಲಿ ಕಲಿಯುತ್ತಿದ್ದಾಗ ವಿರಾಮ ವೇಳೆಯಲ್ಲಿ ಕ್ಲಾಸಿನ ಕರಿಬೋರ್ಡಿನಲ್ಲಿ ಏನೋ ಅವಾಚ್ಯವನ್ನು ಬರೆದಿದ್ದರ ಬಗ್ಗೆ ಅಧ್ಯಾಪಕರು ಹಾಗೆ ಬರೆದವರನ್ನು ಕಂಡುಹಿಡಿಯಲು ಪ್ರಯತ್ನಿಸಿ ವಿಫಲರಾದರು. ''ನಾನು ಇದನ್ನು ಮಾಡಿಲ್ಲ''ವೆಂದು ಹೇಳಿದೆ. ನನ್ನ ಮೇಲೆ ತನಗೇನೂ ಸಂಶಯವಿಲ್ಲವೆಂದು ಅಧ್ಯಾಪಕರು ಹೇಳಿದರು. ನಾನು ಸಾಧು

ಸ್ವಭಾವದವನೆಂದು ಅವರು ಭಾವಿಸಿದ್ದರು. ಆದರೆ ಯಾರು ತಪ್ಪಿತಸ್ಥರೆಂದು ತಿಳಿಯಲು ಸಾಧ್ಯವಾಗದೆ ಕ್ಲಾಸಿನಲ್ಲಿದ್ದ ಎಲ್ಲಾ ಹುಡುಗರುಗಳ ಕೈಗೆ ಬೆತ್ತದಿಂದ ಪೆಟ್ಟು ಕೊಡುತ್ತಾ ನಾನು ತಪ್ಪಿತಸ್ಥನಲ್ಲವೆಂದು ಅಧ್ಯಾಪಕರಿಗೆ ಗೊತ್ತಿದ್ದರೂ ಎಲ್ಲರ ಜೊತೆಗೆ ಅವರಿಂದ ಮೃದುವಾದ ಪೆಟ್ಟನ್ನು ತಿಂದಿದ್ದೇನೆ. ಇದೊಂದೇ ನಾನು ಜೀವನದಲ್ಲಿ ಇನ್ನೊಬ್ಬರಿಂದ ಹೊಡೆಸಿಕೊಂಡದ್ದು.

ಬಾಲ್ಯದಲ್ಲಿ ಬಯಲಾಟಕ್ಕೆ ಹೋದಾಗ ಅಲ್ಲಿಯ ಶೂರ್ಪಣಖೆಯ ವೇಷ ಮತ್ತು ಆರ್ಭಟವನ್ನು ನೋಡಿ ಹೆದರಿದ್ದು ನಂತರ ರಾವಣನು ಬರಲಿಕ್ಕಿದ್ದಾನೆಂದು ಅಕ್ಕಪಕ್ಕದ ಹುಡುಗರಿಂದ ಕೇಳಿ ತಿಳಿದು ಹೆದರಿ ರಂಪಾಟವಾಡಿ ಆಟವನ್ನು ಬಿಟ್ಟು ನನ್ನ ವಸತಿಗೆ ತಿರುಗಿ ಬಂದು ಮಲಗಿದಾಗ ಆಟದ ಚೆಂಡೆ, ಗಂಟೆಗಳ ಶಬ್ದವನ್ನು ದೂರದಿಂದ ಕೇಳಿ ಆಟವನ್ನು ಬಿಟ್ಟು ಬಂದೆನಲ್ಲಾ ಎಂದು ಪಶ್ಚಾತ್ತಾಪ ಪಟ್ಟದ್ದು, ಇದೆಲ್ಲಾ ಜ್ಞಾಪಕವಿದೆ. ''ಸದಾರಮೆ'' ನಾಟಕದ ಪ್ರದರ್ಶನವು ಆಗ ಅತ್ಯಂತ ಜನಪ್ರಿಯವಾಗಿತ್ತು. ಮನೆಯವರ ಜೊತೆಗೆ ನಾನೂ ಹೋಗುವುದಿತ್ತು. ನನಗೂ ನಾಟಕ ನೋಡಲು ಕುತೂಹಲವಿದ್ದರೂ ಆ ನಾಟಕದಲ್ಲಿ ಕಳ್ಳನ ಪ್ರವೇಶವಿದೆಯೆಂಬುದನ್ನು ಕೇಳಿ ಕಳ್ಳನೆಂದರೆ ಒಂದು ವಿಚಿತ್ರ ಭಯಂಕರ ಪ್ರಾಣಿಯೆಂದು ತಿಳಿದು ಹೆದರಿ ಅತ್ತು ಗದ್ದಲ ಮಾಡಿ ಆ ನಾಟಕಕ್ಕೆ ಹೋಗುವುದೇ ರದ್ದಾಗುವಂತೆ ಮಾಡಿದೆ.

ನಾನು ಉಡುಪಿಯಲ್ಲಿ ಹಾಗೂ ಅದಕ್ಕಿಂತ ಎಲಿಮೆಂಟರಿ ಶಾಲೆಗಳಲ್ಲಿ ಕಲಿಯುತ್ತಿದ್ದಾಗ ನನ್ನ ಜೊತೆಗಿದ್ದ ಯಾವ ಗೆಳೆಯರ ನೆನಪೂ ನನಗೀಗ ಇಲ್ಲ. ಆದರೆ ರಾಮಕುಂಜದ ಸಂಸ್ಕೃತ ಶಾಲೆಯಲ್ಲಿ ಕಲಿಯುತ್ತಿದ್ದಾಗ ನನ್ನ ತರಗತಿಯಲ್ಲಿ ಬರೇ ಐದು (೫) ಜನರಿದ್ದುದರಿಂದ ಅವರ ನೆನಪು ನನಗೆ ಚೆನ್ನಾಗಿದೆ. ಆದರೆ ಹೇಳಿಕೊಳ್ಳುವಂತಹ ವಿಶೇಷ ಘಟನೆಗಳೇನೂ ಇಲ್ಲ.

ನನಗೆ ಬಾಲ್ಯದಲ್ಲಿಯೇ ಯತಿಯಾಗುವ ಕಲ್ಪನೆಯಿತ್ತು. ನನ್ನ ಗುರುಗಳಾದ ವಿಶ್ವಮಾನ್ಯ ತೀರ್ಥರನ್ನು ಅವರ ಪರ್ಯಾಯದಲ್ಲಿಯೂ ಅದಕ್ಕಿಂತ ಮುಂಚೆ ನಮ್ಮ ಊರಿಗೆ ಬಂದಾಗಲೂ ನೋಡಿದ್ದೆ. ಅವರು ಯಾವಾಗಲೂ ಹಸಿರುಬಣ್ಣದ ಶಾಲು ಹಾಕಿಕೊಳ್ಳುತ್ತಿದ್ದರು. ನಾನು ಹಸಿರು ಬಣ್ಣದ ಶಾಲನ್ನೋ, ಸೀರೆಯನ್ನೋ ಹೊದ್ದುಕೊಂಡು ನಾನು ಪೇಜಾವರ ಸ್ವಾಮಿಗಳೆಂದು ನಟಿಸುತ್ತಿದ್ದೆ. ಉಳಿದ ಹುಡುಗರು ನನಗೆ ಸಹಾಯ ಮಾಡುತ್ತಿದ್ದರು. ನಾನು ಅನೇಕ ಆರತಿಗಳಿಂದ ದೇವರ ಪೂಜೆಯ ನಾಟಕವಾಡುತ್ತಿದ್ದೆ. ಎಲ್ಲರಿಗೂ ತೀರ್ಥವನ್ನು ಕೊಡುವಂತೆ ನಟಿಸುತ್ತಿದ್ದೆ. ನಾನು ಮುಂದೆ ಪೇಜಾವರ ಸ್ವಾಮಿಗಳೇ ಆಗುವಾಗ ಭಾರೀ ಆಶ್ಚರ್ಯ ಕಾದಿತ್ತು.

ನಾನು ಬಾಲ್ಯದಲ್ಲಿ ಸ್ವಾಮಿಗಳಿಗೆ ಭಾರೀ ಹೆದರುತ್ತಿದ್ದೆ. ಸ್ವಾಮಿಗಳು ಬಂದರೆ ನಾನು ದೂರ ಓಡುತ್ತಿದ್ದೆ. ದೊಡ್ಡ ದೊಡ್ಡ ಪೆಟ್ಟಿಗೆಗಳ ಅಡ್ಡದಲ್ಲಿ ಅಡಗುತ್ತಿದ್ದೆ. ನಮ್ಮ ಊರಿನ ಮೂಲಮನೆಯಲ್ಲಿ ನಮ್ಮ ಗುರುಗಳ ಪರ್ಯಾಯ ಪೂರ್ವಭಾವಿ ಭಿಕ್ಷೆ ನಡೆದ ಸಂದರ್ಭದಲ್ಲಿ ನಾನಿದ್ದ ಕೋಣೆಯ ಒಳಗೆ ದಂಡ ಸಮೇತವಾಗಿ ಅವರು ಪ್ರವೇಶಿಸಿದಾಗ ಹೆದರಿಕೆಯಿಂದ ಸ್ತಂಭೀಭೂತನಾಗಿ ಏನು ಮಾಡಬೇಕೆಂದು ತೋರದವನಾದೆ. ಒಮ್ಮೆ ಅದೇ ಸಂದರ್ಭದಲ್ಲಿ ಒಂದು ಮನೆಯಲ್ಲಿ ಸಂಜೆ ಅನೇಕರ ಜೊತೆಗೆ ಕುಳಿತುಕೊಂಡು ಲೋಕಾಭಿರಾಮವಾಗಿ ನಮ್ಮ ಗುರುಗಳು ಮಾತಾಡುತ್ತಿದ್ದಾಗ ದೂರದಲ್ಲಿ ನಿಂತು ನೋಡುತ್ತಿದ್ದೆ. ಅವರು ಖರ್ಜೂರ ತೋರಿಸಿ ನನ್ನನ್ನು ಹತ್ತಿರ ಕರೆದರು. ನಾನು ಖರ್ಜೂರದ ಆಸೆಯಿಂದ ಹೆದರಿಕೆಯಿದ್ದರೂ ತುಸು ತುಸು ಅವರ ಸಮೀಪಕ್ಕೆ ಬಂದೆ. ತತ್‌ಕ್ಷಣ ಅವರು ನನ್ನ ಕೈಹಿಡಿದು ಎಳೆದುಕೊಂಡು ತೊಡೆಯ ಮೇಲೆ ಕುಳ್ಳಿರಿಸಿಕೊಂಡರು. ನಾನು ಹೆದರಿ ಮೈಯೆಲ್ಲಾ ಬೆವೆತು ಹೋಯಿತು. ಅವರು ಕೊಟ್ಟ ಖರ್ಜೂರ ತೆಗೆದುಕೊಂಡು ಹೇಗೋ ತಪ್ಪಿಸಿಕೊಂಡು ಓಡಿಹೋದೆ. ನಂತರ ಉಡುಪಿಯಲ್ಲಿಯೂ ಸ್ವಾಮಿಗಳೆಂದರೆ ಹೆದರಿ ಅವರ ಸಮೀಪವೇ ಹಾಯುತ್ತಿರಲಿಲ್ಲ. ನಾನೇ ಸ್ವಾಮಿಯಾಗುವೆನೆಂದು ತಿಳಿದಾಗ ನನಗೆ ಎಂತಹ ಆಶ್ಚರ್ಯ, ಸಂಭ್ರಮ ಆಗಿರಬಹುದು.

ನಮ್ಮ ಗುರುಗಳು ಸ್ವಾತಂತ್ರ್ಯ ಚಳುವಳಿಗೆ ತುಂಬಾ ಬೆಂಬಲ ನೀಡುತ್ತಿದ್ದರು. ಗಾಂಧೀಜಿಯವರಲ್ಲಿಯೂ ಅವರಿಗೆ ತುಂಬಾ ಅಭಿಮಾನ. ಮಿಲ್ ಬಟ್ಟೆಗಳನ್ನು ಸುಡುವ ಕಾರ್ಯದಲ್ಲಿಯೂ ನೇತೃತ್ವ ವಹಿಸುತ್ತಿದ್ದರು. ಅವರು ಪೀಠತ್ಯಾಗವನ್ನು ಮಾಡುವ ನಿರ್ಧಾರವನ್ನೂ ಮಾಡಿದ್ದರು. ಇದೆಲ್ಲಾ ನನಗೆ ನಂತರ ತಿಳಿದಿದ್ದು. ಗಾಂಧೀಜಿಗೆ ಪತ್ರವನ್ನು ಬರೆದು ಅವರ ಸಲಹೆಯನ್ನು ಪಡೆದಿದ್ದರಂತೆ. ಅದರಂತೆ ಸನ್ಯಾಸಕ್ಕೆ ವಟುವನ್ನು ಆರಿಸಲು ಮಠದ ಮುಖ್ಯಾಧಿಕಾರಿಗಳಾಗಿ ಅವರು ನೇಮಿಸಿದ್ದ ನಮ್ಮ ಚಿಕ್ಕ ತಂದೆ ನರಸಿಂಹಾಚಾರ್ಯರಿಗೆ ತಿಳಿಸಿದ್ದರು. ಅವರಿಗೆ ಮಕ್ಕಳಿರಲಿಲ್ಲ. ತನ್ನ ಅಣ್ಣನ ಮಗನಾದ ನನ್ನನ್ನೇ ಆರಿಸಿದರು. ಶ್ರೀಮಧ್ವಾಚಾರ್ಯರ ಪೀಠವನ್ನು ಏರಲು ಕಾರಣರಾದ ನರಸಿಂಹಾಚಾರ್ಯರಿಗೆ ನಾನು ಕೃತಜ್ಞನಾಗಿರಬೇಕಾಗಿದೆ. ಅಂತೂ ನನ್ನ ಆಯ್ಕೆಯಾಯಿತು. ನನ್ನ ಜಾತಕವನ್ನೂ ನನ್ನ ಗುರುಗಳು ಪರಿಶೀಲಿಸಿದ್ದಾರೆಂದು ನಂತರ ನನಗೆ ತಿಳಿದುಬಂದಿದೆ. ಎಂಟರ ವಯಸ್ಸಿನ ನನಗೆ ಮಠದ ಆಸ್ತಿ, ಸಂಪತ್ತು, ಭಕ್ತರ ಪೂಜೆ, ಕಾಣಿಕೆಗಳ ಕಲ್ಪನೆಯೇ ಇರಲಿಲ್ಲ. ನಾನು ವೈಭವದಿಂದ ದೇವರ ಪೂಜೆಯನ್ನು ಮಾಡಬಹುದೆಂಬುದೇ ನನ್ನ ಸಂತೋಷಕ್ಕೆ ಕಾರಣವಾಗಿತ್ತು. ನನ್ನನ್ನು ಕರೆದುಕೊಂಡು ಹೋಗಿ ಕಣ್ವತೀರ್ಥದಲ್ಲಿ ಉಪನಯನವೂ ಅವಸರದಲ್ಲಿ ನಡೆಯಿತು. ಕೆಲವೇ ದಿನಗಳಲ್ಲಿ ಸಂಧ್ಯಾವಂದನೆ, ಜಪಮಂತ್ರಗಳನ್ನು ಕಲಿತೆ. ಅಗ್ನಿಕಾರ್ಯ ಮಾಡುತ್ತಿದ್ದೆ. ಆಗ ನನಗೆ ಸನ್ಯಾಸ ದೀಕ್ಷೆಯನ್ನು ಕೊಡುವ ವಿಚಾರವನ್ನು ತಿಳಿಸಲಾಯಿತು. ನನ್ನನ್ನು ಕಾರಿನಲ್ಲಿ ಬಳ್ಳಾರಿಗೆ ಕರೆದುಕೊಂಡು ಹೋದರು. ಅಲ್ಲಿಂದ ಹಂಪಿಗೆ ಹೋದೆವು. ಅಲ್ಲಿ ನಮ್ಮ ಗುರುಗಳು ಬಂದಿದ್ದರು. ಅವರು ಸನ್ಯಾಸವನ್ನು ನೀಡಬೇಕಾದರೆ ಸನ್ಯಾಸವನ್ನು ಕೊಡುವಂತೆ ಅವರನ್ನು ಮುಖತಃ ಕೇಳಿಕೊಳ್ಳಬೇಕೆಂದು ನನ್ನನ್ನು ಎಲ್ಲರೂ ಪುಸಲಾಯಿಸಿದ್ದರು. ಸ್ವಾಮಿಗಳೆಂದರೆ ನನಗೆ ತುಂಬಾ ಭಯವೆಂದು ಈಗಾಗಲೇ ಹೇಳಿದ್ದೇನೆ. ನಾನು ಸನ್ಯಾಸದ ಆಶೆಯಿಂದ ನನ್ನ ಎಲ್ಲಾ ಶಕ್ತಿಯನ್ನು ಒಗ್ಗೂಡಿಸಿ ಬಹಳ ಧೈರ್ಯ ಮಾಡಿ ಸನ್ಯಾಸ ನೀಡಬೇಕೆಂದು ಕೇಳಿದೆ. ಆಗ ಅವರು ನಗುತ್ತಾ 'ನನ್ನನ್ನು ನೋಡಿದಾಗ ಹೆದರಬಾರದು. ನನ್ನ ಜೊತೆಗೆ ಚೆನ್ನಾಗಿ ಮಾತಾಡಬೇಕು' ಎಂದು ಶರ್ತ ಹಾಕಿದರು. ನಾನು ಧೈರ್ಯ ಮಾಡಿ ಅದಕ್ಕೆ ಒಪ್ಪಿದೆ. ನಂತರ ಗುರುರಾಜ ಉಪಾಧ್ಯಾಯರೋ, ಅನಂತರಾಮ ಉಪಾಧ್ಯಾಯರೋ ಅವರ ಹೆಸರು ಸರಿಯಾಗಿ ನನಗೆ ನೆನಪಿಲ್ಲ. ಒಳ್ಳೇ ಆಕರ್ಷಕ ವ್ಯಕ್ತಿತ್ವದ ಅಜಾನುಬಾಹುವಾದ ಪುರೋಹಿತರ ನೇತೃತ್ವದಲ್ಲಿ ನನ್ನ ಸನ್ಯಾಸಕ್ಕೆ ಸಂಬಂಧಿಸಿದ ವಿಧಿವಿಧಾನಗಳು ನಡೆದವು. ನನ್ನ ಹೊಸ ಹೆಸರು ''ವಿಶ್ವೇಶತೀರ್ಥ'' ಇದರ ಉಚ್ಚಾರಣೆ ಮಾಡಲೂ ಕೆಲ ದಿನಗಳವರೆಗೆ ಶ್ರಮವಾಯಿತು. ಆಶ್ರಮ ಸ್ವೀಕಾರವು ಮಾರ್ಗಶಿರ ದಶಮಿಯಲ್ಲಿ ಆಗಿದ್ದರೆ ದ್ವಾದಶಿಯಂದು ಭೋಜನದ ನಂತರ ನನ್ನ ಗುರುಗಳ ಜೊತೆಗೆ ಹಂಪೆಯ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲಾ ನೋಡಿದ್ದು ನನಗೆ ಜ್ಞಾಪಕವಿದೆ. ನಂತರ ದೇವರ ಪೆಟ್ಟಿಗೆಯನ್ನು ನನ್ನ ಸ್ವಾಧೀನ ನೀಡಿ ಅವರು ಶಿಷ್ಯರೊಬ್ಬರ ಜೊತೆಗೆ ಹೊರಟು ಹೋದರು. ನಮ್ಮ ಗುರುಗಳ ಅಜಾನುಬಾಹು ವ್ಯಕ್ತಿತ್ವ ತುಂಬಾ ಆಕರ್ಷಕವಾಗಿತ್ತು. ಅವರ ಬುದ್ಧಿಮತ್ತೆಯೂ ಅದ್ಭುತವಾಗಿತ್ತೆಂದು ಎಲ್ಲರೂ ಹೇಳುತ್ತಾರೆ. ಸನ್ಯಾಸದ ಮೊದಲು ಅವರು ವಿಧಿಸಿದ ಶರ್ತದಂತೆ ಅವರ ಜೊತೆಗೆ ನಂತರ ಮಾತಾಡಲು ಅವಕಾಶ ದೊರೆಯಲಿಲ್ಲ. ಅಲ್ಲಿಂದ ಹೊರಟ ಅವರನ್ನು ಮತ್ತೆ ನೋಡಲಿಲ್ಲ. ೧೦ ತಿಂಗಳ ನಂತರ ಅವರು ನಮ್ಮನ್ನೆಲ್ಲಾ ಅಗಲಿ ಹೋದರು.

ಸನ್ಯಾಸವನ್ನು ಸ್ವೀಕರಿಸಿದ ನಂತರ ಪ್ರಾರಂಭದ ಮೂರು ವರ್ಷಗಳನ್ನು ಪೇಜಾವರ ಗ್ರಾಮದಲ್ಲಿ ನಮ್ಮ ಮಠದಲ್ಲಿ ಕಳೆದೆನು. ಪೂಜೆ, ಜಪಗಳಿಗೆ ಸಂಬಂಧಿಸಿದ ಪಾಠಗಳು ಸಂಸ್ಕೃತದ ಆರಂಭದ ಪಾಠಗಳೂ ಅಲ್ಲೇ ನಡೆದವು. ಅಡ್ವೆ ವೇದವ್ಯಾಸಾಚಾರ್ಯರು ಈ ಎಲ್ಲ ಪಾಠಗಳ ಜವಾಬ್ದಾರಿಯನ್ನು ನಿರ್ವಹಿಸಿದರು. ಅವರು ಅತ್ಯಂತ ಆಸಕ್ತಿ ವಹಿಸಿ, ತಮ್ಮ ಪೂರ್ಣಕಾಲವನ್ನು ನನ್ನ ಅಧ್ಯಯನಕ್ಕೇ ಉಪಯೋಗಿಸಿ ವಿಶೇಷ ಶ್ರದ್ಧೆಯಿಂದ ಪಾಠವನ್ನು ನಡೆಸಿದ್ದಾರೆ. ಅಲ್ಲಿಯವರೆಗೆ ಬೆಳಿಗ್ಗೆ ಎದ್ದು ಒಲೆಯ ಬಳಿಯಲ್ಲಿ ಗಂಜಿ ತಯಾರಾಗುವವರೆಗೆ

ಹಸಿವೆಯಿಂದ ಹೊರಳಾಡಿಕೊಂಡು ಗಂಜಿ ಊಟ ಮಾಡುತ್ತಿದ್ದ ನಾನು ಆಶ್ರಮ ಸ್ವೀಕಾರವಾದ ಕೂಡಲೇ ಬೆಳಿಗ್ಗೆ ಏನನ್ನೂ ಸ್ವೀಕರಿಸದೆ ಅಧ್ಯಾಪಕರು ಹೇಳಿಕೊಟ್ಟ ಹಾಗೆ ದೀರ್ಘಕಾಲದವರೆಗೆ ಅಷ್ಟಮಹಾಮಂತ್ರ ಮೊದಲಾದವುಗಳನ್ನು ಜಪಿಸುತ್ತಿದ್ದಾಗ ಹಸಿವೆಯನ್ನು ತಾಳಲಾರದೆ ವಾಂತಿ ಮಾಡಿದ ಸಂದರ್ಭವೂ ಇತ್ತು. ಆಗ ದ್ವಿತೀಯ ಮಹಾಯುದ್ಧವು ಆರಂಭವಾಗಿತ್ತು. ನಮ್ಮ ದೇಶವನ್ನು ಆಳುತ್ತಿದ್ದ ಇಂಗ್ಲೆಂಡಿನ ಚಕ್ರವರ್ತಿಗಳು ನಮ್ಮನ್ನು ಆಳುವ ಅರಸರೆಂದು ಅವರ ಮೇಲೆ ಅಭಿಮಾನ ಬೆಳೆದಿತ್ತು. ಅಂತಹ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧವಾಗಿ ಜರ್ಮನಿಯು ಯುದ್ಧವನ್ನು ಆರಂಭಿಸಿದಾಗ ಬ್ರಿಟಿಷ್ ಸರಕಾರಕ್ಕೆ ಏನಾದರೂ ಸಹಾಯ ಮಾಡಬೇಕೆಂದು ನನ್ನ ಬಾಲಕ ಮನಸ್ಸಿಗೆ ಅನಿಸುತ್ತಿತ್ತು. ಆದರೆ ಜರ್ಮನ್ ಸೈನಿಕರ ಜೊತೆಗೆ ಯುದ್ಧವನ್ನಂತೂ ನನಗೆ ಮಾಡಲು ಸಾಧ್ಯವಿಲ್ಲ. ಆದರೆ ಯುದ್ಧದಲ್ಲಿ ಗಾಯಾಳುಗಳಾದ ಸೈನಿಕರಿಗೆ ಶುಶ್ರೂಷೆಯನ್ನು ಮಾಡಿಯಾದರೂ ನಾವು ಸಹಾಯ ಮಾಡಬಹುದಲ್ಲವೆ? ಅಂತಹ ಶುಶ್ರೂಷಾ ಪಥಿಕವನ್ನು ಮಾಡಿಕೊಂಡು ಯುದ್ಧಭೂಮಿಗೆ ಹೋಗೋಣವೆಂದು ಎಲ್ಲರ ಮುಂದೆ ನನ್ನ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೆ. ದಕ್ಷಿಣ ಕನ್ನಡ ಜಿಲ್ಲೆಯೆಲ್ಲಿ? ಇಂಗ್ಲೆಂಡ್ ಎಲ್ಲಿ? ಎಂಬುದೂ ನನ್ನ ಬಾಲಬುದ್ಧಿಗೆ ಹೊಳೆದಿರಲಿಲ್ಲ. ಗಾಯದ ನೋವಿನಲ್ಲಿ ನರಳುತ್ತಿರುವ ಸೈನಿಕರ ಶುಶ್ರೂಷೆಯನ್ನು ಮಾಡಿಯಾದರೂ ಈ ಯುದ್ಧದಲ್ಲಿ ಸಹಕರಿಸೋಣವೆನ್ನುವ ಭಾವನೆಯು ಮಾತ್ರವಿತ್ತು.

ಆದರೆ ಮುಂದೆ ಬ್ರಿಟಿಷರು ಅನ್ಯಾಯದಿಂದ ನಮ್ಮ ದೇಶವನ್ನು ಸ್ವಾಧೀನಪಡಿಸಿಕೊಂಡದ್ದೆಂಬ ವಿಚಾರವು ನನಗೆ ತಿಳಿದಾಗ ಬ್ರಿಟಿಷ್ ಆಳರಸರ ಮೇಲಿದ್ದ ಸಹಾನುಭೂತಿಯು ಮಾಯವಾಯಿತು. ಯುದ್ಧದಲ್ಲಿ ಜರ್ಮನಿಯು ವಿಜಯ ಪಥದಲ್ಲಿದ್ದಾಗ ಸಂತೋಷಗೊಳ್ಳಲು ಆರಂಭಿಸಿದೆ. ಜರ್ಮನಿ, ಜಪಾನ್‌ಗಳೆರಡೂ ಗೆದ್ದು ಬ್ರಿಟಿಷರ ಆಳ್ವಿಕೆಯು ಮುಕ್ತಾಯವಾಗಲಿ ಎಂದು ಆಶಿಸಲು ಆರಂಭಿಸಿದೆ. ಜಪಾನ್ ಪಡೆಯು ಮಣಿಪುರದ ವರೆಗೆ ಬಂದಾಗ ನನಗೆ ಬಹಳ ಸಂತೋಷವೇ ಆಗಿತ್ತು. ಸುಭಾಷಚಂದ್ರ ಭೋಸರ ಬಗ್ಗೆ ವಿಶೇಷ ಅಭಿಮಾನ ಬೆಳೆದಿತ್ತು. ಮುಂದೆ ಜರ್ಮನ್, ಜಪಾನಗಳೆರಡೂ ಸೋತಾಗ ಬ್ರಿಟಿಷ್ ಆಳ್ವಿಕೆಯು ನಮ್ಮ ನಾಡಿನಲ್ಲಿ ಮುಂದುವರಿಯುತ್ತಿದೆಯೆಂದು ನನಗೆ ಬೇಸರವೇ ಆಯಿತು. ಹಿರೋಶಿಮಾ, ನಾಗಾಸಾಕಿಗಳಲ್ಲಿ ಅಣುಬಾಂಬ್ ಪ್ರಯೋಗ ಮಾಡಿದಾಗಲಂತೂ ನನಗೆ ತುಂಬ ಕೋಪ, ಅಸಮಾಧಾನಗಳುಂಟಾದವು.

೧೯೪೨ರ ಕ್ವಿಟ್ ಇಂಡಿಯಾ ಚಳವಳಿಯೂ ನನ್ನ ನೆನಪಿನಲ್ಲಿದೆ. ಕೃಷ್ಣಮಠದ ಪೂಜೆ ಮುಗಿಸಿ ಹೊರಬಂದಾಗ ಗಾಂಧೀಜಿ ದಸ್ತಗಿರಿಯಾದ ಸುದ್ದಿ ತಲುಪಿತು. ಬ್ರಿಟಿಷರ ಬಗ್ಗೆ ನನಗೆ ತೀವ್ರ ಅಸಮಾಧಾನವಾಯಿತು. ಅಂದು ಎಲ್ಲ ಕಡೆ ಸ್ವಯಂ ಪ್ರೇರಣೆಯ ಪೂರ್ಣ ಹರತಾಳ ನಡೆಯಿತು. ಸಂಜೆ ಗಾಂಧೀಜಿಯ ಬಂಧನವನ್ನು ಪ್ರತಿಭಟಿಸಿ ಭಾರೀ ಮೆರವಣಿಗೆಯು ನಡೆಯಿತು. ವಿದ್ಯಾರ್ಥಿಗಳೂ ನಾಗರಿಕರೂ ವಿಶೇಷ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಸ್ವಾತಂತ್ರ್ಯ ಚಳವಳಿಯ ಬಗ್ಗೆ ನನಗೆ ಪೂರ್ಣ ಸಹಾನುಭೂತಿಯಿದ್ದುದರಿಂದ ಈ ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ನನಗೆ ಅತ್ಯಂತ ತವಕವಿತ್ತು. ನಾನು ಬರೇ ೧೨ ವಯಸ್ಸಿನವನಾದುದರಿಂದ ಮಠದ ಕಟ್ಟುನಿಟ್ಟನ್ನು ಭೇದಿಸಿ ಆ ಸತ್ಯಾಗ್ರಹದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅದಕ್ಕಾಗಿ ಒಳಗೊಳಗೇ ಪರಿತಪಿಸುತ್ತಿದ್ದೆ.

ಸುಮಾರು ೧೯೪೩ರಲ್ಲಿ ಮೈಸೂರು ಸಂಸ್ಥಾನದ ದಿವಾನರಾದ ಸರ್ ಮಾಧವರಾಯರು ಉಡುಪಿಗೆ ಬಂದಿದ್ದರು. ನಮ್ಮ ಎಲ್ಲ ಅಷ್ಟಮಠಾಧಿಪತಿಗಳ ನೇತೃತ್ವದಲ್ಲಿ ಅವರಿಗೆ ಸ್ವಾಗತ, ಸನ್ಮಾನ ಸಮಾರಂಭವು ನಡೆದು ಅವರಿಗೆ ಮಾನಪತ್ರವನ್ನೂ ನೀಡಲಾಯಿತು. ನಾನು ಚಿಕ್ಕವನಾದುದರಿಂದ ನನಗೆ ಆ ಮಾನಪತ್ರವನ್ನು ತೋರಿಸದೆಯೇ ನನ್ನ ಹೆಸರನ್ನು ಅಲ್ಲಿ ಮುದ್ರಿಸಿದ್ದರು. ಅದರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಆಧಿಪತ್ಯದ ಅಡಿಯಲ್ಲಿ ಮೈಸೂರು ಮಹಾರಾಜರು ಇಡೀ ಕರ್ನಾಟಕದ ಮಹಾರಾಜರಾಗಿರಲಿ ಎಂದು

ಆಶಿಸಲಾಗಿತ್ತು. ಬ್ರಿಟಿಷ್ ಸಾಮ್ರಾಜ್ಯದ ಅಡಿಯಲ್ಲಿ ಎಂಬ ಪದದ ಬಗ್ಗೆ ನನಗೆ ತೀವ್ರ ಅಸಮಾಧಾನವಾಗಿತ್ತು. ಸ್ವತಂತ್ರ ಭಾರತದಲ್ಲಿ ಎಂದು ಇರಬೇಕಿತ್ತೆಂದು ನನಗೆ ಅನಿಸಿತ್ತು. ಆದರೆ ನನಗೆ ಪೂರ್ವಭಾವಿಯಾಗಿ ತೋರಿಸಿರಲಿಲ್ಲ. ಸನ್ಮಾನ ಸಭೆಯಲ್ಲಿ ಅದನ್ನು ಓದುವಾಗಲೇ ನನಗೆ ತಿಳಿದದ್ದರಿಂದ ಏನೂ ಮಾಡಲು ಸಾಧ್ಯವಾಗದೆ ಸುಮ್ಮನಿರಬೇಕಾಯಿತು. ಸ್ವಾತಂತ್ರ್ಯದ ಚಳುವಳಿಯು ನಡೆಯುತ್ತಿದ್ದಾಗ ನಮ್ಮ ಹಿರಿಯ ಮಠಾಧಿಪತಿಗಳು ಬ್ರಿಟಿಷ್ ರಾಜಸತ್ತೆಯನ್ನು ಎತ್ತಿಹಿಡಿಯುತ್ತಿರುವುದು ತೀರಾ ನಾಚಿಕೆಗೇಡಿನ ಕೆಲಸವೆಂದು ನನಗನಿಸಿತು. ಇದನ್ನು ಪ್ರತಿಭಟಿಸಬೇಕೆಂದೂ ಒಳಗೊಳಗೆ ಅನಿಸುತ್ತಿತ್ತು. ಆದರೆ ಪ್ರತಿಭಟಿಸುವ ವಯಸ್ಸು ನನ್ನದಾಗಿರಲಿಲ್ಲ. ಹೀಗಾಗಿ ಸುಮ್ಮನೇ ಮೂಕವೇದನೆಯನ್ನು ಅನುಭವಿಸಿದ್ದೆ.

೧೯೪೭ರಲ್ಲಿ ಸ್ವಾತಂತ್ರ್ಯೋತ್ಸವ ಮಧ್ಯರಾತ್ರಿಯ ಸಮಾರಂಭದಲ್ಲಿ ಎಲ್ಲ ಮಠಾಧಿಪತಿಗಳೂ ರಥಬೀದಿಯಲ್ಲಿ ಧ್ವಜಾರೋಹಣದಲ್ಲಿ ಭಾಗವಹಿಸಿದ್ದರು. ನನಗಾಗ ೧೬ ವಯಸ್ಸು. ನಾನೂ ಬಹಳ ಸಂತೋಷ, ಸಡಗರದಲ್ಲಿ ಭಾಗವಹಿಸಿದ್ದೆ. ಆಗ ನಾನೂ ಪುಟ್ಟ ಭಾಷಣ ಮಾಡಿದ್ದೆ. ಅಹಿಂಸಾತ್ಮಕ ಯುದ್ಧದ ಬಗ್ಗೆ ಕೃಷ್ಣನ ಮಾತನ್ನು ಉಲ್ಲೇಖಿಸಿದ್ದೆ. ಸ್ವಾತಂತ್ರ್ಯವನ್ನು ಪಡೆದದ್ದಕ್ಕಿಂತಲೂ ಮುಂದಿನ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಪ್ರಯತ್ನಿಸಬೇಕೆಂದು ನಾನು ಆಗ ಹೇಳಿದ್ದೆ.

ಗಾಂಧೀಜಿಯವರ ಬಗ್ಗೆಯೂ ನನಗೆ ತುಂಬ ಅಭಿಮಾನವಿತ್ತು. ದೇಶದ ಸ್ವಾತಂತ್ರ್ಯದ ಬಗ್ಗೆ ನನಗಿದ್ದ ಕಾಳಜಿಯು ಗಾಂಧೀಜಿಯ ಬಗ್ಗೆ ಅಭಿಮಾನ ಬೆಳೆಯಲು ಕಾರಣವಾಯಿತು. ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸ ಮತ್ತು ತಿಲಕರಿಂದ ಆರಂಭಿಸಿ ಎಲ್ಲ ರಾಷ್ಟ್ರೀಯ ನಾಯಕರ ವ್ಯಕ್ತಿತ್ವ ಮತ್ತು ವಿಚಾರಗಳನ್ನು ತಿಳಿಯುತ್ತಿದ್ದೆ. ಗಾಂಧೀಜಿಯವರಿಂದ ಪ್ರಭಾವಿತನಾಗಿ ಖಾದಿಬಟ್ಟೆಯನ್ನೇ ಧರಿಸುವ ನಿಯಮವನ್ನು ಆರಂಭಿಸಿದೆ. ದೊಡ್ಡ ದೊಡ್ಡ ಯಂತ್ರಗಳಿಂದ ತಯಾರಾಗುವ ವಸ್ತುಗಳನ್ನು ಸ್ವೀಕರಿಸದೆ ಗ್ರಾಮೋದ್ಯೋಗದ ವಸ್ತುಗಳನ್ನೇ ಬಳಸಬೇಕೆಂದು ಪ್ರತಿಪಾದಿಸುತ್ತಿದ್ದೆ. ನಾನು ಭಂಡಾರಕೇರಿ ಮಠದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಗುರುಗಳಾದ ವಿದ್ಯಾಮಾನ್ಯತೀರ್ಥರಿಗೆ ತಿಳಿಯದಂತೆ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ನಾವು ವಾಸಮಾಡುತ್ತಿದ್ದ ಜಾಗದಲ್ಲಿ ಸ್ವತಃ ನಾನೇ ಕಸಗುಡಿಸುತ್ತಿದ್ದೆ. ಪ್ರತಿಯೊಬ್ಬರೂ ಶ್ರಮಜೀವಿಗಳಾಗಬೇಕು. ತಮ್ಮ ಕೆಲಸವನ್ನು ತಾವೇ ಮಾಡಬೇಕೆಂಬ ತಾತ್ವಿಕ ಉತ್ಸಾಹದಿಂದ ನಾನಿದನ್ನು ಮಾಡುತ್ತಿದ್ದೆ. ಸ್ವಾಮಿಗಳು ಕಸಗುಡಿಸುವುದೆಂದು ಗೊತ್ತಾದರೆ ಎಲ್ಲರೂ ತಡೆಯುತ್ತಾರೆಂದು ವಿದ್ಯಾರ್ಥಿಗಳ ಹೊರತು ಬೇರೆ ಯಾರಿಗೂ ತಿಳಿಯದಂತೆ ನಾನಿದನ್ನು ಮಾಡುತ್ತಿದ್ದೆ.

ನಾನು ಗಾಂಧೀಜಿಯವರ ವಿಚಾರಕ್ಕೆ ಸಂಬಂಧಿಸಿದ ಪತ್ರಿಕೆಗಳು ಮತ್ತು ಪುಸ್ತಕಗಳನ್ನು ತರಿಸಿ ಓದುತ್ತಿದ್ದೆ. ಗಾಂಧೀಜಿಯವರ 'ಹರಿಜನ' ಪತ್ರಿಕೆಯ ಕನ್ನಡ ಅನುವಾದಗಳು, ಗಾಂಧೀಜಿ, ವಿನೋಬಾ, ಮಶ್ರೂವಾಲಾ, ಕುಮಾರಪ್ಪ ಮುಂತಾದವರ ಲೇಖನಗಳನ್ನು ಓದುತ್ತಿದ್ದೆ. ವಿಕೇಂದ್ರೀಕರಣ ಹಾಗೂ ಗ್ರಾಮೋದ್ಯೋಗಗಳಿಗೆ ಒತ್ತು ಕೊಡುತ್ತಿದ್ದ ಗಾಂಧೀಜಿಯವರ ಆರ್ಥಿಕ ವಿಚಾರಗಳ ಬಗ್ಗೆ ನನ್ನ ಒಲವು ಬೆಳೆದಿತ್ತು. ಇದರ ಜೊತೆಗೆ ಜಯಪ್ರಕಾಶ, ಲೋಹಿಯಾ, ಆಚಾರ್ಯ ನರೇಂದ್ರದೇವ ಮುಂತಾದವರ ಸಮಾಜವಾದಿ ವಿಚಾರಗಳಿಂದಲೂ ನಾನು ಪ್ರಭಾವಿತನಾಗಿದ್ದೆ. ಶ್ರೀಮಂತರ ಹಾಗೂ ಬಡವರ ಆರ್ಥಿಕ ಅಂತರವು ಬಹಳಷ್ಟು ಕಡಿಮೆಯಿರಬೇಕು. ಜನರ ಆರ್ಥಿಕ ಸಮಾನತೆಯನ್ನು ಸಾಧಿಸಬೇಕೆಂಬ ತೀವ್ರ ಕಳಕಳಿಯು ನನ್ನಲ್ಲಿ ಬಾಲ್ಯದಿಂದಲೂ ಬೆಳೆದುಕೊಂಡು ಬಂದಿತ್ತು.

ಅದರಂತೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಟುವಟಿಕೆಗಳ ಪರಿಚಯವೂ ನನಗೆ ಆಯಿತು. ಆ ಸಂಸ್ಥೆಯ ಶಿಸ್ತು, ಸಂಘಟನೆ ಹಾಗೂ ಹಿಂದೂಧರ್ಮದ ಬಗ್ಗೆ ಸ್ವಯಂಸೇವಕರಿಗಿರುವ ಅಭಿಮಾನ ಆಸಕ್ತಿಗಳನ್ನು ಕಂಡು ನಾನು ಪ್ರಭಾವಿತನಾದೆ. ಹೀಗೆ ನನಗೆ ಸಂಘದ ಸಂಪರ್ಕವು ಬೆಳೆಯಲು

ಆರಂಭವಾಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸರಕಾರವು ಕೈಗೊಂಡ ಹಿಂದೂ ಧರ್ಮ ಸುಧಾರಣಾ ಕಾರ್ಯಕ್ರಮದ ವಿರುದ್ಧವಾಗಿ ಕರಪಾತ್ರಿಜೀಯವರ ನೇತೃತ್ವದಲ್ಲಿ ಸನಾತನಿಗಳ ಹೋರಾಟವೂ ಚಿಕ್ಕ ಪ್ರಮಾಣದಲ್ಲಿ ಪ್ರಾರಂಭವಾಗಿತ್ತು. ದೇವಾಲಯಗಳಲ್ಲಿ ಹರಿಜನ ಪ್ರವೇಶ, ಹಿಂದೂ ಕೋಡ್ ಕಾಯಿದೆ ಮುಂತಾದವುಗಳನ್ನು ಸನಾತನಿಗಳು ತೀವ್ರವಾಗಿ ವಿರೋಧಿಸುತ್ತಿದ್ದರು. ಆ ಹೋರಾಟ ಮತ್ತು ಅದಕ್ಕೆ ಸಂಬಂಧಿಸಿದ ಪತ್ರಿಕೆಗಳನ್ನೂ ಆಸಕ್ತಿಯಿಂದ ಗಮನಿಸುತ್ತಿದ್ದೆ.

ಅಖಿಲ ಭಾರತ ಮಾಧ್ವ ಮಹಾಮಂಡಲ

೧೯೫೩ರಿಂದು ಅಖಿಲ ಭಾರತ ಮಾಧ್ವ ಮಹಾಮಂಡಲದ ಸ್ಥಾಪನೆಯು ನನ್ನ ಜೀವನದ ಒಂದು ಮಹತ್ವದ ಘಟನೆ. ಇದು ನನ್ನ ಜೀವನದಲ್ಲಿ ಅನೇಕ ಅನುಭವಗಳು ಹಾಗೂ ಹೋರಾಟಕ್ಕೆ ಕಾರಣವಾಗಿ ನನ್ನ ಜೀವನವನ್ನು ರೂಪಿಸಲು ಸಾಧನವಾಯಿತು. ಬಾಲ್ಯದಿಂದಲೂ ಧಾರ್ಮಿಕ ಹಾಗೂ ಸಾಮಾಜಿಕ ಮಹತ್ವದ ಏನಾದರೂ ಸಾಧನೆಯನ್ನು ಮಾಡಬೇಕೆಂದು ನನ್ನ ಕನಸಾಗಿತ್ತು. ನಮ್ಮ ಪರ್ಯಾಯ ಸಂಚಾರದ ಅವಧಿಯಲ್ಲಿ ಅನೇಕ ಜನರ ಜೊತೆಗೆ ಈ ಬಗ್ಗೆ ಜಿಜ್ಞಾಸೆಯನ್ನೂ ಮಾಡಿದ್ದೆ. ಇದರ ಫಲವಾಗಿ ಅಖಿಲ ಭಾರತ ಮಟ್ಟದಲ್ಲಿ ಮಾಧ್ವರ ಸಂಘಟನೆಯನ್ನು ಮಾಡಬೇಕೆಂದು ನಾನು ಸಂಕಲ್ಪಿಸಿದೆ. ಮಾಧ್ವ ತತ್ತ್ವಜ್ಞಾನದ ಅನುಯಾಯಿಗಳ ಬೃಹತ್ ಸಮ್ಮೇಳನವನ್ನು ನಡೆಸಿ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಾನು ಆಲೋಚಿಸಿದೆ. ಅದಕ್ಕಾಗಿ ನಮ್ಮ ಪ್ರಥಮ ಪರ್ಯಾಯದಲ್ಲಿ ಉಡುಪಿಯ ಮಾಧ್ವ ಪ್ರಮುಖರನ್ನೆಲ್ಲಾ ಕರೆಸಿ ಸಮ್ಮೇಳನದ ಸೂಚನೆಯನ್ನು ಮುಂದಿಟ್ಟು ಒಂದು ಸ್ವಾಗತ ಸಮಿತಿಯನ್ನು ರಚಿಸಿದೆ. ಮಾಧ್ವ ತತ್ತ್ವಜ್ಞಾನದ ನೆಲೆಯಲ್ಲಿ ನಾನು ಈ ಸಂಘಟನೆಯನ್ನು ಆರಂಭಿಸಿರುವುದರಿಂದ ದ್ರಾವಿಡ, ಗೌಡ ಈ ವ್ಯತ್ಯಾಸವಿಲ್ಲದೆ ಎಲ್ಲಾ ಮಾಧ್ವರನ್ನೂ ಸೇರಿಸಿ ಈ ಸಮ್ಮೇಳನವನ್ನು ನಡೆಸಲು ನಿರ್ಧರಿಸಿದೆ. ಆದುದರಿಂದ ಗೌಡ ಸಾರಸ್ವತರನ್ನೂ ಒಳಗೊಂಡ ಸ್ವಾಗತ ಸಮಿತಿಯನ್ನು ರಚಿಸಿದೆ. ಇದಕ್ಕೆ ಬೇರೆ ಬೇರೆ ಕಡೆಗಳಲ್ಲಿ ವಿರೋಧ, ಅಸಮಾಧಾನಗಳು ವ್ಯಕ್ತವಾದವು. ದೇಶವ್ಯಾಪಿಯಾಗಿ ಮಾಧ್ವ ತತ್ತ್ವಜ್ಞಾನದ ಸಂಘಟನೆಯಾಗಬೇಕೆಂಬ ಪ್ರಬಲ ಆಕಾಂಕ್ಷೆ ಹಾಗೂ ತಾತ್ವಿಕ ದೃಷ್ಟಿಯು ನನ್ನಲ್ಲಿ ಇದ್ದುದರಿಂದ ಈ ವಿರೋಧಗಳನ್ನು ಎದುರಿಸಿಯೂ ಕಾರ್ಯಪ್ರವೃತ್ತನಾದೆ. ಬೇರೆ ಬೇರೆ ಕೆಲವು ಕಾರಣಗಳಿಂದಾಗಿ ಆಗಿನ ನಮ್ಮ ಅಷ್ಟಮಠಾಧೀಶರಿಂದಲೇ ಇದಕ್ಕೆ ವಿರೋಧವು ಆರಂಭವಾಯಿತು. ಸೋದೆ ಮಠದ ಹೊರತು ಉಳಿದ ಎಲ್ಲರೂ ಇದನ್ನು ವಿರೋಧಿಸಿದರು. ನಾನು ಚಿಕ್ಕವಯಸ್ಸಿನವನಾದುದರಿಂದ ಎಲ್ಲಾ ಮಠಾಧೀಶರನ್ನೂ ಎದುರಿಸಿ ಮುನ್ನಡೆಯುವುದು ನನಗೆ ಕಠಿಣವಾಯಿತು. ಇದರಿಂದ ಸಮ್ಮೇಳನವನ್ನೇ ಮುಂದೂಡಬೇಕಾಯಿತು. ಆದರೆ ಕನ್ನಡ ನಾಡಿನ ಎಲ್ಲಾ ಭಾಗಗಳಿಂದಲೂ ಬೇರೆ ಬೇರೆ ರಾಜ್ಯಗಳಿಂದಲೂ ನಿರೀಕ್ಷೆ ಮೀರಿದ ಸ್ವಾಗತವು ದೊರೆಯಿತು. ಇದು ಸಮಗ್ರ ಮಾಧ್ವ ಸಮಾಜದ ಸಂಘಟನೆಯ ಮೊದಲನೆಯ ಉಪಕ್ರಮ. ಇಷ್ಟರವರೆಗಿನ ಇಂತಹ ಪ್ರಯತ್ನವನ್ನು ಯಾರೂ ಮಾಡಿಲ್ಲ. ಆದುದರಿಂದ ಇಡೀ ಮಾಧ್ವ ಜನತೆಯಲ್ಲಿ ನವೋತ್ಸಾಹದ ಸಂಚಾರವಾಯಿತು. ಎಲ್ಲಾ ಕಡೆಗಳಿಂದಲೂ ಬೆಂಬಲ ಸಹಕಾರದ ಪತ್ರಗಳು ಬರಲು ಆರಂಭಿಸಿದವು. ನಮ್ಮ ವಿದ್ಯಾಗುರುಗಳಾದ ಭಂಡಾರಕೇರಿ ಶ್ರೀಗಳವರು ಪೂರ್ಣವಾಗಿ ಬೆಂಗಳೂರಿಗೆ ಹೋಗಿ ಪ್ರಚಾರವನ್ನೇ ಪ್ರಾರಂಭಿಸಿದರು. ಮದರಾಸಿನ ಸೀತಾರಾಮ ರಾವ್, ಬೆಂಗಳೂರಿನ ಪಿ. ಎಚ್. ಕೃಷ್ಣರಾವ್, ಧಾರವಾಡದ ಬುರ್ಲಿ ಬಿಂದುಮಾಧವ ಮುಂತಾದ ಅನೇಕ ಮಹನೀಯರು ಇದರ ಯಶಸ್ಸಿಗಾಗಿ ಎಲ್ಲಾ ಪ್ರಯತ್ನವನ್ನೂ ಮಾಡಿದರು. ಕಾಸರಗೋಡಿನ ಪ್ರಮುಖರಾದ ಕಡಂಬಳಿತ್ತಾಯರೆಂಬ ಮಹನೀಯರು ವಿಶೇಷ ಶ್ರಮವಹಿಸಿ ಅಷ್ಟಮಠಾಧೀಶರನ್ನು ಸಂಪರ್ಕಿಸಿ ಅವರನ್ನು ಸಮಾಧಾನಪಡಿಸಿ ಅವರ ವಿರೋಧ ಪರಿಹಾರವಾಗುವಂತೆ ಮಾಡಿದರು. ವರ್ಗಭೇದವಿಲ್ಲದೆ ಉಡುಪಿಯ

ಎಲ್ಲಾ ಜನರೂ ಈ ಸಮ್ಮೇಳನವು ಯಶಸ್ವಿಯಾಗುವಂತೆ ಸರ್ವರೀತಿಯಲ್ಲಿ ಸಹಕರಿಸಿದರು. ಅಂತೂ ೧೯೫೩ ಜನವರಿಯಲ್ಲಿ ಮೈಸೂರು ಮಹಾರಾಜರಿಂದ ಉದ್ಘಾಟನೆಗೊಂಡು ಅತ್ಯಂತ ಯಶಸ್ವಿಯಾಗಿ, ವ್ಯವಸ್ಥಿತವಾಗಿ ಈ ಸಮ್ಮೇಳನವು ನಡೆಯಿತು. ಇದು ನನ್ನ ಮೊದಲನೆಯ ಸಾಮಾಜಿಕ, ಸಂಘಟನೆಯ ಯತ್ನವಾಗಿತ್ತು.

ಈ ಸಮ್ಮೇಳನದಲ್ಲಿ ನನ್ನ ನೇತೃತ್ವದಲ್ಲಿ ಅಖಿಲ ಭಾರತ ಮಾಧ್ವ ಮಹಾಮಂಡಲದ ಸ್ಥಾಪನೆಯಾಯಿತು. ಅದರ ಸಂವಿಧಾನವನ್ನು ಸ್ವೀಕರಿಸಲಾಯಿತು. ಆದರೆ ಇಲ್ಲಿಯೇ ಒಡಕಿನ ಧ್ವನಿಯೂ ಆರಂಭವಾಯಿತು. ಉತ್ತರಾದಿ ಮಠದಿಂದ ದೊಡ್ಡ ಪ್ರತಿನಿಧಿ ಮಂಡಲವು ಮುಂಬಯಿಯ ಮಾಹುಲಿ ಗೋಪಾಲಾಚಾರ್ಯರ ನೇತೃತ್ವದಲ್ಲಿ ಆಗಮಿಸಿತ್ತು. ಉತ್ತರಾದಿ ಮಠದ ಶಿಷ್ಯರೇ ನಾಡಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಮಾಧ್ವ ಮಹಾಮಂಡಲದಲ್ಲಿ ಮಠಗಳಿಗೆ ಪ್ರಾತಿನಿಧ್ಯ ನೀಡುವಾಗ ಉತ್ತರಾದಿ ಮಠಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕೆಂದು ಅವರು ವಾದಿಸಿದರು. ಕೇಂದ್ರ ಸಮಿತಿಯಲ್ಲಿ ಎರಡು ವರ್ಗದ ಸದಸ್ಯರಿಗೆ ಸಂವಿಧಾನದಲ್ಲಿ ಅವಕಾಶ ನೀಡಲಾಗಿತ್ತು. ೧) ಜನರ ಪ್ರತಿನಿಧಿಗಳು, ೨) ಮಠಗಳ ಪ್ರತಿನಿಧಿಗಳು. ಮಠದ ಪ್ರತಿನಿಧಿ ಮಂಡಳದಲ್ಲಿ ಒಂದೊಂದು ಮಠಕ್ಕೆ ಒಂದೊಂದು ಸ್ಥಾನವನ್ನು ನೀಡಲಾಗಿತ್ತು. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಜನಸಂಖ್ಯೆಯನ್ನು ಅನುಸರಿಸದೆ ಎಲ್ಲಾ ರಾಷ್ಟ್ರಗಳಿಗೂ ಒಂದೊಂದು ಸ್ಥಾನವಿದೆ. ಚೀನ, ಭಾರತ, ಸಂಯುಕ್ತ ಸಂಸ್ಥಾನಗಳಿಗೂ ಒಂದೊಂದು ಸ್ಥಾನ. ಡೆನ್ಮಾರ್ಕ್, ಆಸ್ಟ್ರಿಯಾ, ಸಿಯೋಲ್‌ಗಳಂತಹ ಸಣ್ಣ ರಾಷ್ಟ್ರಗಳಿಗೂ ಒಂದೊಂದು ಸ್ಥಾನ. ಅದರಂತೆ ಎಲ್ಲಾ ಮಠಗಳಿಗೂ ಒಂದೊಂದೇ ಸ್ಥಾನವಿದ್ದರೂ ಜನಪ್ರತಿನಿಧಿ ಮಂಡಲದಲ್ಲಿ ಬಹು ಸಂಖ್ಯಾಕರಾದ ಉತ್ತರಾದಿ ಮಠದ ಶಿಷ್ಯರಿಗೆ ಚುನಾವಣೆಯಲ್ಲಿ ಅಧಿಕ ಸ್ಥಾನಗಳು ಬಂದೇ ಬರುತ್ತವೆ. ಆದುದರಿಂದ ಯಾರಿಗೂ ಅನ್ಯಾಯವಾಗುವುದಿಲ್ಲವೆಂದು ಅವರ ಮನವೊಲಿಸಲು ನಾನು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಹೀಗಾಗಿ ನಾನು ಆರಂಭಿಸಿದ ಅಖಿಲ ಭಾರತ ಮಾಧ್ವ ಮಹಾಮಂಡಲದಲ್ಲಿ ಆರಂಭದಲ್ಲಿಯೇ ಒಡಕು ಆರಂಭವಾಯಿತು. ನಾನು ಪರ್ಯಾಯ ಪೀಠದಲ್ಲಿದ್ದುದರಿಂದ ನಾನು ಹೊರಗೆ ಹೋಗುತ್ತಿರಲಿಲ್ಲ. ಶ್ರೀ ಭಂಡಾರಕೇರಿ ಶ್ರೀಗಳವರು ಉತ್ತರಾದಿ ಮಠಾಧೀಶರಾದ ಸತ್ಯಪ್ರಮೋದತೀರ್ಥರನ್ನು ಭೆಟ್ಟಿಯಾಗಿ ಮಾತುಕತೆ ನಡೆಸಿದರು. ಉತ್ತರಾದಿ ಮಠದ ಪ್ರತಿನಿಧಿಯಾಗಿ ಮಾಹುಲಿ ಗೋಪಾಲಾಚಾರ್ಯರು ನನ್ನಲ್ಲಿಗೆ ಬಂದು ವಿಚಾರ ವಿನಿಮಯ ನಡೆಸಿದರು. ಮಾಧ್ವ ಮಹಾಮಂಡಲದ ಘಟನೆಯಲ್ಲಿ ಕೆಲವೊಂದು ತಿದ್ದುಪಡಿ ಮಾಡುವ ಆಶ್ವಾಸನೆಯನ್ನೂ ನಾನು ಮಾಡಿ ತಾತ್ಕಾಲಿಕವಾಗಿ ಹೊಂದಾಣಿಕೆಯಾಯಿತು. ಅದರಂತೆ ನನ್ನ ಪರ್ಯಾಯದ ನಂತರ ಬಳ್ಳಾರಿಯಲ್ಲಿ ವಿಶೇಷ ಅಧಿವೇಶನವನ್ನು ನಡೆಸಿ ಘಟನೆಯನ್ನು ತಿದ್ದುಪಡಿ ಮಾಡಿ ಕೇಂದ್ರ ಸಮಿತಿಯಲ್ಲಿ ಪೀಠಾಧಿಪತಿಗಳಿಗೆ ಪ್ರಾತಿನಿಧ್ಯವನ್ನು ರದ್ದುಪಡಿಸಿ ಚುನಾಯಿತ ಜನಪ್ರತಿನಿಧಿಗಳಿಗೆ ಮಾತ್ರ ಅವಕಾಶ ನೀಡಲಾಯಿತು. ಹೀಗಾಗಿ ಒಂದೊಂದೂ ಮಠಕ್ಕೆ ಎಷ್ಟು ಸ್ಥಾನವೆನ್ನುವ ಪ್ರಶ್ನೆಯೇ ಉದ್ಭವಿಸದಂತಾಯಿತು. ಆದರೆ ಧಾರ್ಮಿಕ ವಿಷಯದಲ್ಲಿ ಮೂರನೇ ಎರಡು ಮಠಗಳಿಂದ ಪ್ರತಿಬಂಧವನ್ನು ವಿಧಿಸುವ ಅಧಿಕಾರವನ್ನು (ವೀಟೋ) ಮಠಗಳಿಗೆ ನೀಡಲಾಯಿತು. ಹೀಗೆ ಉತ್ತರಾದಿ ಮಠ ಮತ್ತು ರಾಘವೇಂದ್ರಸ್ವಾಮಿ ಮಠ ಈ ಎರಡೂ ಮಠಗಳ ಅಧಿಕೃತ ಪ್ರಮುಖ ಪ್ರತಿನಿಧಿಗಳು ತಮ್ಮ ಪರಸ್ಪರ ಭೇದಭಾವವನ್ನು ಬದಿಗಿಟ್ಟು ಬಹಿರಂಗ ವೇದಿಕೆಯಲ್ಲಿ ಮಾಧ್ವ ಮಹಾಮಂಡಲಕ್ಕೆ ಬೆಂಬಲದ ಘೋಷಣೆಯನ್ನು ಮಾಡಿದರು.

ಆದರೂ ಈ ವಾತಾವರಣವು ಹೆಚ್ಚು ಸಮಯ ಉಳಿಯಲಿಲ್ಲ. ಮಾಧ್ವ ಮಹಾಮಂಡಲಕ್ಕೆ ಯಾವುದೇ ಪೀಠಾಧೀಶರು ಅಧ್ಯಕ್ಷರಾಗಿರಬಾರದು. ಗೃಹಸ್ಥರೇ ಅಧ್ಯಕ್ಷರಾಗಿರಬೇಕು ಎಂಬ ಕಾರಣವನ್ನು ಮುಂದಿಟ್ಟುಕೊಂಡು ಉತ್ತರಾದಿ ಮಠದಿಂದ ಪುನಃ ವಿರೋಧವು ಪ್ರಾರಂಭವಾಯಿತು. ಅದರ ಜೊತೆಗೆ

ಇತರ ಅನೇಕ ಕಾರಣಗಳೂ ಧಾರ್ಮಿಕ ಭಿನ್ನಾಭಿಪ್ರಾಯಗಳೂ ಸೇರಿಕೊಂಡು ಮಾಧ್ವ ಮಹಾಮಂಡಲದ ಸದಸ್ಯರ ರಾಜೀನಾಮೆ ಚಳವಳಿಯನ್ನೇ ಆರಂಭಿಸಲಾಯಿತು. ಹೀಗೆ ಸಮಾಜದ ಸಂಘಟನೆಗಾಗಿ ಆರಂಭಿಸಿದ ಈ ಮಾಧ್ವ ಮಹಾಮಂಡಲದಿಂದ ಸಮಾಜವು ಎರಡು ಹೋಳಾಗುವ ರೀತಿಯಲ್ಲಿ ಬಿಕ್ಕಟ್ಟು ಉಂಟಾಗಬಾರದೆಂದು ನಾನು ಈ ವಿರೋಧವನ್ನು ಪರಿಹರಿಸಲು ಸರ್ವ ಪ್ರಯತ್ನ ಮಾಡಿದೆ. ಉತ್ತರಾದಿ ಶ್ರೀಗಳವರನ್ನು ಭೆಟ್ಟಿ ಮಾಡಿ ಪರಸ್ಪರ ಮಾತುಕತೆಯಿಂದ ಇದನ್ನು ಸರಿಪಡಿಸಲು ತುಂಬ ಪ್ರಯತ್ನಿಸಿದರೂ ಅದು ಫಲಕಾರಿಯಾಗಲಿಲ್ಲ. ೧೯೫೬ರಿಂದ ನಿರಂತರ ೧೦ – ೧೨ ವರುಷ ನಾಡಿನಾದ್ಯಂತ ಈ ವಿರೋಧ, ಘರ್ಷಣೆಗಳು ತೀವ್ರ ರೀತಿಯಲ್ಲಿ ನಡೆದವು. ನನ್ನನ್ನು, ಭಂಡಾರಕೇರಿ ಶ್ರೀಗಳವರು ಹಾಗೂ ನಮ್ಮ ಕಾರ್ಯಕ್ರಮಗಳನ್ನು ಬಹಿಷ್ಕರಿಸಬೇಕೆಂದು ಉತ್ತರಾದಿ ಮಠದ ಶಿಷ್ಯರಿಗೆ ಸೂಚನೆಗಳು ಬಂದವು. ಊರು - ಊರುಗಳಲ್ಲಿ ಎರಡು ಪಂಗಡಗಳು ನಿರ್ಮಾಣಗೊಂಡವು. ನಾನು ಊರು-ಊರುಗಳಿಗೆ, ಮನೆ-ಮನೆಗಳಿಗೆ ಭೆಟ್ಟಿ ನೀಡಿ ನನ್ನ ಸಂದೇಶವನ್ನು ಜನರಿಗೆ ತಲುಪಿಸುವ ಪ್ರಯತ್ನ ಮಾಡಿದೆನು. ನನ್ನ ಪಾದಪೂಜೆ, ಭಿಕ್ಷೆಗಳಿಗಾಗಿ ಅಡೆ-ತಡೆಗಳು ಪ್ರಾರಂಭವಾದವು. ಹೇಳಿಕೆ-ಪ್ರತಿಹೇಳಿಕೆಗಳು, ಪರ-ವಿರುದ್ಧ ಪ್ರಕಟಣೆಗಳು ಸಾಕಷ್ಟು ಹೊರಬಂದವು. ಇಡೀ ಮಾಧ್ವ ಸಮಾಜದಲ್ಲಿ ಒಂದು ದೊಡ್ಡ ಸಮುದ್ರ ಮಥನವೇ ಪ್ರಾರಂಭವಾಯಿತು. ಅದರ ಉಗ್ರತೆಯು ಇಂದಿನ ಹೊಸ ಪೀಳಿಗೆಗೆ ಗೊತ್ತಿರಲಿಕ್ಕಿಲ್ಲ. ಹೀಗೆ ನನ್ನ ಸಾಮಾಜಿಕ ಸಂಘಟನೆಯ ಆರಂಭದಲ್ಲಿಯೇ ದೊಡ್ಡ ವಿವಾದ ಹಾಗೂ ಘರ್ಷಣೆಯನ್ನು ನಾನು ಎದುರಿಸಬೇಕಾಯಿತು. ಈ ಸಂದರ್ಭದಲ್ಲಿಯೂ ಉತ್ತರಾದಿ ಮಠಾಧೀಶರ ವಿರುದ್ಧವಾಗಿ ಯಾವುದೇ ಪ್ರತೀಕಾರ ಕಾರ್ಯವನ್ನು ನಾನು ಕೈಗೊಳ್ಳಲಿಲ್ಲ. ನನ್ನ ಕಾರ್ಯ ಹಾಗೂ ಧೋರಣೆಯನ್ನು ಸಮರ್ಥಿಸುತ್ತಿದ್ದೆನಲ್ಲದೆ ಉತ್ತರಾದಿ ಮಠದ ವಿರುದ್ಧವಾಗಿ ಯಾವುದೇ ನಿಂದನೆಗಳನ್ನು ನಾನು ಮಾಡುತ್ತಿರಲಿಲ್ಲ. ನನ್ನ ಶಾಂತಿ, ಸಹನೆ, ಸಂಧಾನ ಪ್ರಯತ್ನಗಳಿಂದ ಎಲ್ಲರ ಸಹಾನುಭೂತಿಯನ್ನೂ ಪಡೆಯಲು ಸಾಧ್ಯವಾಯಿತು. ಇಂತಹ ತೀವ್ರ ತಿಕ್ಕಾಟದ ಮಧ್ಯದಲ್ಲಿಯೂ ನನ್ನ ಸಾಮಾಜಿಕ ಕಳಕಳಿ ಹಾಗೂ ನಿಃಸ್ವಾರ್ಥತೆಯನ್ನು ಅರ್ಥಮಾಡಿಕೊಂಡು ಎಲ್ಲ ಕಡೆಗಳಲ್ಲಿಯೂ ಮಾಧ್ವ ಜನತೆಯು ಹೆಚ್ಚು ಸಂಖ್ಯೆಯಲ್ಲಿ ನನಗೆ ಸಹಕಾರ ನೀಡುತ್ತಲೇ ಬಂದರು. ಈ ಜನರ ವಿಶ್ವಾಸ, ಅಭಿಮಾನದ ಬಲದಿಂದಲೇ ನಾನು ಏನಾದರೂ ಸಾಧನೆಯನ್ನು ಮಾಡಲು ಶಕ್ಯವಾಯಿತು. ಮಠಾಧಿಪತಿಗಳು ಅಧ್ಯಕ್ಷರಾಗಿರಬಾರದೆಂಬ ಕಾರಣದಿಂದ ಈ ವಿರೋಧವು ಬೆಳೆಯಬಾರದೆಂಬ ಕಾರಣದಿಂದ ಆಗ ಮಾಧ್ವ ಮಂಡಲಕ್ಕೆ ಅಧ್ಯಕ್ಷನಾಗಿದ್ದ ನಾನು ಅದಕ್ಕೆ ರಾಜೀನಾಮೆಯನ್ನು ನೀಡಲು ಸಿದ್ಧನಾದೆ. ನಾನು ರಾಜೀನಾಮೆ ಕೊಡಬಾರದೆಂದು ವಿಶೇಷ ಆಗ್ರಹ, ಒತ್ತಡಗಳು ಜನರಿಂದ ನನ್ನ ಮೇಲೆ ಬಂದವು. ಮಠಾಧಿಪತಿಗಳ ಅಧ್ಯಕ್ಷತೆಯಲ್ಲಿಯೇ ಸಂಸ್ಥೆಯು ಬೆಳೆಯಲು ಅನುಕೂಲವಾಗುವುದೆಂಬ ಅಭಿಪ್ರಾಯವು ಮಾಧ್ವ ಮಹಾಮಂಡಲದಲ್ಲಿ ಬಲವಾಗಿ ಬೆಳೆದಿತ್ತು. ಹೀಗಾಗಿ ಮಠಾಧಿಪತಿಗಳನ್ನು ಬಿಟ್ಟು ಗೃಹಸ್ಥರನ್ನು ಅಧ್ಯಕ್ಷರನ್ನಾಗಿ ಮಾಡಿ ವಿರೋಧವನ್ನು ಪರಿಹರಿಸುವ ನನ್ನ ಪ್ರಯತ್ನವೂ ಫಲಕಾರಿಯಾಗಲಿಲ್ಲ.

ಈ ಸಂದರ್ಭದಲ್ಲಿ ರಾಘವೇಂದ್ರಸ್ವಾಮಿ ಮಠ ಮತ್ತು ವ್ಯಾಸರಾಯ ಮಠಗಳು ಮಾಧ್ವ ಮಹಾಮಂಡಲಕ್ಕೆ ಎಲ್ಲಾ ರೀತಿಯ ಬೆಂಬಲವನ್ನು ನೀಡುತ್ತಲೇ ಇದ್ದರು. ಶ್ರೀ ವ್ಯಾಸರಾಜ ಮಠಾಧೀಶರಾದ ಶ್ರೀ ವಿದ್ಯಾಪ್ರಸನ್ನತೀರ್ಥ ಶ್ರೀಪಾದಂಗಳವರು ಮಾಧ್ವ ಮಹಾಮಂಡಲದ ಅಧ್ಯಕ್ಷತೆಯನ್ನು ಕೆಲವು ಸಮಯ ವಹಿಸಿದ್ದರು. ಪೂರ್ಣಪ್ರಜ್ಞ ವಿದ್ಯಾಪೀಠ ಸ್ಥಾಪನೆ, ಕತ್ತರಿಗುಡ್ಡ ರಸ್ತೆಯಲ್ಲಿ ವಿಶಾಲವಾದ ಜಾಗವನ್ನು ಪಡೆದು ಕಟ್ಟಡಗಳ ನಿರ್ಮಾಣ, ಹುಬ್ಬಳ್ಳಿ, ಮೈಸೂರು, ಧಾರವಾಡ, ಬಿಜಾಪುರ, ಬಾಗಲಕೋಟೆ, ರಾಯಚೂರು, ಗುಲ್ಬರ್ಗಾಗಳಲ್ಲಿ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ, ಕೊಯಂಬತ್ತೂರು, ಹೈದರಾಬಾದ್, ಮದ್ರಾಸ್, ವಿಜಯವಾಡಾಗಳಲ್ಲಿ ಸಮ್ಮೇಳನ, ಅನೇಕ ವಿದ್ವತ್

ಸಭೆಗಳು ಮುಂತಾದ ಅನೇಕ ಕಾರ್ಯ ಈ ವಿರೋಧ ಸಂಘರ್ಷಗಳ ಮಧ್ಯದಲ್ಲಿಯೇ ನಡೆದವು.

ಉತ್ತರಾದಿ ಮಠದ ಜೊತೆಗೆ ಇಂತಹ ತೀವ್ರ ತಿಕ್ಕಾಟದ ಜೊತೆಗೇ ಉತ್ತರಾದಿ ಮಠದ ಪ್ರತಿನಿಧಿಗಳಾದ ಮಾಹುಲಿ ಗೋಪಾಲಾಚಾರ್ಯರ ಜೊತೆಗೆ ಗುಪ್ತವಾಗಿ ಶಾಂತಿ, ಸಂಧಾನದ ಪ್ರಯತ್ನಗಳೂ ನಡೆಯುತ್ತಲೇ ಇದ್ದವು. ಭಿನ್ನಾಭಿಪ್ರಾಯಗಳು ಮತ್ತು ವಿರೋಧವನ್ನು ಸರಿಪಡಿಸುವ ಬೇರೆ ಬೇರೆ ಮಾರ್ಗಗಳ ಸಲಹೆ, ಅನ್ವೇಷಣೆಗಳೂ ನಡೆಯುತ್ತಿದ್ದವು. ಹೀಗೆ ತೀವ್ರ ವಿರೋಧದ ಮಧ್ಯದಲ್ಲಿಯೂ ನಡೆಯುತ್ತಿದ್ದ ಸಂಧಾನದ ಪ್ರಯತ್ನವು ಅನೇಕರಿಗೆ ಗೊತ್ತಿರಲಿಲ್ಲ. ಕೊನೆಗೆ ದಿಲ್ಲಿಯಲ್ಲಿ ಭಂಡಾರಕೇರಿ ಶ್ರೀಗಳವರ ನೇತೃತ್ವದಲ್ಲಿ ನಡೆದ ವಿಶ್ವಶಾಂತಿ ಯಜ್ಞದಲ್ಲಿ ಉತ್ತರಾದಿ ಮಠದ ಮುಖ್ಯ ಪ್ರತಿನಿಧಿಗಳಾಗಿ ಸ್ವತಃ ಗೋಪಾಲಾಚಾರ್ಯರು ಹಾಗೂ ಇನ್ನೂ ಕೆಲವರು ಭಾಗವಹಿಸುವಂತಾಯಿತು. ನಂತರದ ಕೆಲವು ವರ್ಷಗಳಲ್ಲಿ ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಪ್ರಮೋದತೀರ್ಥರ ಜೊತೆಗೆ ನಮ್ಮ ಗುಪ್ತವಾದ ನೇರವಾದ ಮಾತುಕತೆಗಳು ಪ್ರಾರಂಭವಾದವು. ಅಖಿಲ ಭಾರತ ಮಾಧ್ವ ಮಹಾಮಂಡಲದ ಹೆಸರನ್ನೇ ಬದಲಾಯಿಸಿ ಹೊಸ ಹೆಸರಿನಿಂದ ಈ ಸಂಸ್ಥೆಯನ್ನು ಮುಂದುವರಿಸಬೇಕೆಂದು ಮುಂತಾದ ಸೂಚನೆಗಳಿಗೆ ಉಳಿದ ಮಠಾಧಿಪತಿಗಳ ಹಾಗೂ ಜನರಿಂದ ಬೆಂಬಲ ದೊರೆಯಲಿಲ್ಲ. ಆದರೂ ಸಂಧಾನದ ಪ್ರಯತ್ನವು ನಡೆದು ಉತ್ತರಾದಿ ಮಠಕ್ಕೂ ನಮಗೂ ಸಂಧಾನವು ಏರ್ಪಟ್ಟಿತ್ತು. ಪೀಠಾಧಿಪತಿಗಳು ಮಾಧ್ವ ಮಹಾಮಂಡಲದ ಅಧ್ಯಕ್ಷರಾಗಿರುವ ಬದಲು ಸಂರಕ್ಷಕರಾಗಿದ್ದುಕೊಂಡು ಎಲ್ಲಾ ಸಭೆ, ಅಧಿವೇಶನಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಲು ಅವಕಾಶವಾಗುವಂತೆ ಮಂಡಲದ ಸಂವಿಧಾನವನ್ನೂ ಬದಲಾಯಿಸಿ ಗೃಹಸ್ಥರೇ ಮಂಡಲದ ಅಧ್ಯಕ್ಷರಾಗಿರುವಂತೆ ಏರ್ಪಾಡು ಮಾಡಲಾಯಿತು. ಇದರಿಂದಾಗಿ ಮಾಧ್ವ ಮಹಾಮಂಡಲದ ಸ್ಥಾಪನೆಯಿಂದ ಉಂಟಾದ ಘರ್ಷಣೆಯ ಯುಗವು ಮುಗಿದು ಸಮಾಜದಲ್ಲಿ ಶಾಂತಿ, ಸಾಮರಸ್ಯದ ಹೊಸ ಯುಗದ ಆರಂಭವಾಯಿತು. ಮಾಧ್ವ ಜನತೆಯಲ್ಲಿ ಸಂತೋಷ, ನೆಮ್ಮದಿ ಉಂಟಾಯಿತು. ಈ ವಿಷಯದಲ್ಲಿ ಮುಂಬಯಿಯ ಸತ್ಯಧ್ಯಾನ ವಿದ್ಯಾಪೀಠದ ಕುಲಪತಿಗಳಾದ ಮಾಹುಲಿ ಗೋಪಾಲಾಚಾರ್ಯರ ತೀವ್ರ ಪ್ರಯತ್ನ, ಸಹಕಾರಗಳನ್ನು ನಾವೆಂದಿಗೂ ಮರೆಯಲಾರೆವು. ಅವರೇ ಸರ್ವಪ್ರಯತ್ನ ಮಾಡಿ ಈ ಸಾಮರಸ್ಯವನ್ನು ನಿರ್ಮಿಸಿದರು. ಅಂದಿನಿಂದ ಶ್ರೀ ಉತ್ತರಾದಿ ಮಠಾಧೀಶರಿಗೂ ನಮಗೂ ಹೆಚ್ಚಿನ ಪ್ರೀತಿ, ಸೌಹಾರ್ದ, ಆತ್ಮೀಯತೆಗಳು ಬೆಳೆಯಿತು. ಅಷ್ಟರವರೆಗಿನ ತೀವ್ರ ಸಂಘರ್ಷಕ್ಕೆ ಪೂರ್ಣ ವಿರುದ್ಧವಾಗಿ ಅದರ ನೆನಪೇ ಬಾರದಂತಹ ಪರಸ್ಪರ ಸ್ನೇಹ, ಆತ್ಮೀಯತೆಯ ವಾತಾವರಣವು ನಮ್ಮಿಬ್ಬರಲ್ಲಿಯೂ ನಿರ್ಮಾಣವಾಯಿತು. ಉತ್ತರಾದಿ ಮಠದ ಜೊತೆಗಿನ ಸಂಘರ್ಷ ಹಾಗೂ ಸಂಧಾನಗಳು ನನಗೆ ಜೀವನದಲ್ಲಿ ತುಂಬಾ ಅನುಭವ ಹಾಗೂ ಪಾಠಗಳನ್ನು ನೀಡಿದ ನನ್ನ ಜೀವನದ ಮಹತ್ವದ ಘಟನೆಗಳು. ಇದರ ಜೊತೆಗೆ ವ್ಯಾಸರಾಜ ಮಠ, ರಾಘವೇಂದ್ರಸ್ವಾಮಿ ಮಠ, ಮುಳುಬಾಗಿಲು ಮಠ ಮುಂತಾದ ಎಲ್ಲಾ ಘಟ್ಟದ ಮೇಲಿನ ಮಾಧ್ವ ಮಠಗಳ ಪ್ರೀತಿ, ಆತ್ಮೀಯತೆ, ಸಹಕಾರಗಳೂ ನನಗೆ ದೊರಕಿರುವುದನ್ನು ಇಲ್ಲಿ ಉಲ್ಲೇಖಿಸುತ್ತೇನೆ. ವ್ಯಾಸರಾಜ ಮಠಾಧೀಶರಾದ ಶ್ರೀ ವಿದ್ಯಾಪ್ರಸನ್ನತೀರ್ಥ ಶ್ರೀಪಾದಂಗಳವರು ಮಾಧ್ವ ಮಹಾಮಂಡಲದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಮಗೆ ಪೂರ್ಣ ಸಹಕಾರವನ್ನು ನೀಡಿದ್ದರು. ಮುಂದಿನ ಮಠಾಧಿಪತಿಗಳಾದ ಶ್ರೀ ವಿದ್ಯಾಪಯೋನಿಧಿತೀರ್ಥರು ಪೂರ್ವಾಶ್ರಮದಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠದ ಕಾರ್ಯದಲ್ಲಿ ನಮ್ಮ ಜೊತೆಗೆ ಶ್ರಮಿಸಿದ್ದರು. ಪೀಠಾಧಿಪತಿಗಳಾದ ನಂತರವೂ ಪೂರ್ಣ ಸಹಕಾರವನ್ನು ನೀಡಿದ್ದರು.

ಮಾಧ್ವೇತರ ಪೀಠಾಧಿಪತಿಗಳು

ಅಖಿಲ ಭಾರತ ಮಾಧ್ವ ಮಹಾಮಂಡಲದ ಸ್ಥಾಪನೆಯ ನಂತರ ಅದರ ಕಾರ್ಯಕ್ಕಾಗಿ

೧೯೫೪ರಿಂದ ನಾನು ಪ್ರವಾಸವನ್ನು ಕೈಗೊಂಡಾಗ ಅನೇಕ ವೀರಶೈವ ಮಠಾಧಿಪತಿಗಳ ಸಂಪರ್ಕವೂ ನಮಗೆ ಬಂದಿದೆ. ಪ್ರಥಮವಾಗಿ ಹುಬ್ಬಳ್ಳಿಯ ಸಮೀಪದ ನವಲಗುಂದದ ಸ್ವಾಮಿಗಳು ನವಲಗುಂದಕ್ಕೆ ಆಗಮಿಸಿದಾಗ ತಮ್ಮ ಮಠಕ್ಕೆ ನಮ್ಮನ್ನು ಕರೆದರು. ಅವರ ಆಹ್ವಾನವನ್ನು ಸ್ವೀಕರಿಸಿ ಅಲ್ಲಿಗೆ ಹೋಗಿ ಉಪನ್ಯಾಸವನ್ನೂ ಮಾಡಿದೆ. ಬ್ರಾಹ್ಮಣ ಮಠಾಧೀಶರೊಬ್ಬರು ವೀರಶೈವ ಮಠಾಧೀಶರ ಜೊತೆಗೆ ಒಂದೇ ವೇದಿಕೆಯಲ್ಲಿ ಸೇರಿದ್ದು ಇದು ಪ್ರಥಮವಾಗಿತ್ತು. ನಂತರ ಬಿಜಾಪುರದ ಬಂಥನಾಳ ಶಿವಯೋಗಿಗಳು, ಬೆಳಗಾವಿಯ ನಾಗನೂರು ಸ್ವಾಮಿಗಳು ಮುಂತಾದ ವೀರಶೈವ ಸ್ವಾಮಿಗಳ ಜೊತೆಗೆ ಬೇರೆ ಬೇರೆ ಸಮಾರಂಭಗಳಲ್ಲಿ ಭಾಗವಹಿಸಿದೆ. ಇದನ್ನು ಬ್ರಾಹ್ಮಣ ಸಮಾಜದ ಪ್ರಮುಖರು ಸಂತೋಷದಿಂದ ಸ್ವಾಗತಿಸಿದರೆ ಕೆಲವೊಂದು ಕಡೆಯಿಂದ ತೀವ್ರ ವಿರೋಧವನ್ನೂ ನಾನು ಎದುರಿಸಬೇಕಾಯಿತು. ತಮ್ಮ ತಮ್ಮ ಸಿದ್ಧಾಂತದ ಬಗ್ಗೆ ನಿಷ್ಠೆ ಅಭಿಮಾನಗಳಿದ್ದರೂ ಎಲ್ಲಾ ಧರ್ಮ ಸಂಪ್ರದಾಯಗಳ ಪೀಠಾಧೀಶರೂ ಸೇರಿ ಸಮಾನ ಅಂಶಗಳಲ್ಲಿ ಸಹಕರಿಸಿ ಪ್ರೀತಿ, ಸೌಹಾರ್ದದಿಂದ ಇರಬೇಕೆಂಬ ತಾತ್ವಿಕ ನೆಲೆಯಲ್ಲಿ ವೈದಿಕ ವಲಯದ ವಿರೋಧವಿದ್ದರೂ ಎಲ್ಲಾ ಸಂಪ್ರದಾಯದ ಮಠಾಧಿಪತಿಗಳ ಜೊತೆಗೆ ಸ್ನೇಹ, ಸೌಹಾರ್ದ, ಸಂಪರ್ಕವನ್ನು ಅಂದಿನಿಂದಲೇ ಪ್ರಾರಂಭಿಸಿದೆ. ಕನ್ನಡನಾಡಿನಲ್ಲಿ ಧಾರ್ಮಿಕ ಸಾಮರಸ್ಯಕ್ಕೆ ಇದು ಉತ್ತಮ ಅವಕಾಶವನ್ನು ನೀಡಿತು. ಬ್ರಾಹ್ಮಣ ಹಾಗೂ ವೀರಶೈವ ಸಮಾಜದಲ್ಲಿ ಪರಸ್ಪರ ವೈಷಮ್ಯವಿಲ್ಲದೆ ಸ್ನೇಹ, ಸೌಹಾರ್ದಗಳು ಬೆಳೆಯಲು ಇದರಿಂದ ಅನುಕೂಲವಾಯಿತು. ಇಂದಿಗೂ ಎಲ್ಲಾ ವೀರಶೈವ ಮಠಾಧೀಶರ ಜೊತೆಗೆ ನಮಗೆ ವಿಶೇಷವಾದ ಸ್ನೇಹ, ಆತ್ಮೀಯತೆಗಳು ಬೆಳೆದಿವೆ. ಸುತ್ತೂರು, ಸಿದ್ಧಗಂಗಾ, ಮೂರುಸಾವಿರ ಮಠ, ಸಿರಿಗೆರೆ, ಚಿತ್ರದುರ್ಗದ ಬೃಹನ್ಮಠ ಮುಂತಾದ ಎಲ್ಲಾ ವೀರಶೈವ ಮಠಾಧೀಶರ ಜೊತೆಗೆ ವಿಶ್ವಹಿಂದು ಪರಿಷತ್ ಹಾಗೂ ಇತರ ವೇದಿಕೆಗಳಲ್ಲಿ ಆಗಾಗ್ಗೆ ಸೇರಿ ಧಾರ್ಮಿಕ ಜಾಗೃತಿ ಮತ್ತು ಸಾಮರಸ್ಯದ ಕಾರ್ಯಕ್ರಮಗಳು ನಡೆಯುತ್ತಿವೆ. ನಮ್ಮ ಪರ್ಯಾಯದ ಅವಧಿಯಲ್ಲಿ ಉಡುಪಿಗೂ ಅನೇಕ ಪ್ರಮುಖ ವೀರಶೈವ ಮಠಾಧೀಶರು ಆಗಮಿಸಿದ್ದರು. ಈ ಶತಮಾನದ ಪೂರ್ವಾರ್ಧದ ಬ್ರಾಹ್ಮಣ, ವೀರಶೈವ ಸಮಾಜದ ಸಂಬಂಧವು ಈ ಶತಮಾನದ ಉತ್ತರಾರ್ಧದಲ್ಲಿ ಪೂರ್ಣವಾಗಿ ಬದಲಾಗಿ ಸಾಮರಸ್ಯದ ಹೊಸ ಯುಗವೇ ಪ್ರಾರಂಭವಾಗಿದೆ. ಒಕ್ಕಲಿಗ ಸಮಾಜದ ಪೀಠಾಧಿಪತಿಗಳಾದ ಆದಿಚುಂಚನಗಿರಿ ಮಠಾಧೀಶರಿಗೂ ನಮಗೂ ಪ್ರಾರಂಭದಿಂದಲೂ ಅನ್ಯೋನ್ಯ ಪ್ರೀತಿ, ಬಾಂಧವ್ಯಗಳು ಬೆಳೆದುಕೊಂಡು ಬಂದಿವೆ. ಸಭೆ, ಸಮಾರಂಭಗಳಲ್ಲಿ ಪದೇ ಪದೇ ನಾವು ಸೇರಿಕೊಳ್ಳುತ್ತಲೇ ಇದ್ದೇವೆ. ಹಾಗೆಯೇ ಕುರುಬ ಸಮಾಜದ ಕನಕಪೀಠ, ಜೈನ ಸಮಾಜದ ಶ್ರವಣಬೆಳಗೊಳಮಠ ಮುಂತಾದ ಎಲ್ಲಾ ಸಮಾಜದ ಮಠಗಳ ಜೊತೆಗೆ ಬೆಳೆದ ನಮ್ಮ ಸಂಬಂಧವು ಬ್ರಾಹ್ಮಣ, ಬ್ರಾಹ್ಮಣೇತರ ಭೇದಭಾವವಿಲ್ಲದೆ ಹಿಂದೂ ಸಮಾಜದ ಸಂಘಟನೆಯ ವಿಷಯದಲ್ಲಿ ತುಂಬಾ ಸಹಾಯವನ್ನು ಮಾಡಿದೆ.

ಹರಿಜನರ ಕೇರಿ ಸಂದರ್ಶನ

೧೯೭೦ರಲ್ಲಿ ಬೆಂಗಳೂರಿನ ಗಬ್ಬಾರ್ ಕಾಲೋನಿಗೆ ಭೇಟಿಯಿತ್ತೆ. ಹರಿಜನರ ಕೇರಿಗೆ ಇದು ನನ್ನ ಮೊದಲ ಭೇಟಿಯಲ್ಲ, ಇದಕ್ಕಿಂತ ಎರಡು-ಮೂರು ವರ್ಷಗಳ ಮೊದಲೇ ತಮಿಳುನಾಡಿನ ಊಟಿಯಲ್ಲಿ ಹರಿಜನ ಕೇರಿಯನ್ನು ಸಂದರ್ಶಿಸಿದ್ದೆ. ಅದು ದೊಡ್ಡ ಸುದ್ದಿಯಾಗಲಿಲ್ಲ. 'ಹಿಂದು'ವಿನಲ್ಲಿ ಒಂದು ಮೂಲೆಯಲ್ಲಿ ಈ ಸುದ್ದಿ ಪ್ರಕಟವಾಗಿತ್ತು. ಅದರಂತೆ ಸಹಜವಾಗಿ ಬೆಂಗಳೂರು ನಗರದ ಗಬ್ಬಾರ್ ಕಾಲೋನಿಗೂ ಭೇಟಿ ನೀಡಿದ್ದೆ. ಇದೊಂದು ವಿಶೇಷ ಘಟನೆಯೆಂದು ನಾನು ಭಾವಿಸಿರಲಿಲ್ಲ. ನಮ್ಮ ಪರ್ಯಾಯ ಕಾಲದಲ್ಲಿ ಪುರೀ ಶಂಕರಾಚಾರ್ಯರು ಅಸ್ಪೃಶ್ಯತೆಯನ್ನು ಸಮರ್ಥಿಸಿ ಉದ್ರೇಕಕಾರಿಯಾಗಿ ಮಾತಾಡಿದ್ದು ಇಡೀ ದೇಶದಲ್ಲಿ ದೊಡ್ಡ ಸುದ್ದಿಯಾಗಿತ್ತು. ಸಂಸತ್ತಿನಲ್ಲಿ, ಪತ್ರಿಕೆಗಳಲ್ಲಿ ಈ ಬಗ್ಗೆ ಬಹಳ

ಆಕ್ರೋಶ, ಅಸಮಾಧಾನಗಳು ವ್ಯಕ್ತವಾದವು. ನಾಡಿನಾದ್ಯಂತ ಸನಾತನ ಧರ್ಮೀಯರು ಹಾಗೂ ವೈದಿಕರ ಮಠಾಧಿಪತಿಗಳ ವಿರುದ್ಧವಾಗಿ ತೀವ್ರ ಪ್ರತಿಕ್ರಿಯೆಗಳುಂಟಾಗಿದ್ದವು. ಆಗ ವಿಶ್ವಹಿಂದು ಪರಿಷತ್ತಿನ ಕಡೆಯಿಂದ ದಲಿತರ ಪರವಾಗಿ ಮಠಾಧಿಪತಿಗಳ ಹೇಳಿಕೆಯನ್ನು ಹೊರಡಿಸಲಾಯಿತು. ನಾನೂ ಅದಕ್ಕೆ ಸಹಿ ಹಾಕಿದೆ. ನಂತರ ಉಡುಪಿಯಲ್ಲಿ ನಮ್ಮ ಪರ್ಯಾಯದ ಅವಧಿಯಲ್ಲಿಯೇ ನಡೆದ ವಿಶ್ವಹಿಂದು ಪರಿಷತ್ತಿನ ಕರ್ನಾಟಕ ರಾಜ್ಯ ಸಮ್ಮೇಳನದಲ್ಲಿ ದಲಿತರಿಗೆ ಸಮಾಜದಲ್ಲಿ ಸರಿಯಾದ ಸ್ಥಾನಮಾನಗಳನ್ನು ನೀಡಬೇಕೆನ್ನುವ ಗೊತ್ತುವಳಿಯೂ ಅಂಗೀಕಾರವಾಯಿತು. ಹರಿಜನರನ್ನು ಅಸ್ಪೃಶ್ಯರೆಂದು ಪರಿಗಣಿಸಬಾರದು. ಉಳಿದ ಹಿಂದೂಗಳಂತೆ ಅವರೂ ಆತ್ಮಗೌರವದಿಂದ ಬದುಕುವಂತಹ ವಾತಾವರಣವು ಹಿಂದೂ ಸಮಾಜದಲ್ಲಿ ನಿರ್ಮಾಣವಾಗಬೇಕು. ಇದಕ್ಕಾಗಿ ಪಣತೊಡುವೆನೆಂದು ನಾನು ಘೋಷಿಸಿದೆ. ನಂತರ ಬೆಂಗಳೂರಿನ ಪತ್ರಿಕಾಗೋಷ್ಠಿಯಲ್ಲಿ "ಇದೆಲ್ಲಾ ಬರೀ ಘೋಷಣೆಗಳು ಮಾತ್ರ. ನೀವು ಸ್ವತಃ ಹರಿಜನಕೇರಿಗೆ ಹೋಗಲು ಸಿದ್ಧರಿದ್ದೀರಾ?" ಎಂದು ಪತ್ರಕರ್ತರು ಕೇಳಿದರು. "ನಾನು ಸಿದ್ಧನಿದ್ದೇನೆ" ಎಂದು ಉತ್ತರಿಸಿದೆ. ಅದನ್ನು ಕೇಳಿದ ಪತ್ರಕರ್ತರು ತಮ್ಮ ತಮ್ಮ ಒಳಗೆ ನಕ್ಕರು. ಒಬ್ಬ ಸನಾತನ ವೈದಿಕ ಧರ್ಮದ ಪೀಠಾಧಿಪತಿಯು ಹರಿಜನ ಕೇರಿಗೆ ಖಂಡಿತ ಹೋಗಲಾರನು. ಇದೆಲ್ಲಾ ಟೊಳ್ಳು ಘೋಷಣೆ ಎಂಬ ಭಾವನೆ, ವ್ಯಂಗ್ಯ ಆ ಹಾಸ್ಯದ ಹಿಂದೆ ಅಡಗಿತ್ತು. ಆದರೆ ಮರುದಿನವೇ ಇದಕ್ಕೆ ಉತ್ತರವೋ ಎಂಬಂತೆ ಗಬ್ಬಾರ್ ಬ್ಲಾಕಿನ ಹರಿಜನಕೇರಿಯನ್ನು ಸಂದರ್ಶಿಸಿದೆ. ನನಗೆ ಇದೇನು ವಿಶೇಷ ಘಟನೆಯೆನಿಸಿರಲಿಲ್ಲ. ಹರಿಜನರ ಬಗ್ಗೆ ನನಗಿರುವ ಸಹಾನುಭೂತಿಯ ವಿಷಯವನ್ನು ನನ್ನ ಬಾಲ್ಯದ ಘಟನೆಯನ್ನು ವಿವರಿಸುವಾಗ ಹೇಳಿದ್ದೆ. ಹರಿಜನರನ್ನು ಅಸ್ಪೃಶ್ಯರೆಂದು ಭಾವಿಸುವ ಬಗ್ಗೆ ನಾನು ಬಾಲ್ಯದಿಂದಲೂ ಎಲ್ಲರ ಜೊತೆಗೆ ಚರ್ಚಿಸುತ್ತಲೇ ಇದ್ದೆ. ಅವರನ್ನು ಉಳಿದ ಹಿಂದೂಗಳಂತೆಯೇ ಕಾಣಬೇಕೆಂದು ನನ್ನ ಮನಸ್ಸಿಗೆ ಬಲವಾಗಿ ಅನಿಸುತ್ತಿತ್ತು. ಮುಸ್ಲಿಮರು, ಕ್ರೈಸ್ತರಿಗಿಂತಲೂ ನಮ್ಮವರೇ ಆದ ದಲಿತರನ್ನು ಹೀನವಾಗಿ ನೋಡುವ ಬಗ್ಗೆ ನನಗೆ ತುಂಬಾ ಮಾನಸಿಕ ವೇದನೆಯಾಗುತ್ತಿತ್ತು. ಬಿಜಾಪುರಕ್ಕೆ ನಾನು ಹೋದಾಗ ಹರಿಜನ ವಿದ್ಯಾರ್ಥಿ ನಿಲಯವನ್ನು ನಡೆಸುತ್ತಿದ್ದ ಮಹನೀಯರೊಬ್ಬರು ನನ್ನನ್ನು ಭೇಟಿಯಾಗಿ ದಲಿತರ ಬಗ್ಗೆ ನನ್ನ ಧೋರಣೆಯೇನೆಂದು ಪ್ರಶ್ನಿಸಿದರು. ನಾನು ನಿಮ್ಮ ವಿದ್ಯಾರ್ಥಿನಿಲಯಕ್ಕೆ ಬಂದು ದಲಿತ ವಿದ್ಯಾರ್ಥಿಗಳಿಗೆ ಫಲಮಂತ್ರಾಕ್ಷತೆಗಳನ್ನು ಕೊಡಲು ಸಿದ್ಧನಿದ್ದೇನೆಂದು ಹೇಳಿದಾಗ ಅವರು ದಂಗಾಗಿ ನನ್ನನ್ನು ನಮಸ್ಕರಿಸಿ ಹೋದರು. ಮಾಧ್ವ ಮಹಾಮಂಡಲದ ತತ್ತ್ವವಾದದಲ್ಲಿಯೂ ದಲಿತರಲ್ಲಿಗೆ ಹೋಗಿ ಹರಿಭಕ್ತಿಯ ಪ್ರಸಾರ ಮಾಡಬಹುದೆಂಬುದನ್ನು ವಿಷ್ಣುರಹಸ್ಯದ ಆಧಾರದಿಂದ ಸಮರ್ಥಿಸಿ ಪ್ರಕಟಗೊಳಿಸಿದ್ದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಇದೊಂದು ವಿಶಿಷ್ಟ ಘಟನೆಯೆಂದು ಭಾವಿಸದೆ ಸಹಜವಾಗಿಯೇ ಗಬ್ಬಾರ್ ಬ್ಲಾಕಿನ ದಲಿತರ ಕೇರಿಗೆ ಹೋಗಿ ಎಲ್ಲರಿಗೂ ಪ್ರಸಾದ, ಮಂತ್ರಾಕ್ಷತೆ ನೀಡಿ ಉಪನ್ಯಾಸವನ್ನು ಮಾಡಿಬಂದೆ. ಅನೇಕ ಮಾಧ್ವ ಯುವಕರು ದೇವರ ನಾಮಗಳ ಭಜನೆಯನ್ನು ಮಾಡಿಕೊಂಡು ನಮ್ಮ ಜೊತೆಗೆ ಬಂದಿದ್ದರು. ಇದೊಂದು ದೊಡ್ಡ ಕ್ರಾಂತಿಯಾಗುವುದೆಂದೂ ಭಾರೀ ಸುದ್ದಿಯಾಗುವುದೆಂದೂ ನಾನು ಭಾವಿಸಿರಲಿಲ್ಲ. ಆದರೆ ಮರುದಿನ ಬೆಳಗ್ಗೆ ಏಳುವಾಗಲೇ ಪ್ರತಿಭಟನೆಯ ಧ್ವನಿಗಳು ಕೇಳಲಾರಂಭಿಸಿದವು. ಪತ್ರಿಕೆಗಳಲ್ಲಿ ಭಾವಚಿತ್ರ ಸಮೇತವಾಗಿ ನನ್ನ ಹರಿಜನಕೇರಿಯ ಸಂದರ್ಶನದ ವರದಿಗಳು ಬಂದಿದ್ದವು. ಜನರ ಭೇಟಿಗಳಲ್ಲಿ, ದೂರವಾಣಿಯ ಕರೆಗಳಲ್ಲಿ, ಎಲ್ಲೆಲ್ಲಿಯೂ ಟೀಕೆ, ಆಕ್ರೋಶಗಳು ಪ್ರತಿಧ್ವನಿತಗೊಂಡವು. ಎಲ್ಲಾ ಕಡೆಗಳಲ್ಲಿಯೂ ಇದರದೇ ಚರ್ಚೆಗಳು, ಪರ-ವಿರುದ್ಧ ಪ್ರತಿ ಕಾರ್ಯಗಳು ಪ್ರಾರಂಭವಾದವು. ಪತ್ರಿಕೆಗಳಲ್ಲಿ ನನ್ನ ಈ ಕೃತಿಯನ್ನು ಸಮರ್ಥಿಸಿ ಸಂಪಾದಕೀಯಗಳು ಬಂದವು. ಶಾಸನಸಭೆಯಲ್ಲಿ ದಲಿತರ ಪ್ರತಿನಿಧಿಗಳು ನನ್ನನ್ನು ಅಭಿನಂಧಿಸಿ ಭಾಷಣಗಳನ್ನು ಮಾಡಿದರು. ಒಂದೆರಡು ತಿಂಗಳವರೆಗೂ ಪತ್ರಿಕೆಗಳಲ್ಲಿ ನನ್ನನ್ನು ಸಮರ್ಥಿಸಿದ ವಾಚಕರ

ಪತ್ರಗಳು ಬರುತ್ತಿದ್ದವು. ಧಾರ್ಮಿಕ ವಲಯದಿಂದ ಉಗ್ರ ವಿರೋಧದ ಪ್ರತಿಕ್ರಿಯೆಗಳು ಆರಂಭವಾದವು. ನಮ್ಮ ಅಭಿಮಾನಿಗಳನೇಕರು ತೀವ್ರ ಆಘಾತವನ್ನು ಅನುಭವಿಸಿದರು. ಕೆಲವೆಡೆ ಏರ್ಪಾಡಾಗಿದ್ದ ನನ್ನ ಉಪನ್ಯಾಸಗಳು ರದ್ದಾದವು. ಕೆಲವೆಡೆ ನನ್ನ ಉಪನ್ಯಾಸಗಳಿಗೆ ಮೌನ ಪ್ರತಿಕ್ರಿಯೆ. ಕೆಲವು ಸಂಘ-ಸಂಸ್ಥೆಗಳವರು ತಮ್ಮಲ್ಲಿ ನಮ್ಮ ಉಪನ್ಯಾಸಗಳಿಗೆ ಅವಕಾಶವನ್ನೇ ನೀಡುವುದಿಲ್ಲವೆಂದು ನಿರ್ಧರಿಸಿದರು. ಹೀಗೆ ಸಮಗ್ರ ಕರ್ನಾಟಕದಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ಒಂದು ರೀತಿಯ ಕೋಲಾಹಲ ಹಾಗೂ ತಳಮಳದ ವಾತಾವರಣವು ಉಂಟಾಯಿತು. ಈ ವಿರೋಧ, ಪ್ರತಿಭಟನೆಗಳಿದ್ದರೂ ನಾನು ಹೋದ ಊರುಗಳಲ್ಲೆಲ್ಲಾ ಬ್ರಾಹ್ಮಣರೂ ಬ್ರಾಹ್ಮಣೇತರರೂ ಸಂಭ್ರಮದ ಸ್ವಾಗತವನ್ನು ನೀಡುತ್ತಿದ್ದರು. ಹೆಚ್ಚು ಸಂಖ್ಯೆಯಿಂದ ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಎಲ್ಲಾ ವರ್ಗದ ಜನರಲ್ಲಿಯೂ ಸಂಭ್ರಮ, ಉತ್ಸಾಹಗಳು ಎದ್ದುಕಾಣುತ್ತಿದ್ದವು. ಎಡೆಬಿಡದ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸುವಂತಾಯಿತು. ಹೋದಲ್ಲೆಲ್ಲಾ ಸಾಮಾನ್ಯ ಜನರೂ ಕುತೂಹಲದಿಂದ ಈ ಬಗ್ಗೆ ತುಂಬಾ ಪ್ರಶ್ನೆಗಳನ್ನು ಕೇಳುತ್ತಿದ್ದರು. ಚರ್ಚೆಯನ್ನು ನಡೆಸುತ್ತಿದ್ದರು. ಪಂಡಿತರು ಈ ವಿಷಯದಲ್ಲಿ ನನ್ನನ್ನು ವಾದಕ್ಕೆ ಆಹ್ವಾನಿಸುತ್ತಿದ್ದರು. ಅಂತೂ ನಾನು ನಿರೀಕ್ಷಿಸದೇ ಇದ್ದ ಭಾರೀ ಪ್ರತಿಭಟನೆ ಹಾಗೂ ಭಾರೀ ಉತ್ಸಾಹ, ಸಂಭ್ರಮಗಳನ್ನು ಎಲ್ಲೆಲ್ಲಿಯೂ ಕಂಡೆ. ಕೆಲವರು ಪ್ರತಿಭಟಿಸಿದರು. ಕೆಲವರು ಸಮರ್ಥಿಸಿದರು. ಕೆಲವರು ನನ್ನದು ಉಳಿದೆಲ್ಲವೂ ಸರಿ, ಇದು ಮಾತ್ರ ತಪ್ಪು ಎಂದು ನನ್ನನ್ನು ಸಹಾನುಭೂತಿಯಿಂದ ಕಂಡರು. ಕೆಲವರು ಇದು ಬರೇ ಪ್ರದರ್ಶನ, ಡಂಭಾಚಾರ ಎಂದೂ ಟೀಕಿಸಿದರು. ಹೀಗೆ ನಾನಾ ವಿಧದ ಪ್ರತಿಕ್ರಿಯೆಗಳಿಗೆ ನಾನು ಪಾತ್ರನಾದೆ. ಅಂತೂ ನನ್ನ ಹರಿಜನಕೇರಿ ಸಂದರ್ಶನವು ಸಮಾಜದಲ್ಲಿ ಸಮುದ್ರಮಂಥನಕ್ಕೆ ಕಾರಣವಾಯಿತು.

ನಾನು ದಲಿತ ಕೇರಿಗಳಿಗೆ ಹೋದಾಗಲೆಲ್ಲಾ ಎಲ್ಲಾ ಕಡೆಯಲ್ಲಿಯೂ ದಲಿತ ಸಮಾಜದ ಸ್ತ್ರೀ ಪುರುಷರೆಲ್ಲರೂ ಅತ್ಯಂತ ಭಕ್ತಿ, ಅಭಿಮಾನಗಳಿಂದ ನನ್ನನ್ನು ಸ್ವಾಗತಿಸುತ್ತಿದ್ದರು. ತಮ್ಮ ಮನೆ ಮುಂದಿನ ರಸ್ತೆಗಳನ್ನು ಚೆನ್ನಾಗಿ ನೀರು ಹಾಕಿ ಸ್ವಚ್ಛಪಡಿಸಿ ರಂಗೋಲಿಗಳಿಂದ ಅಲಂಕರಿಸುತ್ತಿದ್ದರು. ಮಕ್ಕಳನ್ನೆಲ್ಲಾ ನಮ್ಮ ಕಾಲಬುಡದಲ್ಲಿ ಮಲಗಿಸಿ ಹಾರ ಹಾಕಿ ಆರತಿ ಎತ್ತುತ್ತಿದ್ದರು. ಅವರ ಮುಖದಲ್ಲಿಯ ಸಂತೋಷ, ಉತ್ಸಾಹ, ಧನ್ಯಭಾವಗಳನ್ನು ಕಂಡು ನಾನು ಪುಲಕಿತನಾಗುತ್ತಿದ್ದೆ. ಶತಮಾನಗಳಿಂದ ಉಪೇಕ್ಷೆ, ಅಸಡ್ಡೆಗೊಳಗಾಗಿದ್ದರೂ ದೇವರ ಬಗ್ಗೆ ಅಪಾರ ಪ್ರೀತಿ, ವಿಶ್ವಾಸವನ್ನು ತುಂಬಿಕೊಂಡ ಈ ಮುಗ್ಧ ಜನತೆಯ ಪ್ರೀತ್ಯಾದರಗಳಿಂದ ನನಗೆ ಅಪೂರ್ವ ಅನುಭವ ದೊರಕಿದೆ. ಒಬ್ಬ ಚಿಕ್ಕ ದಲಿತ ಬಾಲಕನು ಪತ್ರಿಕೆಯನ್ನು ಮಾರುತ್ತಿದ್ದ. ಅವನಿಂದ ಒಂದು ಪತ್ರಿಕೆಯನ್ನು ಕೊಂಡೆ. ನನ್ನನ್ನು ಒಮ್ಮೆ ದೃಷ್ಟಿಸಿದ. ಎಲ್ಲಿಯೋ ದಲಿತರ ಕೇರಿಯಲ್ಲಿ ನನ್ನನ್ನು ನೋಡಿರಬೇಕು. ಅವನ ಕಣ್ಣಿನಲ್ಲಿ ಪ್ರೀತಿಯ ಹೊಳಪಿತ್ತು. ನಾನು ಒತ್ತಾಯ ಮಾಡಿದರೂ ನನ್ನಿಂದ ಆ ಪತ್ರಿಕೆಯ ಹಣವನ್ನು ತೆಗೆದುಕೊಳ್ಳಲೇ ಇಲ್ಲ. ಆ ಮುಗ್ಧ ಬಾಲಕನ ಈ ಭಾವುಕ ವರ್ತನೆಯನ್ನು ನಾನೆಂದಿಗೂ ಮರೆಯಲಾರೆ. ಎಲ್ಲಿಯೇ ಆದರೂ ದಲಿತರ ಮೇಲೆ ಹಲ್ಲೆ ನಡೆದಾಗ ಒಂದು ದಿನ ಉಪವಾಸ ಮಾಡುತ್ತಿದ್ದೆ. ಅಂತಹ ಊರುಗಳಿಗೆ ನಾನು ಭೇಟಿ ನೀಡಿದಾಗ ಅವರು ಹಲ್ಲೆಯಿಂದ ಉದ್ರಿಕ್ತರಾಗಿದ್ದರೂ ನನ್ನನ್ನು ಆತ್ಮೀಯತೆಯಿಂದ, ಭರವಸೆಯಿಂದ ಸ್ವಾಗತಿಸುತ್ತಿದ್ದರು. ನನ್ನ ಜೊತೆಗೆ ಸಮಾಧಾನದಿಂದಲೇ ಮಾತನಾಡಿ ತಮ್ಮ ಕಷ್ಟ ಮತ್ತು ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದರು. ನಾನೂ ಸಾಧ್ಯವಿದ್ದ ತಾತ್ಕಾಲಿಕ ಪರಿಹಾರವನ್ನೂ ಒದಗಿಸುತ್ತಿದ್ದೆ. ಒಮ್ಮೆ ಹಾಸನದ ಸಮೀಪದ ಬಾಳ್ಳುಪೇಟೆಗೆ ದಲಿತರು ಹಾಗೂ ಇತರ ಹಿಂದೂಗಳ ಘರ್ಷಣೆಯ ಸಂದರ್ಭದಲ್ಲಿ ಶಾಂತಿಗಾಗಿ ಹೋಗಿದ್ದೆ. ದಲಿತ ಯುವಕರು ತುಂಬಾ ಉದ್ರೇಕದಲ್ಲಿದ್ದರು. ಮನುಸ್ಮೃತಿಯನ್ನು ಸುಟ್ಟು ಹಾಕಿರಿ ಎಂದು ಸಿಟ್ಟಿನಿಂದ ಹೇಳಿದರು. ಆಗ ಅಲ್ಲಿದ್ದ ಹಿರಿಯ ದಲಿತರು ನನ್ನ ಮುಂದೆ ಉದ್ರೇಕದಿಂದ ಹಾಗೆ ಮಾತಾಡಬಾರದೆಂದು

ಅವರನ್ನು ತಡೆದರು. ಅಂತೂ ಎಲ್ಲಾ ಕಡೆಯಲ್ಲಿ ದಲಿತ ಸಮಾಜದ ಯುವಕರೂ ಹಿರಿಯರೂ ನಮ್ಮ ಜೊತೆಗೆ ಒಳ್ಳೆಯ ರೀತಿಯಲ್ಲಿಯೇ ವರ್ತಿಸಿದ್ದಾರೆ. ನಮ್ಮ ಬಗ್ಗೆ ಅಭಿಮಾನ, ಆದರಗಳನ್ನೇ ವ್ಯಕ್ತಪಡಿಸಿದ್ದಾರೆ. ಕೆಲವರು ದಲಿತ ಯುವಕರು ಇತರ ವಿಚಾರವಾದಿಗಳ ಜೊತೆ ಸೇರಿ ನಮ್ಮ ಕಾರ್ಯಕ್ರಮವನ್ನು ಬರೇ ನಾಟಕ, ಬೂಟಾಟಿಕೆ ಇದು ನಿಜವಾದ ಕ್ರಾಂತಿಯಲ್ಲ ಎಂದು ಲೇಖನ, ಭಾಷಣಗಳ ಮುಖಾಂತರ ಪ್ರಚಾರ ಮಾಡಿದ್ದೂ ಇದೆ. ಪೇಜಾವರ ಸ್ವಾಮಿಗಳು ಹರಿಜನರನ್ನು ತಮ್ಮ ಪೀಠದ ಅಧಿಪತಿಗಳನ್ನು ಮಾಡಲಿ ಎಂದು ಸವಾಲು ಎಸೆದವರೂ ಇದ್ದಾರೆ. ನಾನು ಇದಕ್ಕೆಲ್ಲಾ ಉತ್ತರ ಕೊಡಲು ಪ್ರವರ್ತಿಸಲಿಲ್ಲ. ಆಗ ಕರ್ನಾಟಕದ ಮಂತ್ರಿಗಳಾಗಿದ್ದ ದಲಿತ ಮುಖಂಡ ಬಸವಲಿಂಗಪ್ಪನವರೂ ಒಮ್ಮೆ ನನ್ನ ವಿರುದ್ಧ ಕೆಂಡಕಾರಿ ಪತ್ರಿಕೆಗಳಲ್ಲಿ ಉಗ್ರ ಹೇಳಿಕೆಯನ್ನು ನೀಡಿದರು. ಹರಿಜನರ ಸುದ್ದಿಗೆ ನಾನು ಬರುವುದು ಬೇಡವೆಂದು ಎಚ್ಚರಿಸಿದರು. ಅದಕ್ಕೆ ಪ್ರತಿಯಾಗಿ ದೇವರ ಸುದ್ದಿಗೆ ಬರಬೇಡಿರೆಂದೂ ನಾನು ಅವರನ್ನು ಎಚ್ಚರಿಸಬೇಕಾಯಿತು. ದೇವರ ಫೋಟೋಗಳನ್ನು ತಿಪ್ಪೆಗೆ ಎಸೆಯಿರಿ ಎಂದು ಮುಂತಾಗಿ ಅವರು ಆಗಾಗ್ಗೆ ಹೇಳಿಕೆಯನ್ನೂ ನೀಡುತ್ತಿದ್ದರು. ಹೀಗೆ ನನಗೂ ಅವರಿಗೂ ಅನೇಕ ಬಾರಿ ಪತ್ರಿಕೆಗಳಲ್ಲಿ ವಾದ-ವಿವಾದಗಳು ನಡೆದವು. ಆದರೆ ಅವರೇ ನನ್ನ ಎದುರು ಭೆಟ್ಟಿಯಾದಾಗ ಸೌಮ್ಯವಾಗಿ ವರ್ತಿಸುತ್ತಾ ನನ್ನನ್ನು ಸಮರ್ಥಿಸಿ ಬಹಳ ಸ್ನೇಹದಿಂದ ವ್ಯವಹರಿಸುತ್ತಿದ್ದರು. ಅಂತೂ ಸನಾತನಿಗಳಿಗೆ ನಾನು ಪ್ರಗತಿಶೀಲ, ಕ್ರಾಂತಿಕಾರಿಯೆನಿಸಿದ್ದರೆ, ವಿಚಾರವಾದಿಗಳಿಗೆ, ಸುಧಾರಕರಿಗೆ ನಾನು ಪ್ರತಿಗಾಮಿಯಾಗಿ ತೋರಿದ್ದೇನೆ. ಇವೆರೆಡರ ಮಧ್ಯಮಾರ್ಗದಲ್ಲಿ ನಡೆದು ಇವರಿಬ್ಬರ ಕೋಪಕ್ಕೂ ಪ್ರೀತಿಗೂ ಪಾತ್ರನಾದ ವ್ಯಕ್ತಿಯಾಗಿ ನಾನು ರೂಪುಗೊಂಡಿದ್ದೇನೆ.

ಮೀನಾಕ್ಷಿಪುರ ಮತ್ತು ತಮಿಳುನಾಡಿನ ಬೇರೆ ಬೇರೆ ಗ್ರಾಮಗಳಲ್ಲಿ ಹರಿಜನರು ಮುಸ್ಲಿಂ ಧರ್ಮಕ್ಕೆ ಮತಾಂತರಗೊಳ್ಳುವ ಪ್ರಕರಣಗಳು ನಡೆದಾಗ ತಮಿಳುನಾಡಿನ ಗ್ರಾಮ ಗ್ರಾಮಗಳಿಗೆ ಸಂದರ್ಶನ ನೀಡಿದೆ. ಬಹಳಷ್ಟು ಹರಿಜನರ ವಸತಿ ಪ್ರದೇಶಕ್ಕೆ ಭೆಟ್ಟಿ ನೀಡಿ ಮತಾಂತರಗೊಂಡವರನ್ನೂ ಮತಾಂತರಗೊಳ್ಳದವರನ್ನೂ ಮಾತನಾಡಿ, ಚರ್ಚಿಸಿ ಅವರ ಸಮಸ್ಯೆಗಳನ್ನು ವಿಚಾರಿಸಿದೆ. ಮತಾಂತರಗೊಳ್ಳದ ಹಿಂದೂ ಹರಿಜನರು ನಮ್ಮನ್ನು ಹೋದಲ್ಲೆಲ್ಲಾ ಭಕ್ತಿ ಗೌರವಗಳಿಂದ ಸ್ವಾಗತಿಸಿ ತಮ್ಮ ಕಷ್ಟಗಳನ್ನೂ ಸಮಸ್ಯೆಗಳನ್ನೂ ಮುಕ್ತ ಮನಸ್ಸಿನಿಂದ ತಿಳಿಸುತ್ತಿದ್ದರು. ಮುಖ್ಯವಾಗಿ ಮಧುರೈ, ರಾಮನಾಥ ಜಿಲ್ಲೆಯ ಧೇವರ್ ಸಮಾಜದವರಿಂದ ತಮಗೆ ಆಗುತ್ತಿರುವ ತೊಂದರೆಗಳನ್ನು ವಿವರಿಸುತ್ತಿದ್ದರು. ಧೇವರ್ ಸಮಾಜವು ಆ ಭಾಗದ ಜಮೀನ್‌ದಾರ ವರ್ಗದ ಸಮಾಜವಾಗಿದೆ. ಹರಿಜನರಿಗೂ, ಅವರಿಗೂ ಆಗಾಗ್ಗೆ ಘರ್ಷಣೆ, ಹಿಂಸೆಗಳು ಸಂಭವಿಸುತ್ತಿದ್ದವು. ಈ ಹಿಂಸೆ ಹಲ್ಲೆಗಳೇ ಅಲ್ಲಿಯ ಮತಾಂತರಕ್ಕೆ ಮುಖ್ಯ ಕಾರಣವಾಗಿದ್ದವು. ಪತ್ರಿಕೆಗಳಲ್ಲಿ 'ಸವರ್ಣ ಹಿಂದುಗಳು ಮತ್ತು ಹರಿಜನರ ಘರ್ಷಣೆ' ಎಂದು ವರದಿಗಳು ಪ್ರಕಟವಾಗುತ್ತವೆ. ಹಾಗಿದ್ದರೆ ನಾವು ಜಾತಿ ಹಿಂದೂಗಳಲ್ಲವೇ? ಎಂದು ಒಂದು ಕಡೆ ದಲಿತ ತರುಣನು ಪ್ರಶ್ನಿಸಿದಾಗ ನನ್ನ ಹೃದಯ ತುಂಬಿ ಬಂದಿತು. ನಾನು ಪತ್ರಿಕೆಗಳಿಗೆ ಮುಂದೆ ಇಂತಹ ಪದಗಳನ್ನು ಪ್ರಯೋಗಿಸಬಾರದು. ದಲಿತ ಹಿಂದೂಗಳು ಹಾಗೂ ಇತರರು ಎಂದೇ ವರದಿ ಮಾಡಬೇಕೆಂದು ಪತ್ರಿಕೆಗಳಲ್ಲಿ ಕೇಳಿಕೊಂಡೆ. ನಮಗೆ ಬೆಂಗಳೂರಿನ ಉದ್ಯಮಿಯೊಬ್ಬರು ಅನೇಕ ಸಾವಿರ ಸೀರೆಗಳನ್ನು ಒದಗಿಸಿದ್ದರು. ಅದನ್ನು ಹೋದಲ್ಲೆಲ್ಲಾ ದಲಿತ ಮಹಿಳೆಯರಿಗೆ ಹಂಚಿದೆ. ಒಂದು ಗ್ರಾಮದಲ್ಲಿ ಅಲ್ಲಿಯ ದಲಿತರಲ್ಲಿ ನಿಮ್ಮ ಗ್ರಾಮಕ್ಕೆ ನನ್ನಿಂದ ಏನು ಸಹಾಯವಾಗಬೇಕೆಂದು ಕೇಳಿದೆ. ತಮಗೆ ಬೇರೆ ಯಾವ ಸಹಾಯವೂ ಬೇಡ. ಒಂದು ದೇವಸ್ಥಾನವನ್ನು ಕಟ್ಟಿಸಿಕೊಡಿರೆಂದು ಅವರು ಹೇಳಿದಾಗ ಅವರ ಮುಗ್ಧತೆ ಹಾಗೂ ಭಾವುಕತೆಯನ್ನು ಕಂಡು ಅಚ್ಚರಿಗೊಂಡೆನು. ಅದರಂತೆ ಮಧುರೈಯ ಒಬ್ಬ ಉದ್ಯಮಿಯ ಸಹಾಯ ಪಡೆದು ನಮ್ಮ ಸಂಸ್ಥೆಯಿಂದಲೂ ಸಹಾಯಧನವನ್ನು ನೀಡಿ ಒಂದು ಚಿಕ್ಕ ದೇವಾಲಯವನ್ನು ಕಟ್ಟಿಸಿದೆ.

ಮತಾಂತರಗೊಂಡ ದಲಿತರು ನಮ್ಮ ಜೊತೆಗೆ ವಾಗ್ವಾದವನ್ನೇ ಮಾಡುತ್ತಿದ್ದರು, ಹಾಸ್ಯ ಮಾಡುತ್ತಿದ್ದರು, ಅಣಕಿಸುತ್ತಿದ್ದರು. ಆದರೂ ಶಾಂತವಾಗಿ ಅವರಿಗೆ ಸಮಾಧಾನ ನೀಡುತ್ತಿದ್ದೆ. ಅಯ್ಯರ್‌ಗಳ ಹೊಟೇಲಿನಲ್ಲಿ ದಲಿತರು ಊಟ ಮಾಡಲು ಅವಕಾಶ ಕೊಡಿಸುತ್ತೀರಾ? ಎಂದು ತಮಾಷೆಯ ರೀತಿಯಲ್ಲಿ ಕೇಳಿದರು. ಖಂಡಿತವಾಗಿ ಅವಕಾಶ ಕಲ್ಪಿಸುತ್ತೇನೆಂದು ಹೇಳಿದೆ. ಒಂದು ಹಳ್ಳಿಗೆ ನಾನು ಬಂದಾಗ ಮತಾಂತರಗೊಂಡ ದಲಿತರು ಪತ್ರಿಕೆಯಲ್ಲಿ ಪ್ರಕಟವಾದ ಜಾತಿ ಘರ್ಷಣದ ವರದಿಗಳುಳ್ಳ ಭಿತ್ತಿಪತ್ರಗಳನ್ನು ಹಿಡಿದು ನನ್ನನ್ನು ಸ್ವಾಗತಿಸಿದರು. ನಾನು ಅವರಿಗೆ ಮುಸಲ್ಮಾನರಲ್ಲಿ ಇರಾಕ್, ಇರಾನೀಯರಿಗೂ – ಶಿಯಾ, ಸುನ್ನಿಗಳಿಗೂ ನಡೆಯುವ ಭೀಕರ ಹಿಂಸಾಚಾರ ಘರ್ಷಣೆಗಳ ಮುಂದೆ ನಮ್ಮ ಹಿಂದೂ ಸಮಾಜದಲ್ಲಿ ನಡೆಯುವ ಜಾತಿ ಘರ್ಷಣೆಯು ಬಹಳ ಅಲ್ಪವಾದುದು ಎಂದು ಅವರಿಗೆ ವಿವರಿಸಿದೆ. ಹೀಗೆ ಮೀನಾಕ್ಷಿಪುರ ಮತಾಂತರ ಪ್ರಕರಣದಲ್ಲಿ ಮರೆಯಲಾಗದ ಅನೇಕ ಅನುಭವಗಳು ನನಗಾಗಿವೆ.

ಅಧ್ಯಯನ ಮತ್ತು ವಾಕ್ಯಾರ್ಥ ವಿಚಾರ

ನನ್ನ ಪ್ರಾರಂಭದ ಅಧ್ಯಯನವು ಪೇಜಾವರ ಗ್ರಾಮದಲ್ಲಿರುವ ನಮ್ಮ ಮಠದಲ್ಲಿ ಸನ್ಯಾಸ ಸ್ವೀಕಾರ ಮಾಡಿದ ಕೆಲವೇ ದಿನಗಳಲ್ಲಿ ಪ್ರಾರಂಭವಾಯಿತು. ಉಡುಪಿಯ ಅಡ್ಡೆ ವೇದವ್ಯಾಸಾಚಾರ್ಯರನ್ನು ನನ್ನ ಪಾಠಕ್ಕೆ ನಿಯೋಜಿಸಲಾಗಿತ್ತು. ನಮ್ಮ ಗುರುಗಳ ಕಾಲದಿಂದಲೂ ಇವರು ಮಠದ ವಿದ್ವಾಂಸರಾಗಿದ್ದರು. ಯತಿಗಳಿಗೆ ಸಂಬಂಧಿಸಿದ ವಿಶೇಷ ಜಪ, ಪೂಜಾ, ಸ್ತೋತ್ರಗಳನ್ನು, ಸಂಸ್ಕೃತ ಪಾಠಗಳನ್ನು, ಮಣಿ ಮಂಜರೀ, ಮಧ್ವ ವಿಜಯ, ತೀರ್ಥ ಪ್ರಬಂಧ ಮೊದಲಾದ ಮಾಧ್ವ ಧಾರ್ಮಿಕ ಕಾವ್ಯಗಳನ್ನು ಇವರು ಪಾಠ ಹೇಳುತ್ತಿದ್ದರು. ಬೆಳಗ್ಗೆಯಿಂದ ಸಂಜೆಯವರೆಗೆ ತುಂಬಾ ಪರಿಶ್ರಮ ವಹಿಸಿ ಸ್ವಲ್ಪವೂ ಆಲಸ್ಯವಿಲ್ಲದೆ ಬಿಡುವಿಲ್ಲದೆ ಪಾಠವನ್ನು ಹೇಳುತ್ತಿದ್ದರು. ಅವರು ನನ್ನ ಪಾಠದ ಬಗ್ಗೆ ತೋರುತ್ತಿದ್ದ ಕಾಳಜಿ ಅಸಾದೃಶ್ಯವಾಗಿತ್ತು. ಪಾಠ ಹೇಳುವುದು, ಅದನ್ನು ನನ್ನಿಂದ ಹೇಳಿಸುವುದು, ಬರೆಸುವುದು ಮುಂತಾಗಿ ಎಡೆಬಿಡದೆ ಶಿಕ್ಷಣ ನೀಡುತ್ತಿದ್ದರು. ಕನ್ನಡ ಮುಂತಾದ ಇತರ ಪಾಠವನ್ನು ಪೇಜಾವರದ ಸುಬ್ರಾಯ ಮಾಸ್ತರ್ ಎಂಬುವವರು ಮಾಡುತ್ತಿದ್ದರು. ನಾನು ಸ್ವಾಮಿಯಾಗಿದ್ದರೂ ಬಾಲ್ಯದಲ್ಲಿ ಇವರಿಬ್ಬರಿಗೆ ಹೆದರುತ್ತಿದ್ದೆ.

ನಂತರ ಉಡುಪಿಯಲ್ಲಿ ನನ್ನ ವಿದ್ಯಾಭ್ಯಾಸವು ಮುಂದುವರಿಯಿತು. ಅಡ್ಡೆ ವೇದವ್ಯಾಸಾಚಾರ್ಯರು ಮಧ್ವಾಚಾರ್ಯರು ರಚಿಸಿದ ಮಹಾಭಾರತ ತಾತ್ಪರ್ಯ ನಿರ್ಣಯವನ್ನು ಪಾಠ ಮಾಡುತ್ತಿದ್ದರು. ಸಂಸ್ಕೃತ ಕಾಲೇಜಿನ ವ್ಯಾಕರಣ ವೇದಾಂತ ಅಧ್ಯಾಪಕರಾಗಿದ್ದ ಕಳತ್ತೂರು ರಾಮಕೃಷ್ಣ ತಂತ್ರಿಗಳು ವ್ಯಾಕರಣ ಪಾಠವನ್ನು, ಪಾದೂರು ಮುಖ್ಯಪ್ರಾಣ ತಂತ್ರಿಗಳು ಕಾವ್ಯ ಪಾಠವನ್ನು, ಉಡುಪಿಯ ಹಿರಿಯ ಅಲಂಕಾರ ಶಾಸ್ತ್ರ ವಿದ್ವಾಂಸರಾದ ಶ್ರೀನಿವಾಸ ಭಟ್ಟರು ರಾತ್ರಿಕಾಲದಲ್ಲಿ ಅಲಂಕಾರ ಶಾಸ್ತ್ರ ಪಾಠವನ್ನೂ ಮಾಡುತ್ತಿದ್ದರು. ಸಂಸ್ಕೃತ ಕಾಲೇಜಿನ ಅಧ್ಯಾಪಕರಾದ ಶ್ರೀನಿವಾಸ ರಾವ್, ನಂತರ ಶಂಕರ ನಾರಾಯಣರಾಯರು ಇಂಗ್ಲಿಷ್ ಮುಂತಾದ ಇತರ ಪಾಠಗಳನ್ನು ಮಾಡುತ್ತಿದ್ದರು. ನ್ಯಾಯಶಾಸ್ತ್ರ ವಿದ್ವಾಂಸರಾದ ಕಾಶಿಯಲ್ಲಿ ಅಧ್ಯಯನ ಮಾಡಿದ ಪಾಡಿಗಾರು ಕೇಶವಾಚಾರ್ಯರು ತರ್ಕಪಾಠವನ್ನು ಆರಂಭಿಸಿದರು. ಹೀಗೆ ಉಡುಪಿಯಲ್ಲಿ ಎಡೆಬಿಡದೆ ಬೆಳಗ್ಗೆಯಿಂದ ಸಂಜೆಯವರೆಗೆ ಪಾಠಗಳೇ ನಡೆಯುತ್ತಿದ್ದವು. ಇದರ ಜೊತೆಗೆ ಪಾಠದ Home workಗಳು ಬೇರೆ ಇದ್ದವು. ಅಡ್ಡೆ ವೇದವ್ಯಾಸಾಚಾರ್ಯರು ಪಾಠ ಹೇಳುತ್ತಿದ್ದ ಮಧ್ವ ವಿಜಯ, ತಾತ್ಪರ್ಯ ನಿರ್ಣಯದ ೫೦-೬೦ ಶ್ಲೋಕಗಳನ್ನು ಅವರಿಗೆ ಪ್ರತಿದಿನ ತಪ್ಪದೇ ಪುಸ್ತಕ ನೋಡದೇ ಒಪ್ಪಿಸಬೇಕಿತ್ತು. ಕೃಷ್ಣಮಠದಲ್ಲಿ ಪ್ರತಿದಿನ ಬೆಳಗ್ಗಿನ ಚಿಕ್ಕಪಟ್ಟದ ಪೂಜೆ, ರಾತ್ರಿ ಪೂಜೆಗಳನ್ನು ಮಾಡಿಕೊಂಡು ಇಷ್ಟೆಲ್ಲಾ ಹೋಂ

ವರ್ಕ್ ನೋಡಿಕೊಂಡು ಪ್ರತಿದಿನ ೫೦-೬೦ ಶ್ಲೋಕಗಳನ್ನು ಬಾಯಿಪಾಠ ಹೇಗೆ ಒಪ್ಪಿಸುತ್ತಿದ್ದೆ ? ಎಂಬುದು ನನಗೇ ಈಗ ಆಶ್ಚರ್ಯವಾಗುತ್ತಿದೆ. ಅಂತೂ ಆಗ ಪಾಠಗಳ ಭಾರದಿಂದ ತತ್ತರಿಸುತ್ತಿದ್ದೆ. ೧೫ ದಿನಗಳಿಗೊಮ್ಮೆ ಪಾಡ್ಯವು ಬಂದಾಗ ಆ ದಿನ ಪಾಠಕ್ಕೆ ಪೂರ್ತಿ ಬಿಡುವಿರುವುದರಿಂದ ನಿರಾಳದ ಉಸಿರು ಬಿಡುತ್ತಿದ್ದೆ. ಪಾಡ್ಯ ದಿನದಂದು ಬೆಳಗ್ಗೆಯಿಂದ ಸಂಜೆಯವರೆಗೆ ಬೇರೆ ಹುಡುಗರ ಜೊತೆಗೆ ಆಟಗಳಲ್ಲಿಯೇ ತಲ್ಲೀನನಾಗುತ್ತಿದ್ದೆ. ಯತಿಯಾಗಿ ನಾನು ಹೀಗೆ ಆಟವಾಡಬಹುದೇ ?ಎಂದು ಆಗಾಗ್ಗೆ ಸಂಕೋಚ ಪಡುತ್ತಿದ್ದೆ. ಯಾರಾದರೂ ನೋಡಿದಾಗ ನಾಚಿಕೆ ಪಡುತ್ತಿದ್ದೆ. ಆದರೆ ಯಾವಾಗಲೂ ಪಾಠ-ಪೂಜೆಗಳಲ್ಲಿ ತೊಡಗಿ ಒಂದೊಂದು ದಿನ ಮಾತ್ರ ಆಟವಾಡುವ ಈ ಬಾಲಯತಿಯ ಬಗ್ಗೆ ಪ್ರೀತಿ, ಸಹಾನುಭೂತಿಯನ್ನೇ ತೋರುತ್ತಿದ್ದರು. ಈ ಪಾಡ್ಯದ ರಜಾದಿನಗಳಲ್ಲಿ ಸಹವಿದ್ಯಾರ್ಥಿಗಳ ಜೊತೆಗೆ ವೇಷವನ್ನು ಧರಿಸದೆ ಯಕ್ಷಗಾನದ ಸಂವಾದ, ಸಂಸ್ಕೃತ ನಾಟಕ ಹಾಗೂ ಕುಣಿತ ಮೊದಲಾದವುಗಳನ್ನೂ ನಡೆಸುತ್ತಿದ್ದೆ. ಆಗಲೇ ಸಂಸ್ಕೃತದ ಕವಿತೆಗಳನ್ನೂ ಬರೆಯಲಾರಂಭಿಸಿದೆ.

ಹೀಗೆ ನನ್ನ ಸಂಸ್ಕೃತ ಹಾಗೂ ಕಾವ್ಯದ ಅಧ್ಯಯನವು ಒಂದು ಘಟ್ಟಕ್ಕೆ ಬಂದು ಮುಟ್ಟಿದಾಗ ಮುಂದೆ ವೇದಾಂತ ಶಾಸ್ತ್ರದ ಅಧ್ಯಯನವನ್ನು ಆರಂಭಿಸಬೇಕಾದ ಹಂತಕ್ಕೆ ತಲುಪಿದೆ. ವೇದಾಂತ ಅಧ್ಯಯನವನ್ನು ಯಾರಲ್ಲಿ ಮಾಡುವುದು ಎಂಬ ಬಗ್ಗೆ ಮಠದ ವರ್ತುಲದಲ್ಲಿ ವಿಚಾರ, ಜಿಜ್ಞಾಸೆಗಳು ಆರಂಭವಾದವು. ಭಂಡಾರಕೇರಿ ಮಠಾಧೀಶರಾದ ಶ್ರೀ ವಿದ್ಯಾಮಾನ್ಯತೀರ್ಥರ ಪಾಂಡಿತ್ಯ, ಧಾರ್ಮಿಕ ಪ್ರವಚನಗಳ ಬಗ್ಗೆ ನನ್ನಲ್ಲಿ ಅನೇಕರು ಬಂದು ಪ್ರಶಂಸಿಸುತ್ತಿದ್ದರು. ನನಗೆ ಆಗಲೇ ಅವರಲ್ಲಿ ವಿಶೇಷ ಗೌರವ ಬೆಳೆದಿತ್ತು. ಅವರಲ್ಲಿಯೇ ನಾನು ವೇದಾಂತ ಪಾಠವನ್ನು ಕೇಳಬೇಕೆಂದು ತವಕಿಸುತ್ತಿದ್ದೆ. ಆಗ ನನಗೆ ಬರೇ ೧೫ ವಯಸ್ಸು. ನಮ್ಮ ಪೂರ್ವಾಶ್ರಮದ ತಂದೆಯವರಾದ ನಾರಾಯಣಾಚಾರ್ಯರೂ ಎಲ್ಲರ ಜೊತೆಗೆ ವಿಚಾರ ವಿನಿಮಯ ಮಾಡಿ ಅದೇ ನಿರ್ಧಾರಕ್ಕೆ ಬಂದಿದ್ದರಿಂದ ನನಗೆ ಬಹಳ ಸಂತೋಷವಾಯಿತು. ಅದರಂತೆ ಭಂಡಾರಕೇರಿ ಮಠದಲ್ಲಿ ಪಾಠವು ಪ್ರಾರಂಭವಾಯಿತು.

ಮೊದಲು ತರ್ಕ ಸಂಗ್ರಹವೆಂಬ ನ್ಯಾಯ ಗ್ರಂಥದ ಪಾಠವು ಪ್ರಾರಂಭವಾಯಿತು. ನ್ಯಾಯ ಶಾಸ್ತ್ರದಲ್ಲಿ ಅತ್ಯಂತ ಕಠಿಣವೂ ವಿದ್ಯಾರ್ಥಿಗಳಿಗೆ ಹೊಸದೂ ಆಗಿರುವ ಶಾಬ್ದಬೋಧ ಪ್ರಕ್ರಿಯೆ ಯೆಂಬುದಿದೆ. ಅದರ ಅಭ್ಯಾಸವಾಗದೆ ನ್ಯಾಯ ಶಾಸ್ತ್ರದಲ್ಲಿ ಪ್ರವೇಶವು ದೊರೆಯಲಾರದು. ನಮಗೆ ಉಡುಪಿಯಲ್ಲಿ ಈ ನ್ಯಾಯ ಪಾಠವನ್ನು ಆರಂಭಿಸಿದವರು ನ್ಯಾಯ ವಿದ್ವಾನ್ ಪಾಡಿಗಾರು ಕೇಶವಾಚಾರ್ಯರೆಂಬುದನ್ನು ಈ ಮೊದಲೇ ತಿಳಿಸಿದ್ದೇನೆ. ಅವರು ಒಳ್ಳೆಯ ನ್ಯಾಯ ಶಾಸ್ತ್ರ ವಿಶಾರದರು. ಪ್ರೌಢ ವಿದ್ಯಾರ್ಥಿಗಳಿಗೆ ಚೆನ್ನಾಗಿ ನ್ಯಾಯ ಪಾಠವನ್ನು ಹೇಳುತ್ತಿದ್ದರು. ಭಂಡಾರಕೇರಿ ಮಠದಲ್ಲಿ ನಾವು ಅಧ್ಯಯನ ಮಾಡುತ್ತಿರುವಾಗಲೂ ಶ್ರೀ ವಿದ್ಯಾಮಾನ್ಯತೀರ್ಥರು ಅವರನ್ನು ಕರೆಸಿ ವಿದ್ಯಾರ್ಥಿಗಳಿಗೆ ನ್ಯಾಯ ಶಾಸ್ತ್ರ ಪಾಠವನ್ನು ಹೇಳಿಸುತ್ತಿದ್ದರು. ಮುಂದೆ ನಮ್ಮ ಜೊತೆಗೆ ಬಹುವರ್ಷ ಆಸ್ಥಾನ ವಿದ್ವಾಂಸರಾಗಿದ್ದು ತುಂಬಾ ಸೇವೆಯನ್ನು ಸಲ್ಲಿಸಿದ್ದಾರೆ.

ಆದರೆ ಅವರ ಪ್ರಾರಂಭದ ತರ್ಕದ ಶಾಬ್ದಬೋಧ ಪಾಠವನ್ನು ನಮಗೆ ಅರಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಶಾಬ್ದಬೋಧದ ವಾಕ್ಯಗಳನ್ನೆಲ್ಲಾ ನಮ್ಮಿಂದ ಬರೆಸುತ್ತಿದ್ದರು. ಅದರ ಸಾಮಾನ್ಯವಾದ ಅರ್ಥವೂ ನಮಗೆ ಆಗಿರಲಿಲ್ಲ. ಹೀಗಾಗಿ ನ್ಯಾಯ ಪಾಠದಲ್ಲಿ ನಮ್ಮ ಆಸಕ್ತಿ, ಅಭಿರುಚಿಗಳು ಪೂರ್ತಿಯಾಗಿ ನಷ್ಟವಾಗಿದ್ದವು. ಆದರೆ ಶ್ರೀ ವಿದ್ಯಾಮಾನ್ಯತೀರ್ಥರು ತರ್ಕದ ಶಾಬ್ದಬೋಧದ ರೀತಿಯನ್ನೂ ಅತ್ಯಂತ ಸುಲಲಿತವಾಗಿ ನಮಗೆ ವಿವರಿಸಿದರು. ನ್ಯಾಯ ಶಾಸ್ತ್ರದ ಪಾರಿಭಾಷಿಕ ಶಬ್ದ ಮತ್ತು ವಸ್ತುಗಳನ್ನು ವಿವರಿಸಿ ನ್ಯಾಯ ಶಾಸ್ತ್ರದ ಸರಳ ನಿಯಮಗಳನ್ನು ತಿಳಿಹೇಳಿ ಬಹಳ ಸುಲಭ ರೀತಿಯಲ್ಲಿ ಶಾಬ್ದಬೋಧದ ಕ್ರಮವನ್ನು ನಮಗೆ ತೋರಿಸಿದರು. ಮಕ್ಕಳಿಂದ ಪ್ರೌಢರವರೆಗೆ ಎಲ್ಲರಿಗೂ ತರ್ಕಸಂಗ್ರಹದಿಂದ ಆರಂಭಿಸಿ

ತರ್ಕವೇದಾಂತಗಳ ಎಲ್ಲಾ ಪ್ರೌಢಗ್ರಂಥಗಳವರೆಗೂ ಸುಲಭವಾಗಿ ತಿಳಿಸುವ ಅವರ ಪಾಠಶೈಲಿಯು ಅನನ್ಯವಾಗಿತ್ತು. ಎಲ್ಲಾ ವೇದಾಂತ ಹಾಗೂ ತರ್ಕಗ್ರಂಥಗಳನ್ನು ನನಗೂ ನನ್ನ ಸಹ ವಿದ್ಯಾರ್ಥಿಗಳಿಗೂ ಅವರೇ ಪಾಠ ಹೇಳಿದ್ದರು.

ತರ್ಕಸಂಗ್ರಹದ ಶಾಬ್ದಬೋಧದ ನಂತರ ನಾನು ಪಾಠಗಳಲ್ಲಿ ಸ್ವಲ್ಪ ಅಸಡ್ಡೆ ಮಾಡುತ್ತಿದ್ದೆ. ಪಾಠ ನಡೆಯುತ್ತಿದ್ದಾಗ ಅದನ್ನೂ ಸರಿಯಾಗಿ ಕೇಳುತ್ತಿರಲಿಲ್ಲ. ಅನಂತರದಲ್ಲಿ ಅದರ ಅಭ್ಯಾಸವನ್ನೂ ಮಾಡುತ್ತಿರಲಿಲ್ಲ. ಕವಿತೆಯ ರಚನೆ, ಸಾಹಿತ್ಯ ಪಾಠದಲ್ಲಿಯೇ ಹೆಚ್ಚು ಆಸಕ್ತಿ ತೋರುತ್ತಿದ್ದೆ. ನ್ಯಾಯ ವೇದಾಂತಗಳ ಅಭ್ಯಾಸದಲ್ಲಿ ನಾನು ಏನೂ ಪ್ರಗತಿಯನ್ನೂ ಸಾಧಿಸಲಿಲ್ಲ. ವಿದ್ಯಾಮಾನ್ಯತೀರ್ಥರಿಗೆ ಇದರಿಂದ ಸ್ವಲ್ಪ ನಿರಾಸೆಯೂ ಆಯಿತು. ಕೆಲವರಲ್ಲಿ ಇದನ್ನು ಅವರು ಆಡಿಕೊಂಡಿದ್ದನ್ನೂ ಕೇಳಿದೆ. ಆದರೂ ಪಾಠ ಹಾಗೂ ಚಿಂತನೆಗಳಲ್ಲಿ ನನ್ನ ಔದಾಸೀನ್ಯ ಕಡಿಮೆಯಾಗಲಿಲ್ಲ. ಒಮ್ಮೆ ನಾನು ಸಾಹಿತ್ಯ ಪಾಠ ಮಾಡುತ್ತಿದ್ದಾಗ ಆ ಪುಸ್ತಕವನ್ನೇ ಕಸಿದು ನಾನು ಸಂಸ್ಕೃತ, ಸಾಹಿತ್ಯ ಚಟುವಟಿಕೆಗಳಿಂದ ನಿವೃತ್ತನಾಗುವಂತೆ ಮಾಡಲು ಗುರುಗಳು ಪ್ರಯತ್ನಿಸಬೇಕಾಯಿತು. ಕೊನೆಗೆ ನಮ್ಮ ಗುರುಗಳಾದ ವಿದ್ಯಾಮಾನ್ಯತೀರ್ಥರು ಇನ್ನೊಂದು ಉಪಾಯವನ್ನು ಮಾಡಿದರು. ನನಗಿಂತ ಕೆಳಗಿನ ವಿದ್ಯಾರ್ಥಿಗಳಿಗೆ ತರ್ಕ, ವೇದಾಂತ ಪಾಠಗಳನ್ನು ಹೇಳುವಂತೆ ವಿಧಿಸಿದರು. ಪಾಠ ಹೇಳಲು ನಿರಾಕರಿಸಿದರೆ ನನ್ನ ಗೌರವಕ್ಕೆ ಭಂಗ ಬರುವುದರಿಂದ ಅನಿವಾರ್ಯವಾಗಿ ಪಾಠವನ್ನು ಆರಂಭಿಸಿದೆ. ಆದರೆ ನಾನು ಸ್ವತಃ ತಿಳಿದುಕೊಳ್ಳದೆ ಪಾಠ ಹೇಳುವುದು ಹೇಗೆ ? ಉಳಿದ ಪ್ರೌಢ ವಿದ್ಯಾರ್ಥಿಗಳಿಂದ ಕೇಳಿ ತಿಳಿದುಕೊಂಡು ಪಾಠ ಹೇಳುವುದು ನಮ್ಮ ಘನತೆಗೆ ಕಡಿಮೆಯಾಗುತ್ತದೆ. ಹೀಗಾಗಿ ರಹಸ್ಯವಾಗಿ ಬೇರೆಯವರಲ್ಲಿ ಕೇಳಿ ಸರಿಪಡಿಸಿಕೊಂಡು ಪಾಠ ಹೇಳುವಂತಹ ಸಂದರ್ಭವುಂಟಾಯಿತು. ಇಂತಹ ಮುಜುಗರದಿಂದ ತಪ್ಪಿಸಿಕೊಳ್ಳಲು ನಿರ್ಧರಿಸಿದೆ. ಸರಿಯಾಗಿ ಪಾಠವನ್ನು ಕೇಳಲು ಅಭ್ಯಾಸಮಾಡಲು ಆರಂಭಿಸಿದೆ. ಒಂದೆರಡು ತರ್ಕ, ವೇದಾಂತ ಗ್ರಂಥಗಳನ್ನೂ ಸರಿಯಾಗಿ ಅಭ್ಯಾಸ ಮಾಡಿ ಅವುಗಳನ್ನು ಕರಗತ ಮಾಡಿಕೊಂಡೆನು. ನಂತರ ತರ್ಕ, ವೇದಾಂತಗಳಲ್ಲಿ ಹಿಡಿತವನ್ನು ಪಡೆಯಲು ಸಾಧ್ಯವಾಯಿತು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿದೆಸೆಯಲ್ಲಿಯೇ ತರ್ಕ, ವೇದಾಂತಗಳ ಪ್ರೌಢ ಗ್ರಂಥಗಳನ್ನು ಪಾಠ ಹೇಳಿದೆ. ಪಾಠದ ಸಮಯದಲ್ಲಿಯೂ ಚರ್ಚೆಯಲ್ಲಿ ವಿಶೇಷವಾಗಿ ಭಾಗವಹಿಸುತ್ತಿದ್ದೆ. ಪಾಠದ ನಂತರ ಅದನ್ನು ಪುನಃ ಅಭ್ಯಾಸ ಮಾಡುವುದರಲ್ಲಿ ಮಾತ್ರ ನನ್ನದು ಬಹಳ ಉದಾಸೀನ ಪ್ರವೃತ್ತಿ. ಪಾಠದ ನಂತರ ಪುನಃ ಮರುದಿನದ ಪಾಠದವರೆಗೂ ಆ ಪುಸ್ತಕವನ್ನು ಮುಟ್ಟುತ್ತಿರಲಿಲ್ಲ. ಆದರೆ ಗುರುಗಳು ಹಿಂದಿನ ದಿನದ ನ್ಯಾಯಶಾಸ್ತ್ರದ ಭಾಗವನ್ನು ಮರುದಿನ ಅನುವಾದ ಮಾಡಿಸಿಯೇ ಮುಂದಿನ ಪಾಠವನ್ನು ಪ್ರಾರಂಭಿಸುತ್ತಿದ್ದರು. ಹೀಗಾಗಿ ಅನಿವಾರ್ಯವಾಗಿ ಪಾಠದ ಆರಂಭದ ೫-೧೦ ನಿಮಿಷಗಳ ಮೊದಲು ಹಿಂದಿನ ದಿನದ ಪಾಠದ ಪುಟಗಳನ್ನು ಒಮ್ಮೆ ನೋಡಿ ಅವರ ಮುಂದೆ ಅದನ್ನೆಲ್ಲಾ ಪೂರ್ತಿಯಾಗಿ ಅನುವಾದ ಮಾಡುತ್ತಿದ್ದೆ. ಹೀಗೆ ನಾನು ಚಿಂತನೆ, ಅಭ್ಯಾಸಗಳಲ್ಲಿ ಅತ್ಯಂತ ಉದಾಸೀನನಾಗಿದ್ದರೂ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಪಾಠವನ್ನು ಹೇಳುತ್ತಿದ್ದರಿಂದ ಶಾಸ್ತ್ರಜ್ಞಾನವನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿತು. ಆಗ ನನ್ನಲ್ಲಿ ವಿಶೇಷವಾಗಿ ಪಾಠವನ್ನು ಕೇಳುತ್ತಿದ್ದ ನನ್ನ ಪ್ರೀತಿಯ ಶಿಷ್ಯರಲ್ಲಿ ಪೂರ್ಣಪ್ರಜ್ಞ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ವರದರಾಜ ಬಲ್ಲಾಳ, ಗೋವೆಯ ನಿವೃತ್ತ ಸುಪರಿಂಟೆಂಡೆಂಟ್ ಇಂಜಿನಿಯರ್ ರಂಗನಾಥ ಪುರಾಣಿಕ್, ಮೈಸೂರಿನ ನಮ್ಮ ವಿದ್ಯಾರ್ಥಿ ನಿಲಯದ ಸಂಚಾಲಕರಾಗಿ ಅದನ್ನು ಎಲ್ಲಾ ರೀತಿಯಿಂದಲೂ ಬೆಳೆಸಿದ ವಿಠಲ ಉಪಾಧ್ಯಾಯ, ಶೃಂಗೇರಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಅನಂತಕೃಷ್ಣ ಭಟ್ ಮುಂತಾದವರಿದ್ದಾರೆ. ನಮ್ಮ ಸಹಪಾಠಿಗಳಲ್ಲಿ ಸಂಸ್ಕೃತ ಕಾಲೇಜಿನ ನಿವೃತ್ತ ತರ್ಕ ಪ್ರಾಧ್ಯಾಪಕರಾದ ಕಾಪು ಹಯಗ್ರೀವಾಚಾರ್ಯರ್, ಅಲ್ಲಿಯ ನಿವೃತ್ತ ವೇದಾಂತ ಪ್ರಾಧ್ಯಾಪಕರಾದ ವೆಂಕಟರಮಣ ಐತಾಳರು, ಧಾರವಾಡದ ಪ್ರಸಿದ್ಧ ಪಂಡಿತರಾದ

ಜಾಲಿಹಾಳ ರಾಘವೇಂದ್ರಾಚಾರ್ ಮುಂತಾದವರಿದ್ದಾರೆ. ಸಂಸ್ಕೃತ ಸಾಹಿತ್ಯ ಪಾಠದಲ್ಲಿ ದಿವಂಗತ ಎಂ. ರಾಜಗೋಪಾಲಾಚಾರ್ಯ, ಮದ್ರಾಸಿನ ಪ್ರಸಿದ್ಧ ನೃತ್ಯ ಕಲಾವಿದ ಉಡುಪಿ ಲಕ್ಷ್ಮೀನಾರಾಯಣ ಮೊದಲಾದವರಿದ್ದಾರೆ.

ವಾಕ್ಯಾರ್ಥಗಳು

ವಿದ್ಯಾರ್ಥಿದೆಸೆಯಲ್ಲಿಯೂ ನಂತರವೂ ಅನೇಕ ವಿದ್ವಾಂಸರ ಜೊತೆಗೆ ಅನೇಕ ವಿದ್ವತ್ ಸಭೆಯಲ್ಲಿ ನಡೆಸಿದ ಶಾಸ್ತ್ರಾರ್ಥ ವಿಚಾರಗಳ ಸಂಕ್ಷಿಪ್ತ ವಿವರಣೆಯನ್ನು ನೀಡಬೇಕೆಂದು ಈ ಗ್ರಂಥದ ಸಂಪಾದಕರು ಕೇಳಿದ್ದರಿಂದ ಈ ವಿವರಣೆಯನ್ನು ನೀಡುತ್ತಿದ್ದೇನೆ. ದೇವರ ಅನುಗ್ರಹದಿಂದ ಈ ಎಲ್ಲ ಸಂದರ್ಭಗಳಲ್ಲಿಯೂ ನನ್ನ ಜೊತೆಗೆ ವಾಕ್ಯಾರ್ಥ ವಿಚಾರಕ್ಕೆ ಇಳಿದ ವಿದ್ವಾಂಸರಿಗೆ ಸಮರ್ಪಕವಾದ ಉತ್ತರವನ್ನು ನೀಡಿ ಅವರನ್ನು ಸಮಾಧಾನ ಪಡಿಸುವ ಅವಕಾಶವೇ ನನಗೆ ದೊರಕಿದೆ. ಇವರಲ್ಲಿ ಬಹಳ ಮಂದಿ ಪಂಡಿತರು ನಮ್ಮ ಸಮಾಧಾನವನ್ನು ತುಂಬ ಸಂತೋಷವನ್ನು ವ್ಯಕ್ತಪಡಿಸುವ ಉದಾರತೆಯನ್ನೇ ತೋರಿದ್ದಾರೆ. ಇದನ್ನು ನನ್ನ ಹೆಗ್ಗಳಿಕೆಯೆಂಬ ಅಹಂಕಾರದಿಂದ ನಾನಿಲ್ಲಿ ಉಲ್ಲೇಖಿಸುತ್ತಿಲ್ಲ. ಈ ಗ್ರಂಥದ ಸಂಪಾದಕರ ಅಪೇಕ್ಷೆಯಂತೆ ನನ್ನ ಎದುರಿಗೆ ನಡೆದ ವಾಸ್ತವ ಘಟನೆಗಳನ್ನು ಬರೆದಿದ್ದೇನೆ. ಅವರಿಗಿಂತ ನಾನು ದೊಡ್ಡ ಪಂಡಿತನೆಂದು ನಾನು ಖಂಡಿತವಾಗಿಯೂ ಭಾವಿಸುವುದಿಲ್ಲ. ವಾದ-ವಿವಾದಗಳಲ್ಲಿ ಒಮ್ಮೊಮ್ಮೆ ದೇವರ ಅನುಗ್ರಹದಿಂದಲೇ ಸಮಯ ಸ್ಫೂರ್ತಿಯಿಂದ ವಿಚಾರಗಳು ಹೊಳೆಯುತ್ತವೆ. ಆದುದರಿಂದ ನನ್ನ ಶಾಸ್ತ್ರಾರ್ಥ ವಿಚಾರದ ವಿವರಣೆಯನ್ನು ಅಹಂಕಾರ ಪ್ರದರ್ಶನವೆಂದು ಖಂಡಿತವಾಗಿಯೂ ಭಾವಿಸಬಾರದು. ಇಂತಹ ನಾಡಿನ ಶ್ರೇಷ್ಠ ಪಂಡಿತರ ಮುಂದೆ ಆಚಾರ್ಯರ ಸಿದ್ಧಾಂತದ ವಿಷಯಗಳನ್ನು ಬಲವಾಗಿ ಸಮರ್ಥಿಸುವ ಮತ್ತು ನನ್ನ ಶಾಸ್ತ್ರ ಪ್ರತಿಭೆಯನ್ನು ವ್ಯಕ್ತಪಡಿಸುವ ಅವಕಾಶವು ದೊರೆಯಿತೆಂದು ನಾನು ಸಂತೋಷ ಪಡುತ್ತೇನೆ.

ನಾನು ಭಂಡಾರಕೇರಿ ಮಠದಲ್ಲಿ ಅಧ್ಯಯನ ಮತ್ತು ವಿದ್ಯಾರ್ಥಿಗಳಿಗೆ ಪಾಠವನ್ನೂ ಹೇಳಿಕೊಂಡು ವಿದ್ಯಾರ್ಥಿಜೀವನವನ್ನು ನಡೆಸುತ್ತಿರುವಾಗಲೇ ಅನೇಕ ಪ್ರಸಿದ್ಧ ವಿದ್ವಾಂಸರ ಜೊತೆಗೆ ಶಾಸ್ತ್ರಾರ್ಥ ವಿಚಾರವನ್ನು ನಡೆಸಿ ಅವರನ್ನು ಸಮಾಧಾನಪಡಿಸುವ ಸಂದರ್ಭಗಳು ಒದಗಿದ್ದುವು. ಮೈಸೂರಿನ ಪ್ರಸಿದ್ಧ ನ್ಯಾಯ, ವೇದಾಂತ ಪಂಡಿತರಾದ ನವೀನಂ ವೆಂಕಟೇಶ್ವರ ಶಾಸ್ತ್ರಿಗಳ ಜೊತೆಗೆ ನ್ಯಾಯಾಮೃತ, ಅದ್ವೈತಸಿದ್ಧಿಗಳಲ್ಲಿ ಭಂಡಾರಕೇರಿ ಸ್ವಾಮಿಗಳು ವಾಕ್ಯಾರ್ಥ ವಿಚಾರ ಮಾಡುತ್ತಿದ್ದಾಗ ನಾನು ಮಧ್ಯದಲ್ಲಿ ಪ್ರವೇಶಿಸಿ ಅವರ ಆಕ್ಷೇಪಗಳಿಗೆ ಉತ್ತರಿಸಿ ಅವರನ್ನು ಸಮಾಧಾನಪಡಿಸಿದೆ. ತಿರುವಾರಿಯ ವಿಜಯೀಂದ್ರ ಆಚಾರ್ಯರ ಜೊತೆಗೆ ತಾತ್ಪರ್ಯಚಂದ್ರಿಕಾ ಗ್ರಂಥದಲ್ಲಿ ವಾಕ್ಯಾರ್ಥ ನಡೆಸಿದಾಗ ನಾನು ನೀಡಿದ ಉತ್ತರದಿಂದ ತುಂಬ ಸಂತೋಷಪಟ್ಟರು.

ಮೈಸೂರು ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾಗಿದ್ದ ವಾಸುದೇವ ಸೋಮಯಾಜಿಗಳು ವಿದ್ಯಾರ್ಥಿದೆಶೆಯಲ್ಲಿಯೂ ನಂತರವೂ ನಮ್ಮ ಜೊತೆಗೆ ಅನೇಕ ಬಾರಿ ವಾಕ್ಯಾರ್ಥ ವಿಚಾರದಲ್ಲಿ ಭಾಗವಹಿಸಿ ನಮ್ಮ ಸಮಾಧಾನವನ್ನು ಒಪ್ಪಿಕೊಂಡಿದ್ದಾರೆ. ಇವರು ಕೊನೆಯವರೆಗೂ ನಮ್ಮ ಜೊತೆಗೆ ಅತ್ಯಂತ ಆತ್ಮೀಯತೆಯ ಸಂಬಂಧವನ್ನು ಇಟ್ಟುಕೊಂಡಿದ್ದರು.

ಷಡಂಗ ಶಾಸ್ತ್ರಿಗಳು

ದೆಹಲಿಯಲ್ಲಿ ಭಂಡಾರಕೇರಿ ಶ್ರೀಪಾದಂಗಳವರ ನೇತೃತ್ವದಲ್ಲಿ ನಡೆದ ಅಷ್ಟಗ್ರಹಯೋಗದ ಸಂದರ್ಭದಲ್ಲಿ ನಡೆದ ಮಹಾಯಾಗದಲ್ಲಿ ಏರ್ಪಡಿಸಿದ ವಿದ್ವತ್ ಸಭೆಯಲ್ಲಿ ಕಾಶಿಯ ಪ್ರಕಾಂಡ

ಪಂಡಿತರಾದ ಷಡಂಗ ಶಾಸ್ತ್ರಿಗಳ ಜೊತೆಗೆ ನನಗೆ ನಡೆದ ವಾಕ್ಯಾರ್ಥವನ್ನು ಎಲ್ಲರೂ ವಿಶೇಷವಾಗಿ ಉಲ್ಲೇಖಿಸುತ್ತಾರೆ. ನಮ್ಮ ಗುರುಗಳಾದ ಶ್ರೀ ವಿದ್ಯಾಮಾನ್ಯತೀರ್ಥರೂ ಅತ್ಯಂತ ಅಭಿಮಾನದಿಂದ ಇದನ್ನು ಆಗಾಗ್ಗೆ ಸಭೆಗಳಲ್ಲಿ ಉಲ್ಲೇಖಿಸುತ್ತಾರೆ. ಪ್ರಸಿದ್ಧವಾದ 'ಪಂಚಲಕ್ಷಣೀ' ಗ್ರಂಥದ ವ್ಯಾಖ್ಯಾನ 'ಮಾಥುರಿ'ಯಲ್ಲಿ ಒಂದು ಪದದ ಸಾರ್ಥಕತೆಯ ಬಗ್ಗೆ ಚರ್ಚೆ ನಡೆಯಿತು. ನ್ಯಾಯಶಾಸ್ತ್ರದ ಅತ್ಯಂತ ಜಟಿಲ ಪಾರಿಭಾಷಿಕ ವಿಷಯಕ್ಕೆ ಸಂಬಂಧಿಸಿದ್ದರಿಂದ ಇದರ ಹೆಚ್ಚಿನ ವಿವರಣೆಯನ್ನು ವಿದ್ವಾಂಸರು ಮಾತ್ರ ತಿಳಿಯಬಲ್ಲರು. ಷಡಂಗ ಶಾಸ್ತ್ರಿಗಳ ಪ್ರಶ್ನೆಗೆ ಅಂದು ಯಾವ ವಿದ್ವಾಂಸರೂ ಉತ್ತರಿಸಲಿಲ್ಲ. ಸಭೆಯು ಮರುದಿನಕ್ಕೆ ಮುಂದುವರಿಯಿತು. ಮರುದಿನದ ಸಭೆಯಲ್ಲಿ ನಾವು ಅದಕ್ಕೆ ಉತ್ತರಿಸಲೇಬೇಕಾಗಿತ್ತು. ಶ್ರೀ ವಿದ್ಯಾಮಾನ್ಯತೀರ್ಥರೂ ಈ ಬಗ್ಗೆ ವಿಚಾರ ಮಾಡುತ್ತಿದ್ದರು. ಬೆಳಗಾಗುವವರೆಗೆ ನಮಗೆ ಸರಿಯಾದ ಉತ್ತರವು ದೊರೆಯಲಿಲ್ಲ. ಬೆಳಗ್ಗೆ ವಿಚಾರ ಮಾಡುತ್ತಿದ್ದಾಗ ಆಕಸ್ಮಾತ್ತಾಗಿ ನನಗೆ ಒಂದು ದಾರಿ ಹೊಳೆಯಿತು. ಅಭಾವದ ಬಗ್ಗೆ ತಾರ್ಕಿಕ ಪರಿಭಾಷೆಯನ್ನು ಆಧರಿಸಿ ಒಂದು ಸರಿಯಾದ ಸ್ಥಳವನ್ನು ಹುಡುಕಿ ಉತ್ತರವನ್ನು ಕಂಡುಹಿಡಿದೆ. ಅದನ್ನು ನಮ್ಮ ಗುರುಗಳಲ್ಲಿಯೂ ನಿವೇದಿಸಿದೆ. ಅವರು ವಿಮರ್ಶಿಸಿ ಇದು ಸರಿಯಾದ ಉತ್ತರವೆಂದು ಅತ್ಯಂತ ಹರ್ಷಪಟ್ಟರು. ಸಭೆಯಲ್ಲಿ ಈ ಉತ್ತರವನ್ನು ಮುಂದಿಟ್ಟೆ. ಷಡಂಗ ಶಾಸ್ತ್ರಿಗಳು ಈ ಉತ್ತರವನ್ನು ಕೇಳಿದ ಕೂಡಲೇ ಆಶ್ಚರ್ಯಭರಿತರಾಗಿ ಇಂತಹ ಸೂಕ್ಷ್ಮ ಸ್ಥಳವನ್ನು ಹುಡುಕಿ ಉತ್ತರ ನೀಡಿದ್ದಕ್ಕಾಗಿ ನಮ್ಮನ್ನು ಅಭಿನಂದಿಸಿ ಸಭೆಯಲ್ಲಿಯೂ ಸಾಷ್ಟಾಂಗವಾಗಿ ನಮಸ್ಕರಿಸಿದರು. ಎಲ್ಲರ ಮೆಚ್ಚುಗೆ ಪಡೆಯಲು ಇದೊಂದು ಉತ್ತಮ ಅವಕಾಶವಾಯಿತು. ಕೇವಲ ದೇವರ ಅನುಗ್ರಹದಿಂದಲೇ ನನಗೆ ಈ ಸ್ಫೂರ್ತಿ ದೊರೆಯಿತು.

ಅನಂತಕೃಷ್ಣ ಶಾಸ್ತ್ರಿಗಳು

ಮಹಾಮಹೋಪಾಧ್ಯಾಯ ಅನಂತಕೃಷ್ಣ ಶಾಸ್ತ್ರಿಗಳು ಅದ್ವೈತ ಸಿದ್ಧಾಂತದ ದಿಗ್ಗಜ ಪಂಡಿತರು. ಅಖಿಲ ಭಾರತ ವ್ಯಾಪ್ತಿಯ ಪ್ರಚಂಡ ವಿದ್ವಾಂಸರು. ಸತ್ಯಧ್ಯಾನರ ಜೊತೆಗೆ ಅನೇಕ ದಿನಗಳ ವಾಕ್ಯಾರ್ಥ ವಿಚಾರವನ್ನು ನಡೆಸಿದವರು. ಅವರ ಜೊತೆಗೆ ಅನೇಕ ಬಾರಿ ವಾಕ್ಯಾರ್ಥವಿಚಾರ ಮಾಡುವ ಸಂದರ್ಭ ನನಗೆ ಒದಗಿತ್ತು. ನಮ್ಮ ಪ್ರಥಮ ಪರ್ಯಾಯದ ಅವಧಿಯಲ್ಲಿ ಅವರು ಆಗಮಿಸಿದಾಗ ವಸಂತಮಹಲಿನಲ್ಲಿ ಶ್ರೀ ಭಂಡಾರಕೇರಿ ಸ್ವಾಮಿಗಳು ಮತ್ತು ಇತರ ಪಂಡಿತರ ಸಮಕ್ಷಮ ಚರ್ಚೆ ಪ್ರಾರಂಭವಾಯಿತು. ಅದ್ವೈತ ಮತದಲ್ಲಿ ಜೀವನ್ಮುಕ್ತಿಗೆ ಅವಕಾಶವಿದೆಯೇ ಎಂಬ ವಿಷಯದಲ್ಲಿ ಚರ್ಚೆ ಪ್ರಾರಂಭವಾಯಿತು. ಅನಂತಕೃಷ್ಣ ಶಾಸ್ತ್ರಿಗಳಿಗೆ ಉತ್ತರ ನೀಡಲು ಕಷ್ಟವಾಯಿತು. ಸಂಧ್ಯಾವಂದನೆಯ ವೇಳೆಯಾಯಿತೆಂದು ಹೇಳಿ ಚರ್ಚೆಯನ್ನು ನಿಲ್ಲಿಸಿದರು. ರಾತ್ರಿಯಲ್ಲಿ ನಾನು ನನ್ನ ಕೋಣೆಯಲ್ಲಿರುವಾಗ ಅವರಾಗಿಯೇ ಸಂಜೆಯ ಆಕ್ಷೇಪಕ್ಕೆ ಉತ್ತರ ನೀಡಲು ಉಪಕ್ರಮಿಸಿದರು. ಅದಕ್ಕೆ ನಾವು ಉತ್ತರಿಸಿದಾಗ ಎದ್ದು ಹೋದರು. ಪುನಃ ಬೆಳಗ್ಗೆ ೫ ಗಂಟೆಗೆ ನನ್ನನ್ನು ಎಬ್ಬಿಸಿ ಉತ್ತರವನ್ನು ನೀಡಲು ಆರಂಭಿಸಿದರು. ಸುಧಾ, ನ್ಯಾಯಾಮೃತಗಳಲ್ಲಿ ಇದನ್ನು ಸರಿಯಾಗಿ ವಿಮರ್ಶಿಸಿದ್ದರಿಂದ ಅದರ ಆಧಾರದಲ್ಲಿ ನನಗೆ ಉತ್ತರ ಕೊಡಲು ಕಷ್ಟವಾಗಲಿಲ್ಲ. ಆಗಲೂ ಅವರು ಹಠಾತ್ತನೆ ಎದ್ದು ಹೊರಟಾಗ ನಾನು ಸಲಿಗೆಯಿಂದ ಕೈಹಿಡಿದು ಉತ್ತರಿಸದೆ ಹೋಗಬಾರದೆಂದು ತಡೆದೆ. ಅನಂತಕೃಷ್ಣ ಶಾಸ್ತ್ರಿಗಳು ನಮ್ಮ ಜೊತೆಗೆ ಅಷ್ಟು ಅಭಿಮಾನ ಮತ್ತು ಆತ್ಮೀಯತೆಯಿಂದ ವರ್ತಿಸುತ್ತಿದ್ದರು. ಮದರಾಸಿನಲ್ಲಿ ಅದ್ವೈತ ವೇದಾಂತ ಚರ್ಚೆಗೆ ನನ್ನನ್ನು ವಿಶೇಷವಾಗಿ ಆಹ್ವಾನಿಸಿದರು. ಆಗ ಅದ್ವೈತ ಸಿದ್ಧಿಯಲ್ಲಿ ನಾನು ನಡೆಸಿದ ಶಾಸ್ತ್ರಾರ್ಥ ವಿಚಾರದಿಂದ ಎಲ್ಲಾ ಪಂಡಿತರೂ ಆಶ್ಚರ್ಯಚಕಿತರಾದರು. ದ್ವೈತಶಾಸ್ತ್ರದ ಪಂಡಿತರಾದ ಸ್ವಾಮಿಗಳು ಅದ್ವೈತ ಗ್ರಂಥದಲ್ಲಿ ಇಂತಹ ವಿದ್ವತ್ತೆಯನ್ನು ಹೇಗೆ ಪಡೆದರೆಂದು ಅವರು ವಿಸ್ಮಿತರಾದರು. ಅನಂತಕೃಷ್ಣ ಶಾಸ್ತ್ರಿಗಳು ನನ್ನ ಮತ್ತು

ವಿದ್ಯಾಮಾನ್ಯರ ಜೊತೆಗೆ ಕೊನೆಯವರೆಗೂ ಆತ್ಮೀಯತೆಯ ವ್ಯಕ್ತಿನಿಷ್ಠೆ ಸಂಬಂಧವನ್ನು ಇಟ್ಟುಕೊಂಡಿದ್ದರು.

ಕೊಚ್ಚಿಯ ವಾಕ್ಯಾರ್ಥ

೧೯೫೬ರಲ್ಲಿ ನಾನು ಕೊಚ್ಚಿಗೆ ಭೆಟ್ಟಿಯಿತ್ತಾಗ ಅಲ್ಲಿಯ ಮಹಾರಾಜರಾದ ಪರೀಕ್ಷಿತರು ನಮ್ಮನ್ನು ತಮ್ಮ ಅರಮನೆಯಲ್ಲಿ ಸ್ವಾಗತಿಸಿದರು. ಅವರು ಉತ್ತಮ ವಿದ್ವಾಂಸರೂ ಆಗಿದ್ದರು. ತರ್ಕ ಗ್ರಂಥಗಳಿಗೆ ಸ್ವಯಂ ವ್ಯಾಖ್ಯಾನವನ್ನೂ ಬರೆದವರು. ನ್ಯಾಯ ಶಾಸ್ತ್ರದಲ್ಲಿ ಅನೇಕ ವಿದ್ವಾಂಸರನ್ನೂ ಸಿದ್ಧಗೊಳಿಸಿದವರು. ನಮ್ಮನ್ನು ಶಾಸ್ತ್ರಾರ್ಥವಿಚಾರಕ್ಕೆ ಆಹ್ವಾನಿಸಿದರು. ತಮ್ಮ ಅನೇಕ ವಿದ್ವಾಂಸರ ಜೊತೆಗೆ ನಮ್ಮ ಜೊತೆಗೆ ಶಾಸ್ತ್ರಾರ್ಥ ವಿಚಾರವನ್ನು ಆರಂಭಿಸಿದರು. ಮೊದಲ ೨ ದಿನಗಳಲ್ಲಿ ನ್ಯಾಯ ಶಾಸ್ತ್ರದಲ್ಲಿ ವಿಚಾರವು ನಡೆಯಿತು. ಅವರ ಎಲ್ಲಾ ಪ್ರಶ್ನೆಗಳಿಗೆ ನಾನು ಉತ್ತರ ನೀಡಿದ್ದರಿಂದ ಅವರೆಲ್ಲರಿಗೂ ಸಮಾಧಾನವಾಯಿತು. ನಂತರ ವೇದಾಂತದಲ್ಲಿ ಅದ್ವೈತ ಹಾಗೂ ದ್ವೈತ ವಿಷಯದಲ್ಲಿ ಚರ್ಚೆಯು ಆರಂಭವಾಯಿತು. ಅವರ ಅದ್ವೈತದ ಎಲ್ಲಾ ಪ್ರಶ್ನೆಗಳಿಗೂ ನಾನು ದ್ವೈತದ ರೀತಿಯಿಂದ ಸಮಾಧಾನವನ್ನೂ ಹೇಳಿದೆನು. ಆ ದಿನದಲ್ಲಿ ಅಲ್ಲಿಗೆ ಸಭೆಯು ಮುಕ್ತಾಯವಾಯಿತು. ಮರುದಿನ ನಾನು ಅಲ್ಲಿಂದ ಮುಂದಿನ ಊರಿಗೆ ಪ್ರಯಾಣದ ಸಿದ್ಧತೆಯಲ್ಲಿದ್ದೆ. ಆಗ ಮಹಾರಾಜರು ತಮ್ಮ ಪ್ರತಿನಿಧಿಯ ದ್ವಾರಾ ನಿನ್ನೆಯ ನನ್ನ ಉತ್ತರಕ್ಕೆ ಖಂಡನ ರೂಪವಾಗಿ ಪತ್ರಿಕೆಯನ್ನು ಕಳುಹಿಸಿದರು. ಕೂಡಲೇ ನನ್ನ ಪ್ರಯಾಣವನ್ನು ನಿಲ್ಲಿಸಿ ಅದಕ್ಕೆ ಉತ್ತರವನ್ನು ತತ್‌ಕ್ಷಣದಲ್ಲಿ ಬರೆದು ಅವರಿಗೆ ಕಳುಹಿಸಿ ಈ ಬಗ್ಗೆ ಪುನಃ ಸಭೆಯಲ್ಲಿ ಚರ್ಚೆಗೆ ಸಿದ್ಧನಿದ್ದೇನೆ. ಅಲ್ಲಿಯ ವರೆಗೆ ನನ್ನ ಪ್ರಯಾಣವನ್ನು ಮುಂದುವರಿಸಿದ್ದೇನೆಂದೂ ತಿಳಿಸಿದೆ. ಅವರು ನನ್ನ ಉತ್ತರವನ್ನು ಸ್ವೀಕರಿಸಿ ಚರ್ಚೆಗೆ ಅಲ್ಲಿಯೇ ಮುಕ್ತಾಯವನ್ನು ಮಾಡಿದರು. ಮತ್ತು ನಮ್ಮ ಜೊತೆಗೆ ವಿಶೇಷ ಅಭಿಮಾನ ಹಾಗೂ ಗೌರವವನ್ನು ಇಟ್ಟುಕೊಂಡಿದ್ದರು.

ಕಾಶಿಯಲ್ಲಿ ೧೯೬೬ರಂದು ವಿಶೇಷ ವಿದ್ವತ್ ಸಭೆಯನ್ನು ಏರ್ಪಡಿಸಲಾಗಿತ್ತು. ಕಾಶಿಯ ಎಲ್ಲಾ ಪ್ರಮುಖ ಪಂಡಿತರು ಸೇರಿದ್ದರು. ಅನಂತಕೃಷ್ಣ ಶಾಸ್ತ್ರಿಗಳೂ ಉಪಸ್ಥಿತರಿದ್ದರು. ಅನೇಕ ವಿದ್ವಾಂಸರುಗಳಿಗೆ ಗುರುಗಳಾದ ಅಖಿಲ ಭಾರತ ಪ್ರಸಿದ್ಧಿಯ ಕಾಶಿಯ ಪ್ರಖ್ಯಾತ ಪಂಡಿತ ರಾಜೇಶ್ವರ ಶಾಸ್ತ್ರಿ ದ್ರಾವಿಡ ಅವರೂ ಬಂದಿದ್ದರು. ದ್ವೈತಾದ್ವೈತ ವಿಚಾರ ಹೊರತುಪಡಿಸಿ ಬೇರೆ ವಿಷಯಗಳಲ್ಲಿಯೇ ಶಾಸ್ತ್ರಾರ್ಥ ನಡೆಯಬೇಕೆಂದು ಅವರು ಶರ್ತವನ್ನೂ ಮೊದಲೇ ಹಾಕಿದ್ದರು. ಅದರಂತೆ ತರ್ಕ, ವ್ಯಾಕರಣಗಳಲ್ಲಿ ಸೌಹಾರ್ದ ವಾತಾವರಣದಲ್ಲಿ ವಾಕ್ಯಾರ್ಥ ವಿಚಾರವು ನಡೆಯಿತು. ಅನಂತರ ರಾಜೇಶ್ವರ ಶಾಸ್ತ್ರಿಗಳ ಶಿಷ್ಯರಾದ ಹೆಬ್ಬಾರ ಶಾಸ್ತ್ರಿಗಳು ಶಂಕರ ಭಾಷ್ಯದ ಈಕ್ಷತ್ಯಧಿಕರಣದ ವ್ಯಾಖ್ಯಾನದ ಮೇಲೆ ಅನೌಚಿತ್ಯವನ್ನು ಪೂರ್ವಪಕ್ಷ ರೀತಿಯಲ್ಲಿ ಮುಂದಿಟ್ಟರು. ಕೆಲವರು ಅದಕ್ಕೆ ಸಮಾಧಾನ ನೀಡುವ ಪ್ರಯತ್ನ ಮಾಡಿದರು. ನಾನು ಶಂಕರ ಭಾಷ್ಯದ ಅನೌಚಿತ್ಯವನ್ನೇ ಬಲವಾಗಿ ಸಮರ್ಥಿಸಿದೆ. ನಾನು ಸುಧಾ, ಚಂದ್ರಿಕೆಗಳ ಆಧಾರದಲ್ಲಿ ನನ್ನ ಸಮರ್ಥನೆಯನ್ನು ಮಂಡಿಸಿದ್ದರಿಂದ ಅಲ್ಲಿಯ ಯಾವ ಪಂಡಿತರಿಗೂ ನನ್ನ ವಾದವನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ. ಒಂದು ರೀತಿಯ ಮೌನದ ವಾತಾವರಣವೇ ನಿರ್ಮಾಣವಾಯಿತು. ಆಗ ರಾಜೇಶ್ವರ ಶಾಸ್ತ್ರಿಗಳು ಸಿಟ್ಟಿನಿಂದ ''ದ್ವೈತಾದ್ವೈತ'' ಚರ್ಚೆಗೆ ಅವಕಾಶವಿರಬಾರದೆಂದು ಮೊದಲೇ ತಿಳಿಸಿದ್ದೆ. ಅದನ್ನು ಮೀರಿ ''ದ್ವೈತಾದ್ವೈತ'' ಚರ್ಚೆಯನ್ನು ನಡೆಸಿದ್ದು ಯಾಕೆ? ಎಂದು ಗರ್ಜಿಸಿದರು. ಸಭಾತ್ಯಾಗ ಮಾಡುವುದಾಗಿ ಘೋಷಿಸಿದರು. ಸಭೆಯು ಸ್ತಬ್ಧವಾಯಿತು. ನಾನು ಇದರಿಂದ ಸ್ವಲ್ಪವೂ ವಿಚಲಿತನಾಗಲಿಲ್ಲ. ನಾನು ಸಮಾಧಾನದಲ್ಲಿಯೇ ಹೇಳಿದೆ. ''ದ್ವೈತಾದ್ವೈತ'' ವಿವಾದವನ್ನು ಈ ಸಭೆಯಲ್ಲಿ ಪ್ರಾರಂಭಿಸಲಿಲ್ಲ. ನಿಮ್ಮ ಪಂಡಿತರೇ ಆ ಪ್ರಶ್ನೆ ಎತ್ತಿದ್ದರಿಂದ ನಾನು ಉತ್ತರಿಸಿದೆ. ನಾನು ಯಾವುದೇ ರೀತಿಯಲ್ಲಿ ಶರ್ತವನ್ನೂ ಉಲ್ಲಂಘಿಸಿಲ್ಲ. ಆ ಮಾತನ್ನು ಎಲ್ಲರೂ ಒಪ್ಪಿದರು. ಆದರೂ

ಸಭೆಯ ಶಾಂತಿ ಭಂಗವಾದುದರಿಂದ ಅಲ್ಲಿಯೇ ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಈ ಘಟನೆಯಿಂದ ರಾಜೇಶ್ವರ ಶಾಸ್ತ್ರಿಗಳಿಗೆ ನಮ್ಮಲ್ಲಿ ವಿಶೇಷ ಅಭಿಮಾನವುಂಟಾಯಿತು. ೧೯೬೮ರ ನಮ್ಮ ಪರ್ಯಾಯ ಸಮಯದಲ್ಲಿ ಉಡುಪಿಗೆ ಬಂದು ನಮ್ಮ ಸಭೆಯಲ್ಲಿ ಭಾಗವಹಿಸಿ ನಮ್ಮಿಂದ ವಿಶೇಷ ಸಮ್ಮಾನವನ್ನೂ ಸ್ವೀಕರಿಸಿದರು. ಹೀಗೆ ನಾವು ನಡೆಸಿದ ಎಲ್ಲಾ ಶಾಸ್ತ್ರಾರ್ಥ ವಾದಗಳಿಂದ ಯಾವುದೇ ವಿರಸವುಂಟಾಗದೆ ಪರಸ್ಪರ ಅಭಿಮಾನ, ಆತ್ಮೀಯತೆಗಳು ಹೆಚ್ಚು ಬೆಳೆಯಿತು. ಕಾಂಚಿಯ ಪರಮಾಚಾರ್ಯರಾದ ಚಂದ್ರಶೇಖರ ಭಾರತೀ ಸ್ವಾಮಿಗಳು ನಮ್ಮನ್ನು ಕರೆಸಿ ದ್ವೈತದ ಬಗ್ಗೆ ಅನೇಕ ಪ್ರಶ್ನೆ, ಆಕ್ಷೇಪಗಳಿಗೆ ನನ್ನಿಂದ ಸಮಾಧಾನ ಪಡೆದು ಅತ್ಯಂತ ಸಂತೋಷವನ್ನು ವ್ಯಕ್ತಪಡಿಸಿದರು. ಮದ್ರಾಸಿನಲ್ಲಿ ೧೯೫೮ರಲ್ಲಿ ನಾವಿಬ್ಬರೂ ಒಂದೇ ವೇದಿಕೆಯಲ್ಲಿ ಉಪನ್ಯಾಸ ನೀಡಿ ಪರಸ್ಪರ ಧಾರ್ಮಿಕ ಸಹಕಾರದ ಬಗ್ಗೆ ಸಂಯುಕ್ತ ಘೋಷಣೆಯನ್ನು ಹೊರಡಿಸಿದ್ದೆವು. ನಮಗೂ, ಅವರಿಗೂ ಕೊನೆಯವರೆಗೆ ವಿಶೇಷ ಅಭಿಮಾನ, ಆತ್ಮೀಯತೆಗಳು ಬೆಳೆದಿತ್ತು. ನನ್ನ ಹರಿಜನ ಕೇರಿ ಸಂದರ್ಶನದ ಬಗ್ಗೆ ಅವರಿಗೆ ಸಮಾಧಾನವಿಲ್ಲದಿದ್ದರೂ ನಮ್ಮಲ್ಲಿ ಅವರಿಗಿದ್ದ ಪ್ರೀತಿ, ಅಭಿಮಾನಗಳಿಗೆ ಸ್ವಲ್ಪವೂ ಚ್ಯುತಿ ಬಂದಿಲ್ಲ. ಈಗಿನ ಶ್ರೀ ವಿಜಯೀಂದ್ರ ಸರಸ್ವತಿಗಳ ಜೊತೆಗೂ ಅದೇ ಸ್ನೇಹ, ಸಂಬಂಧವು ಬೆಳೆದುಕೊಂಡು ಬಂದಿದೆ.

ಶೃಂಗೇರಿಯ ಶಂಕರಾಚಾರ್ಯರಾದ ಅಭಿನವ ವಿದ್ಯಾತೀರ್ಥರಿಗೂ ನಮಗೂ ೧೯೫೬ರಲ್ಲಿ ತಮಿಳುನಾಡಿನ ಗೋಬಿಚೆಟ್ಟಿಪಾಳ್ಯದಲ್ಲಿ ನ್ಯಾಯಶಾಸ್ತ್ರದಲ್ಲಿ ಸೌಹಾರ್ದಪೂರ್ವಕ ವಾಕ್ಯಾರ್ಥ ವಿಚಾರವು ನಡೆದಿತ್ತು. ಅನಂತರ ಬೆಂಗಳೂರಿನಲ್ಲಿ ಶೃಂಗೇರಿ ಮಠದ ವಿದ್ವತ್ ಸಭೆಯಲ್ಲಿ ಭಾಗವಹಿಸಿ ವಾಕ್ಯಾರ್ಥ ವಿಚಾರದಲ್ಲಿ ಪಾಲುಗೊಂಡಿದ್ದೆ. ತಮ್ಮ ಶಿಷ್ಯರು ಅಲ್ಲಿ ನ್ಯಾಯಶಾಸ್ತ್ರದ ಅನುವಾದವನ್ನೂ ಮಾಡಿದರು. ಶೃಂಗೇರಿ ಮಠದ ಅಭಿನವ ವಿದ್ಯಾತೀರ್ಥರೂ, ಈಗಿನ ಪೀಠಾಧಿಪತಿಗಳಾದ ಭಾರತೀತೀರ್ಥರೂ ಉಡುಪಿ, ಶೃಂಗೇರಿಗಳಲ್ಲಿಯೂ ಬೇರೆ ಬೇರೆ ಸ್ಥಳಗಳಲ್ಲಿಯೂ ಭೆಟ್ಟಿಯಾಗಿ ಎರಡೂ ಮಠಗಳಿಗೂ ಪರಸ್ಪರ ಆತ್ಮೀಯತೆಯ ಸಂಪರ್ಕವು ವಿಶೇಷವಾಗಿ ಬೆಳೆದಿದೆ.

ಹೀಗೆಯೇ ಪುಣೆ, ಪ್ರಯಾಗ ಮುಂತಾದ ಕಡೆಗಳಲ್ಲಿಯೂ ವಿದ್ವತ್ ಸಭೆಯನ್ನು ನಡೆಸಿ ದೇವರ ಅನುಗ್ರಹದಿಂದ ಎಲ್ಲಾ ಕಡೆಗಳಲ್ಲಿಯೂ ದ್ವೈತ ಸಿದ್ಧಾಂತದ ವಿಷಯದಲ್ಲಿ ಎಲ್ಲಾ ವಿದ್ವಾಂಸರಿಗೂ ಸಮರ್ಪಕವಾಗಿ ಉತ್ತರ ನೀಡುವ ಸುಯೋಗವು ನಮಗೆ ದೊರೆಯಿತು.

ರಾಮಜನ್ಮಭೂಮಿ

ನಮ್ಮ ಮೂರನೆಯ ಪರ್ಯಾಯದಲ್ಲಿ ೧೯೮೫ರಲ್ಲಿ ವಿಶ್ವಹಿಂದು ಪರಿಷತ್ತಿನ ಧರ್ಮಸಂಸತ್ತಿನ ಅಧಿವೇಶನವು ಉಡುಪಿಯಲ್ಲಿ ನಡೆಯಿತು. ಭಾರತದ ಪ್ರಮುಖ ಸಂತರೆಲ್ಲರೂ ಅದರಲ್ಲಿ ಭಾಗವಹಿಸಿದ್ದರು. ಭಾರತದ ಸಹಸ್ರಾರು ಸಂತರು ಅಲ್ಲಿ ಸಮಾವೇಶಗೊಂಡಿದ್ದರು. ಉಡುಪಿಯ ಸ್ವಾಗತ ಹಾಗೂ ಎಲ್ಲಾ ಏರ್ಪಾಡುಗಳ ಬಗ್ಗೆ ಎಲ್ಲರೂ ಸಂತೋಷಪಟ್ಟಿದ್ದರು. ಅಯೋಧ್ಯೆಯಲ್ಲಿಯ ಬಾಬ್ರಿ ಮಸೀದಿಯು ರಾಮನ ಅವತಾರ ಸ್ಥಾನವೆಂಬ ಭಾವನೆಯು ಶತಮಾನಗಳಿಂದಲೂ ಜನರ ಮನಸ್ಸಿನಲ್ಲಿ ಬೇರೂರಿತ್ತು. ಅಯೋಧ್ಯೆಗೆ ಹೋಗುವ ಯಾತ್ರಿಕರೆಲ್ಲರೂ ಆ ಮಸೀದಿಯ ಒಳಗೆ ಅದು ರಾಮನು ಅವತರಿಸಿದ ಜಾಗವೆಂದು ಅಲ್ಲಿ ದೂರದಿಂದಲೇ ಗೌರವವನ್ನು ವ್ಯಕ್ತಪಡಿಸಿ ಹೋಗುತ್ತಿದ್ದರು. ವಿಶ್ವಹಿಂದು ಪರಿಷತ್ತು ಈ ಭಾವನೆಯನ್ನು ವ್ಯಕ್ತಪಡಿಸಿದ್ದಲ್ಲ. ಅದಕ್ಕಿಂತ ಮುಂಚೆ ಶತಮಾನಗಳಿಂದಲೂ ಈ ಭಾವನೆಯು ಬೆಳೆದುಕೊಂಡು ಬಂದಿತ್ತು. ಸ್ವಾತಂತ್ರ್ಯವು ದೊರೆತ ನಂತರ ೧೯೪೯ರಲ್ಲಿ ಸ್ಥಳೀಯ

ಹಿಂದೂ ಜನರು ರಾಮಜನ್ಮಭೂಮಿ ಮುಕ್ತ ಆಂದೋಲನವನ್ನು ಆರಂಭಿಸಿದ್ದರು. ಕಾಂಗ್ರೆಸ್ಸಿನಿಂದಾರಂಭಿಸಿ ಎಲ್ಲಾ ಪಕ್ಷದವರೂ ಈ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ೧೯೪೯ರಂದು ಒಂದು ದಿನ ಬೆಳಗ್ಗೆ ಶ್ರೀರಾಮನ ಬಾಲಮೂರ್ತಿಯು ಪ್ರಕಟವಾಯಿತು ಎಂಬ ಪ್ರತೀತಿಯಿದೆ. ಅಲ್ಲಿ ಪೂಜಾದಿಗಳೂ ಆರಂಭವಾದವು. ಪ್ರತಿವರ್ಷವೂ ಎಲ್ಲಾ ಪಕ್ಷದ ಹಿಂದುಗಳೂ ಸೇರಿ ಪ್ರಾಕಟ್ಯದಿನವನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಹೊರಗೆ ಮಸೀದಿಯ ಸಮೀಪದ ಜಾಗದಲ್ಲಿ ಅಖಂಡ ನಾಮ ಸಂಕೀರ್ತನವು ನಡೆಯುತ್ತಿತ್ತು. ಘರ್ಷಣೆಯಾಗಬಾರದೆಂಬ ದೃಷ್ಟಿಯಿಂದ ಸರಕಾರವು ರಾಮನ ಮೂರ್ತಿಯಿರುವ ಸ್ಥಳಕ್ಕೆ ಬೀಗ ಹಾಕಿ ಬಂದೋಬಸ್ತಿನ ಏರ್ಪಾಡು ಮಾಡಿತ್ತು. ೧೯೬೦ರಲ್ಲಿ ನಾನೂ ಅಯೋಧ್ಯೆಗೆ ಹೋಗಿ ಬಾಬ್ರಿ ಮಸೀದಿಯ ಸನಿಹಕ್ಕೆ ಬಂದು ಅಖಂಡ ನಾಮ ಸಂಕೀರ್ತನೆ ಮಾಡುವುದನ್ನು ನೋಡಿ ಹೋಗಿದ್ದೆ. ಜನ್ಮಭೂಮಿ ಮಸೀದಿಯೆಂದೇ ಆ ಮಸೀದಿಗೆ ಪ್ರಚಲಿತವಾದ ಹೆಸರು. ಉಡುಪಿಯ ಸಮ್ಮೇಳನದಲ್ಲೂ ''ಸರಕಾರವು ಬೀಗವನ್ನು ತೆರೆದು ಪೂಜೆ, ದರ್ಶನಗಳಿಗೆ ಅವಕಾಶ ನೀಡಬೇಕು. ಇಲ್ಲದಿದ್ದರೆ ಬೀಗವನ್ನೇ ಮುರಿಯುವ ಆಂದೋಲನವನ್ನು ನಡೆಸಬೇಕು'' ಎಂಬ ಠರಾವನ್ನು ಸ್ವೀಕರಿಸಲಾಯಿತು. ರಾಮಜನ್ಮ ಭೂಮಿಯ ಬಗ್ಗೆ ನಮ್ಮ ಪರ್ಯಾಯದಲ್ಲಿ ಉಡುಪಿಯಲ್ಲಿ ಕೈಗೊಂಡ ಮಹತ್ತ್ವದ ನಿರ್ಣಯವಾಗಿದೆ. ಶಹಬಾನು ಪ್ರಕರಣದಲ್ಲಿ ಕೋರ್ಟಿನ ನಿರ್ಣಯವನ್ನು ಮೂಲೆಗುಂಪು ಮಾಡಿ ಮುಸಲ್ಮಾನರನ್ನು ಸಂತೈಸಿದ ರಾಜೀವಗಾಂಧಿ ಸರಕಾರವು ಹಿಂದೂಗಳನ್ನು ಸಂತೋಷ ಪಡಿಸುವುದಕ್ಕಾಗಿ ಬೀಗ ತೆರೆದು ಪೂಜಾ ದರ್ಶನಗಳಿಗೆ ಅವಕಾಶ ಮಾಡಿತು. ಅಂತೂ ಉಡುಪಿಯ ನಿರ್ಣಯಕ್ಕೆ ವಿಜಯ ದೊರೆಯಿತು. ಈ ವಿಷಯದಲ್ಲಿ ರಾಜೀವಗಾಂಧಿಯವರನ್ನೂ ನಾವು ಅಭಿನಂದಿಸಬೇಕಾಗಿದೆ.

ಆದರೆ ವಿಷಯವು ಅಲ್ಲಿಗೇ ಮುಕ್ತಾಯವಾಗಲಿಲ್ಲ. ರಾಮಮಂದಿರವನ್ನು ಧ್ವಂಸ ಮಾಡಿ ಕಟ್ಟಿದ ಈ ಮಸೀದಿಯು ಹಿಂದೂಗಳ ಅವಮಾನ ಹಾಗೂ ಅವರ ಮೇಲಿನ ಆಕ್ರಮಣದ ಸಂಕೇತವಾಗಿದೆ. ಇದನ್ನು ನಾಶಪಡಿಸಿ ಹೊಸ ಮಂದಿರವನ್ನೇ ಕಟ್ಟಬೇಕೆಂಬ ಚಳುವಳಿಯು ಪ್ರಾರಂಭವಾಯಿತು. ಹೊಸ ಮಂದಿರ ಶಿಲಾನ್ಯಾಸ ಸಮಾರಂಭದ ಬಗ್ಗೆ ಭಾರೀ ಏರ್ಪಾಡು ಈ ಬಗ್ಗೆ ದೇಶವ್ಯಾಪೀ ಪ್ರಚಾರವೂ ನಡೆಯಿತು. ಕೊನೆಗೆ ಪ್ರಧಾನಮಂತ್ರಿ ರಾಜೀವಗಾಂಧಿ ಹಾಗೂ ಉತ್ತರಪ್ರದೇಶದ ಮುಖ್ಯಮಂತ್ರಿ ಎನ್. ಡಿ. ತಿವಾರಿಯವರು ಜನರ ಒತ್ತಡದಿಂದ ಶಿಲಾನ್ಯಾಸಕ್ಕೆ ಅನುಮತಿಯನ್ನೂ ನೀಡಿದರು. ಶಿಲಾನ್ಯಾಸ ಸಮಾರಂಭದಲ್ಲಿ ನಾವೂ ಪಾಲುಗೊಂಡಿದ್ದೇವೆ. ರಾಮಜನ್ಮಭೂಮಿ ಟ್ರಸ್ಟ್‌ನಲ್ಲಿ ನಾವೂ ಒಬ್ಬ ಟ್ರಸ್ಟಿಗಳಾಗಿದ್ದೇವು. ಮುಂದೆ ವಿ. ಪಿ. ಸಿಂಗರು ಪ್ರಧಾನಮಂತ್ರಿಗಳಾಗಿರುವಾಗ ಮಂದಿರ ನಿರ್ಮಾಣಕ್ಕೆ ಕರಸೇವೆಯ ಕಾರ್ಯಕ್ರಮವನ್ನು ರೂಪಿಸಲಾಯಿತು. ದೇಶದ ಮೂಲೆ ಮೂಲೆಗಳಿಂದ ಲಕ್ಷಾಂತರ ಜನರನ್ನು ಸೇರಿಸುವ ಕಾರ್ಯವು ಪ್ರಾರಂಭವಾಯಿತು. ಹೀಗಾಗಿ ವಿ. ಪಿ. ಸಿಂಗ್ ಸರಕಾರಕ್ಕೆ ಇದು ದೊಡ್ಡ ಸಮಸ್ಯೆಯಾಯಿತು. ಆಗ ಆಂಧ್ರಪ್ರದೇಶದ ರಾಜ್ಯಪಾಲರಾಗಿದ್ದ ಕೃಷ್ಣಕಾಂತರು ಸಂತರ ಸಹಕಾರದಿಂದ ಇದನ್ನು ಬಗೆಹರಿಸಲು ಪ್ರಯತ್ನವನ್ನು ಆರಂಭಿಸಿದರು. ಈ ಬಗ್ಗೆ ರಾಮಕೃಷ್ಣ ಹೆಗಡೆ, ಬೊಮ್ಮಾಯಿ ಮೊದಲಾದವರಿಂದಲೂ ನನಗೆ ಸಂದೇಶವೂ ತಲುಪಿತ್ತು. ಕೃಷ್ಣಕಾಂತರು ವಿಶೇಷ ವಿಮಾನದಲ್ಲಿ ಉಡುಪಿಗೆ ಆಗಮಿಸಿ ನಮ್ಮನ್ನು ಭೆಟ್ಟಿಯಾಗಿ ಮಾತುಕತೆ ನಡೆಸಿದರು. ನಂತರ ನಾನು ಬೆಂಗಳೂರಿನಲ್ಲಿದ್ದಾಗ ಕೃಷ್ಣಕಾಂತರು ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಆಗಮಿಸಿ ನನ್ನನ್ನು ದಿಲ್ಲಿಗೆ ಕರೆದುಕೊಂಡು ಹೋದರು. ವಿಶ್ವಹಿಂದೂ ಪರಿಷತ್ತು ರಾಮಜನ್ಮಭೂಮಿಯ ಬಗ್ಗೆ ಯಾವುದೇ ಸಂಧಾನಕ್ಕೆ ಅವಕಾಶವಿಲ್ಲವೆಂದು ನಿರ್ಧರಿಸಿದ್ದರೂ ನಾನು ಕೈಹಾಕಿದ್ದರಿಂದ ಎಲ್ಲಾ ಪ್ರಮುಖ ಸಂತರೂ ದಿಲ್ಲಿಗೆ ಆಗಮಿಸಿದ್ದರು. ''ರಾಮಜನ್ಮಭೂಮಿಯನ್ನು ಸಂತರಿಗೆ ಒಪ್ಪಿಸಬೇಕು. ಅಲ್ಲಿದ್ದ ಮಸೀದಿಯನ್ನು ಒಡೆಯದೆ ಹಾಗೆಯೇ ಉಳಿಸಿಕೊಂಡು ದೇವಸ್ಥಾನದ ರೂಪು ಬರುವಂತೆ ಕೆಲವೊಂದು ಬದಲಾವಣೆಯನ್ನು ಮಾತ್ರ

ಮಾಡುವುದು'' ಇದು ಕಾಂಚೀ ಶಂಕರಾಚಾರ್ಯರೂ ನಾವೂ ಆಲೋಚಿಸಿ ರೂಪಿಸಿದ ಸೂತ್ರವಾಗಿತ್ತು. ಮಸೀದಿಯನ್ನು ಒಡೆಯದಿರುವುದರಿಂದ ಮುಸಲ್ಮಾನರ ಮನಸ್ಸಿಗೂ ಆಘಾತವಾಗುವುದಿಲ್ಲ. ಅವರನ್ನೂ ಇದಕ್ಕೆ ಒಪ್ಪಿಸಬಹುದೆಂದು ಅನೇಕ ರಾಜಕಾರಣಿಗಳ ಅಭಿಪ್ರಾಯವಾಗಿತ್ತು. ನನ್ನ ಈ ಸೂತ್ರವನ್ನು ವಿಶ್ವಹಿಂದು ಪರಿಷತ್ತು ಒಪ್ಪಲಿಲ್ಲ. ಆದರೂ ನಮ್ಮ ಹಾಗೂ ಕಾಂಚೀ ಶಂಕರಾಚಾರ್ಯರ ಮೇಲಿನ ಗೌರವದಿಂದ ಮನಸ್ಸಿಲ್ಲದಿದ್ದರೂ ಇದನ್ನು ಒಪ್ಪುವ ನಿರ್ಧಾರವನ್ನು ನಂತರ ಸಮಿತಿಯು ಮಾಡಿತು. ಆ ದಿನದ ಪತ್ರಿಕಾಗೋಷ್ಠಿಯಲ್ಲಿ ರಾಮಜನ್ಮಭೂಮಿ ಮುಕ್ತ ಸಮಿತಿಯ ಅಧ್ಯಕ್ಷರು ಈ ವಿಚಾರವನ್ನು ಘೋಷಿಸಿಯೂ ಆಗಿತ್ತು. ರಾಷ್ಟ್ರೀಯ ಪತ್ರಿಕೆಗಳ ಮುಖಪುಟಗಳಲ್ಲಿ ಇದು ಪ್ರಕಟವೂ ಆಯಿತು. ಆದರೆ ನನ್ನ ಈ ಸೂತ್ರದ ಬಗ್ಗೆ ವಿಶ್ವಹಿಂದು ಪರಿಷತ್‌ನ ಪ್ರಮುಖ ಕಾರ್ಯಕರ್ತರಿಂದ ಭಾರೀ ವಿರೋಧವುಂಟಾಯಿತು. ಹಿಂದಿನ ದಿನದ ನಿರ್ಣಯವನ್ನು ಒಮ್ಮೆಲೆ ವಿಚಾರ ವಿಮರ್ಶೆಯಿಲ್ಲದೆ ಬದಲಾಯಿಸುವ ನಿರ್ಧಾರಕ್ಕೆ ನಾನು ಮಾತ್ರ ಸಹಿ ಹಾಕಲಿಲ್ಲ. ಉಳಿದವರೆಲ್ಲರೂ ಸಹಿ ಹಾಕಿದರು. ನನ್ನನ್ನು ಸಮಾಧಾನಪಡಿಸಲು ಎಲ್ಲರೂ ಪ್ರಯತ್ನಿಸಿದರು. ಇದು ನನ್ನ ಶಾಂತಿ ಸಂಧಾನಕ್ಕೆ ಆದ ದೊಡ್ಡ ಹಿಂದೇಟು. ಅನಂತರದಲ್ಲಿ ವಿಶ್ವಹಿಂದು ಪರಿಷತ್ತಿನಿಂದ ಹೊರತಾಗಿ ಪ್ರಮುಖ ಹಿಂದು, ಮುಸ್ಲಿಂ ಸಂತರ ವಿಚಾರ ವಿನಿಮಯ ಸಭೆಯನ್ನು ಏರ್ಪಡಿಸಲು ಪ್ರಯತ್ನಿಸಿದೆ. ಆಂಧ್ರ ಭವನದಲ್ಲಿ ಆಂಧ್ರ ರಾಜ್ಯಪಾಲ ಕೃಷ್ಣಕಾಂತಜೀ ಮತ್ತು ಬಿಹಾರ ರಾಜ್ಯಪಾಲ ಸಲೀಮರ ಉಪಸ್ಥಿತಿಯಲ್ಲಿ ಈ ಸಭೆಯು ನಡೆಯಿತು. ಬಹಳ ಸೌಹಾರ್ದದ ವಾತಾವರಣದಲ್ಲಿಯೇ ಈ ಸಭೆಯು ನಡೆಯಿತು. ನನ್ನ ಜೊತೆಗೆ ವಿಶ್ವಹಿಂದು ಪರಿಷತ್ತಿನ ಪ್ರಮುಖ ಸಂತರಾದ ಸತ್ಯಮಿತ್ರಾನಂದಜೀ, ಸ್ವಾಮಿ ಚಿನ್ಮಯಾನಂದ ಮುಂತಾದವರೂ ಭಾಗವಹಿಸಿದ್ದರು. ಲಖನೋದ ಅಲಿಮಿಯಾನ್ ಮುಂತಾದ ರಾಷ್ಟ್ರದ ಪ್ರಮುಖ ಮುಸ್ಲಿಂ ಸಂತರು ಬಂದಿದ್ದರು. ನಾವು ಸನ್ಯಾಸಿಗಳು. ಭಿಕ್ಷೆ ಬೇಡುವುದು ನಮ್ಮ ಧರ್ಮ. ರಾಮಜನ್ಮಭೂಮಿಯ ಜಾಗದಲ್ಲಿರುವ ಬಾಬ್ರಿ ಮಸೀದಿಯನ್ನು ನಮಗೆ ಬಿಟ್ಟುಕೊಡಿ ಎಂದು ಇಡೀ ಮುಸ್ಲಿಂ ಸಮಾಜದಲ್ಲಿ ನಾವು ಭಿಕ್ಷೆಯನ್ನು ಕೇಳುತ್ತೇವೆಂದು ಹಿಂದೂ ಸಂತರು ತಮ್ಮ ಬೇಡಿಕೆಯನ್ನು ಮುಂದಿಟ್ಟರು. ಮುಸ್ಲಿಂ ಸಂತರಿಂದ ಈ ಬಗ್ಗೆ ಒಳ್ಳೆಯ ಪ್ರತಿಕ್ರಿಯೆಯೇ ಬಂದಿತು. ಅವರು ಈ ಬೇಡಿಕೆಯನ್ನು ನಿರಾಕರಿಸಲಿಲ್ಲ. ಮುಸಲ್ಮಾನರಿಗೆ ಆ ಪ್ರದೇಶದಲ್ಲಿ ಯಾವುದಾದರೂ ಒಂದು ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ ಕೊಡುವಿರಾ ? ಎಂದು ಮುಸ್ಲಿಂ ಸಂತರು ನಮ್ಮಲ್ಲಿ ಪ್ರಶ್ನಿಸಿದರು. ಅವಕಾಶ ಕೊಡಲು ನಾವು ಸಂತೋಷದಿಂದ ಒಪ್ಪಿದೆವು. ವಿವಾದಿತ ಪ್ರದೇಶದಲ್ಲಿ ಕರಸೇವಾ ಕಾರ್ಯಕ್ರಮವನ್ನು ಮೊದಲು ಸ್ಥಗಿತಗೊಳ್ಳದಂತೆ ಬಿಹಾರ ರಾಜ್ಯಪಾಲರಾದ ಸಲೀಮರು ಸೂಚಿಸಿದರು. ನಮ್ಮ ಬೇಡಿಕೆಯನ್ನು ಮುಸ್ಲಿಂ ಸಂತರು ಸ್ವೀಕರಿಸಿ ವಿವಾದವನ್ನು ಹಿಂದೆಗೆದುಕೊಂಡರೆ ಅದು ವಿವಾದಿತ ಪ್ರದೇಶವೇ ಆಗಲಾರದು. ಆದುದರಿಂದ ಕರಸೇವೆಯನ್ನು ನಿಲ್ಲಿಸುವ ಅವಶ್ಯಕತೆಯಿಲ್ಲವೆಂದು ನಾನು ಪ್ರತಿಪಾದಿಸಿದೆ. ಕೊನೆಗೆ ತಾತ್ವಿಕವಾಗಿ ಅವರು ನಮ್ಮ ಬೇಡಿಕೆಯನ್ನು ಸ್ವೀಕರಿಸಿದರು. ಆದರೆ ಮುಸ್ಲಿಂ ಸಮಾಜವು ಇದನ್ನು ಒಪ್ಪುವಂತೆ ಪೂರ್ವಸಿದ್ಧತೆಯನ್ನು ಮಾಡಬೇಕಾಗಿದೆ. ಆದ್ದರಿಂದ ಕಾಲಾವಕಾಶ ಬೇಕೆಂದು ಬಯಸಿದರು. ಈ ವಿವಾದವನ್ನು ಬಗೆಹರಿಸಲು ಹಿಂದೂ-ಮುಸ್ಲಿಂ ಸಂತರನ್ನೊಳಗೊಂಡ ಒಂದು ಸಮಿತಿಯನ್ನೂ ರಚಿಸಲಾಯಿತು. ಅಷ್ಟರಲ್ಲಿ ಬಿಹಾರದಲ್ಲಿ ಅದ್ವಾನಿ ರಥಯಾತ್ರೆಯನ್ನು ತಡೆದು ಅದ್ವಾನಿಯವರ ಬಂಧನ, ವಿ. ಪಿ. ಸಿಂಗ್ ಸರಕಾರದ ಪತನ ಮುಂತಾದ ಘಟನೆಗಳು ಸಂಭವಿಸಿದ್ದರಿಂದ ಆ ಸಮಿತಿಯ ಸಮಾವೇಶವೇ ನಡೆಯಲಿಲ್ಲ. ಹೀಗಾಗಿ ರಾಮಜನ್ಮಭೂಮಿಯ ಬಗ್ಗೆ ನಮ್ಮ ಶಾಂತಿ ಪ್ರಯತ್ನವು ವಿಫಲವಾಯಿತು.

ನನ್ನ ಬಂಧನ

ನಂತರದಲ್ಲಿ ಪೂರ್ವನಿಶ್ಚಿತ ರೀತಿಯಲ್ಲಿ ಕರಸೇವಾ ಕಾರ್ಯಕ್ರಮದ ಏರ್ಪಾಡು ಪ್ರಾರಂಭವಾಯಿತು. ದೇಶದ ಮೂಲೆ ಮೂಲೆಗಳಿಂದ ಕರಸೇವಕರು ಅಯೋಧ್ಯೆಗೆ ಹೊರಟರು. ಉತ್ತರ ಪ್ರದೇಶದ ಗಡಿಯಲ್ಲಿ ಸಂತರ ಕರಸೇವಕರ ಬಂಧನ ನಡೆಯಿತು. ನಾನು ಹಿರಿಯ, ಕಿರಿಯ ಪಲಿಮಾರು ಶ್ರೀಗಳವರು, ಹಿರಿಯ, ಕಿರಿಯ ಅದಮಾರು ಶ್ರೀಗಳವರು, ಸುಬ್ರಹ್ಮಣ್ಯ ಸ್ವಾಮಿಗಳು, ಕಿರಿಯ ಪೇಜಾವರ, ಭಂಡಾರಕೇರಿ ಶ್ರೀಗಳವರು, ಬಾಳೆಗಾರು ಸ್ವಾಮಿಗಳು ಜೊತೆಯಾಗಿ ೪-೫ ವಾಹನಗಳಲ್ಲಿ ಜಬ್ಬಲ್‌ಪುರ್ ಮಾರ್ಗವಾಗಿ ಅಯೋಧ್ಯೆಗೆ ಹೊರಟೆವು. ದಾರಿಯಲ್ಲಿ ಉತ್ತರ ಪ್ರದೇಶ - ಮಧ್ಯಪ್ರದೇಶ ಗಡಿಯಲ್ಲಿ ಮೇಲಿನ ಅಧಿಕಾರಿಗಳು ನಮ್ಮನ್ನು ತಡೆದು ನಮ್ಮೆಲ್ಲರ ಬಂಧನವಾಗಿದೆಯೆಂದು ಘೋಷಿಸಿ ಒಂದು ದೇವಾಲಯದಲ್ಲಿ ನಮಗೆ ಪೂಜಾದಿಗಳನ್ನು ಮಾಡಲು ಅವಕಾಶ ಕಲ್ಪಿಸಿದರು. ಸುತ್ತಮುತ್ತಲ ಗ್ರಾಮೀಣ ಜನರು ನಮ್ಮನ್ನು ನೋಡಲು ಬಂದರು. ಅಲ್ಲಿಯೇ ಪ್ರವಚನಗಳೂ ನಡೆದವು. ಮುಂದೆ ನಗರಕ್ಕೆ ನಮ್ಮನ್ನೆಲ್ಲ ಕರೆದೊಯ್ದು ಅಲ್ಲಿಯ ವಿಶಾಲ ಕಾರಾಗೃಹದಲ್ಲಿ ನಮ್ಮನ್ನು ಇಟ್ಟರು. ಮೊದಲೇ ಅಲ್ಲಿಗೆ ಬಂಧಿತರಾಗಿ ಬಂದಿದ್ದ ಸಹಸ್ರಾರು ಕರಸೇವಕರು ಘೋಷಣೆಗಳಿಂದ ನಮ್ಮನ್ನು ಸ್ವಾಗತಿಸಿದರು. ಅಲ್ಲಿ ನಮಗೆ ಸಂಸ್ಥಾನಪೂಜೆ ಮುಂತಾದವುಗಳಿಗೆ ತುಂಬ ಸೌಕರ್ಯವಾಗಿತ್ತು. ಆದರೂ ನಮ್ಮನ್ನು ಅಲ್ಲಿಂದ ಸ್ಥಾನಾಂತರಿತ ಗೊಳಿಸಬೇಕೆಂದು ಮೇಲಿನಿಂದ ನಿರ್ದೇಶ ಬಂದಿತ್ತು. ಇದರ ಕಾರಣವೇನೆಂಬುದು ನಮಗೆ ತಿಳಿಯಲಿಲ್ಲ. ನಾವು ಅಲ್ಲಿಂದ ಬೇರೆಡೆ ಹೋಗಲು ನಿರಾಕರಿಸಿದೆವು. ಆಸುಪಾಸಿನ ಜನರು ಇಲ್ಲಿಂದ ಹೋಗಲು ಒಪ್ಪುವುದು ಬೇಡವೆಂದು ಒತ್ತಾಯಿಸಿದರು. ಪೊಲೀಸ್ ಮುಖ್ಯಾಧಿಕಾರಿಗಳು, ಜಿಲ್ಲಾಧಿಕಾರಿಗಳೆಲ್ಲ ಬಂದು ಅಸಹಾಯಕರಾಗಿ ಬಹಳ ವಿನಯದಿಂದ ಪ್ರಾರ್ಥಿಸಿಕೊಂಡದ್ದರಿಂದ ಸ್ಥಳಾಂತರಕ್ಕೆ ಒಪ್ಪಿದೆವು. ನಂತರ ನಮ್ಮೆಲ್ಲರನ್ನೂ ದೂರದ ಫರೂಖಾಬಾದ್‌ಗೆ ರಾತ್ರಿಯಿಡೀ ಪ್ರಯಾಣ ಮಾಡಿಸಿ ಅಲ್ಲಿನ ಕ್ರಿಶ್ಚಿಯನ್ ಕಾಲೇಜ್‌ನಲ್ಲಿ ಇರಲು ವ್ಯವಸ್ಥೆ ಮಾಡಿದರು. ಇದನ್ನು ತಿಳಿದು ಊರಿನ ಜನರು, ಬಂಧಿತರಾದ ಕರಸೇವಕರು ತಂಡೋಪತಂಡವಾಗಿ ಬರಲು ಆರಂಭಿಸಿದರು. ಬೆಳಗ್ಗಿನಿಂದ ಮಧ್ಯರಾತ್ರಿಯವರೆಗೂ ಭಜನೆಗಳನ್ನು ಮಾಡುತ್ತ ಕ್ಯೂ ಹಿಡಿದು ಜನರು ಬರುತ್ತಲೇ ಇದ್ದರು. ನಮ್ಮ ನಿವಾಸದಲ್ಲಿ ಉತ್ಸವದ ಜಾತ್ರೆಯ ವಾತಾವರಣವೇ ನಿರ್ಮಾಣವಾಗಿತ್ತು. ಬಂಧನದಲ್ಲಿದ್ದರೂ ಊರೊಳಗೆ ನಿರಾತಂಕವಾಗಿ ನಮ್ಮ ಸಂಚಾರ, ಮನೆಮನೆಗಳಿಗೆ ಸಂದರ್ಶನ, ಗಂಗಾಘಾಟ್‌ಗೆ ಹೋಗುವುದು ಮುಂತಾದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಕರಸೇವಾಕಾರ್ಯಕ್ರಮವು ಗೋಲಿಬಾರ್, ಬರ್ಬರ ಹತ್ಯಾಕಾಂಡದ ಜೊತೆಗೆ ವಿಷಾದಕರ ರೀತಿಯಲ್ಲಿ ಮುಕ್ತಾಯವಾಯಿತು. ಹೀಗಾಗಿ ನಮ್ಮ ಜೊತೆಗೆ ಇದ್ದ ಉಳಿದ ಶ್ರೀಪಾದ ರೆಲ್ಲರೂ ತಮ್ಮ ತಮ್ಮ ಊರಿಗೆ ಹೋಗುವುದಾಗಿ ತಿಳಿಸಿದಾಗ ಅವರನ್ನೆಲ್ಲ ಬಿಡುಗಡೆ ಮಾಡಿದರು. ನಾನು, ಸುಬ್ರಹ್ಮಣ್ಯ ಸ್ವಾಮಿಗಳು, ಕಿರಿಯ ಪೇಜಾವರ ಶ್ರೀಪಾದರು ಮಾತ್ರ ಉಳಿದೆವು. ಪೊಲೀಸ್ ಅಧಿಕಾರಿಗಳು ನಮ್ಮ ಮುಂದಿನ ಕಾರ್ಯಕ್ರಮವನ್ನು ವಿಚಾರಿಸಿದರು. ಅಯೋಧ್ಯೆಗೆ ಹೋಗುವ ಉದ್ದೇಶವನ್ನು ತಿಳಿಸಿದಾಗ ದಕ್ಷಿಣ ಭಾರತಕ್ಕೆ ಹೋಗುವುದಾದರೆ ಮಾತ್ರ ನಮ್ಮನ್ನು ಬಿಡುಗಡೆ ಮಾಡಬಹುದೆಂದು ತಿಳಿಸಿದರು. ಅಯೋಧ್ಯೆಗಾಗಿ ಹೊರಟ ನಾವು ಅಯೋಧ್ಯೆಯನ್ನು ಸಂದರ್ಶಿಸದೆ ಹಿಂದಿರುಗುವುದಿಲ್ಲವೆನ್ನುವ ನಮ್ಮ ನಿರ್ಧಾರವನ್ನು ತಿಳಿಸಿದೆ. ಹೀಗಾಗಿ ನಮ್ಮ ಬಿಡುಗಡೆಯಾಗಲಿಲ್ಲ. ಅಯೋಧ್ಯೆಯಲ್ಲಿ ಆಗ ನಡೆದ ಹತ್ಯಾಕಾಂಡವನ್ನು ಪ್ರತಿಭಟಿಸಿ ೭ ದಿನದ ಉಪವಾಸವನ್ನೂ ಆರಂಭಿಸಿದೆವು. ಕೊನೆಗೆ ಅಲ್ಲಿಯ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳು ''ನಾವಂತೂ ತಮ್ಮನ್ನು ಬಿಡುಗಡೆ ಮಾಡುತ್ತೇವೆ. ಮುಂದೆ ಎಲ್ಲಿಗೆ ಹೋಗಬೇಕೆಂಬುದನ್ನೂ ತಾವೇ ನಿರ್ಧರಿಸಬೇಕು''

ಎಂದು ಹೇಳಿ ನಮ್ಮನ್ನು ಬಿಡುಗಡೆ ಮಾಡಿದರು. ನಾವು ಅಲ್ಲಿಂದ ಅಯೋಧ್ಯೆಗೆ ಹೊರಟೆವು. ಪುನಃ ಬಾರಾಬಂಕಿಯಲ್ಲಿ ನಮ್ಮ ಬಂಧನವಾಯಿತು. ಅಲ್ಲಿಯ ಸರಕಾರಿ ಪ್ರವಾಸಿ ಮಂದಿರದಲ್ಲಿ ನಮ್ಮನ್ನು ಗೃಹಬಂಧನದಲ್ಲಿಟ್ಟರು. ಒಂದೆರಡು ದಿನಗಳಲ್ಲಿ ನಮ್ಮನ್ನು ಬಿಡುಗಡೆ ಮಾಡಿ ಪ್ರಯಾಗದಲ್ಲಿ ಉತ್ತರಾದಿ ಮಠದಲ್ಲಿ ನಮ್ಮ ಗೃಹಬಂಧನವಾಯಿತು. ಪ್ರತಿದಿನ ತ್ರಿವೇಣಿ ಸಂಗಮದಲ್ಲಿ ಸ್ನಾನಕ್ಕೆ ಪೊಲೀಸ್ ಅಧಿಕಾರಿಗಳೇ ವ್ಯವಸ್ಥೆ ಮಾಡಿದರು. ಅಲ್ಲಿ ಸಭೆ, ಸಮಾರಂಭ, ಪತ್ರಿಕಾ ಗೋಷ್ಠಿ ಎಲ್ಲ ನಡೆಯುತ್ತಿದ್ದವು. ಕೊನೆಗೆ ನಾವು 'ಭಾರತದ ನಾಗರಿಕರಾದ ನಮ್ಮನ್ನು ಅಯೋಧ್ಯೆಗೆ ಹೋಗಲು ನಿರ್ಬಂಧಿಸುವುದು ಸರಿಯಲ್ಲ'ವೆಂದು ನ್ಯಾಯಾಲಯಕ್ಕೆ ದೂರು ನೀಡಲು ನಿರ್ಧರಿಸಿದೆವು. ಅಷ್ಟರಲ್ಲಿ ಯಾವುದೇ ಶರ್ತವಿಲ್ಲದೆ ನಮ್ಮನ್ನು ಬಿಡುಗಡೆ ಮಾಡಬೇಕೆಂದು ರಾಷ್ಟ್ರಪತಿಗಳ ಆದೇಶ ಬಂದಿದೆಯೆಂದು ಪೊಲೀಸ್ ಅಧಿಕಾರಿಗಳು ಸಂತೋಷದಿಂದ ಧಾವಿಸಿಕೊಂಡು ಬಂದು ನನ್ನಲ್ಲಿ ತಿಳಿಸಿದರು. ಅಲ್ಲಿಂದ ಅಯೋಧ್ಯೆಗೆ ಕಳುಹಿಸಿಕೊಟ್ಟರು. ದಾರಿಗಳಲ್ಲಿ ಅಲ್ಲಲ್ಲಿ ಪೊಲೀಸ್ ಅಧಿಕಾರಿಗಳು ನಮ್ಮನ್ನು ಸ್ವಾಗತಿಸಿ ಗಳಗಳನೆ ಅತ್ತರು. ನಮ್ಮನ್ನು ಬಂಧಿಸಿದ್ದಕ್ಕಾಗಿ ಕ್ಷಮೆಯನ್ನೂ ಕೇಳಿದರು. ಈ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಸರಕಾರಿ ಅಧಿಕಾರಿಗಳು ಮತ್ತು ನಾಗರಿಕರು ಎಲ್ಲ ಕಡೆಗಳಲ್ಲಿ ತೋರಿದ ಆದರ, ಅಭಿಮಾನ, ಸದ್ಭಾವನೆಗಳು ಅವಿಸ್ಮರಣೀಯವಾಗಿವೆ.

ಈ ಘಟನೆಯ ನಂತರ ದಿಲ್ಲಿಯ ಸರಕಾರದಲ್ಲಿ ಬದಲಾವಣೆಯಾಗಿ ಚಂದ್ರಶೇಖರರು ಪ್ರಧಾನಮಂತ್ರಿಗಳಾಗಿ ರಾಮಜನ್ಮಭೂಮಿ ಸಮಸ್ಯೆಯನ್ನು ಬಗೆಹರಿಸಲು ಸ್ವಲ್ಪ ಪ್ರಯತ್ನ ಮಾಡಿದರು. ವಿವಾದಾತ್ಮಕ ಸಂತ ಚಂದ್ರಸ್ವಾಮಿಯವರ ಮುಖಾಂತರವಾಗಿ ಸಂತರ ಸಂಪರ್ಕದ ಪ್ರಯತ್ನ ನಡೆಯಿತು. ಉಡುಪಿಗೂ ಬಂದು ನನ್ನನ್ನು ವಿಚಾರಿಸಿದ್ದರು. ನಾನು ಆಗ ಉಡುಪಿಯಲ್ಲಿರಲಿಲ್ಲ. ಅಂತೂ ಆಗ ಈ ವಿಷಯದಲ್ಲಿ ಹೆಚ್ಚಿನ ಪ್ರಗತಿಯಾಗಲಿಲ್ಲ.

ಪಿ. ವಿ. ನರಸಿಂಹರಾಯರು ಪ್ರಧಾನಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಪುನಃ ದೊಡ್ಡ ಪ್ರಮಾಣದ ಕರಸೇವೆಯ ಬಗ್ಗೆ ಏರ್ಪಾಡು ಪ್ರಾರಂಭವಾಗಿತ್ತು. ಆಗ ಪಿ. ವಿ. ನರಸಿಂಹರಾಯರು, ಬದರಿಗೆ ಚಾತುರ್ಮಾಸ್ಯಕ್ಕೆ ಹೊರಟಿದ್ದ ನನ್ನನ್ನು ಹರಿದ್ವಾರದಿಂದ ಹೆಲಿಕಾಪ್ಟರ್ ಮುಖಾಂತರವಾಗಿ ಕರೆಸಿದ್ದರು. ೪ ತಿಂಗಳ ಒಳಗೆ ಈ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಅವರಿಂದ ಆಶ್ವಾಸನೆ ಪಡೆದು ಎಲ್ಲ ಸಂತರ ಜೊತೆಗೆ ಮತ್ತು ವಿಶ್ವಹಿಂದು ಪರಿಷತ್ತಿನ ಪ್ರಮುಖರು ಮತ್ತು ವಾಜಪೇಯಿ, ಅದ್ವಾನಿ, ಮುರಲೀಮನೋಹರ ಜೋಷಿ ಮುಂತಾದ ಪ್ರಮುಖರ ಜೊತೆಗೆ ಸಂಧಾನ, ಸಮಾಲೋಚನೆ ನಡೆಸಿ ಕರಸೇವೆಯನ್ನು ೪ ತಿಂಗಳು ಮುಂದೂಡುವುದರಲ್ಲಿ ಯಶಸ್ವಿಯಾದೆವು.

ಆದರೆ ನಾಲ್ಕು ತಿಂಗಳ ನಂತರವೂ ಏನೂ ಪ್ರಗತಿಯ ಸಾಧನೆಯಾಗಲಿಲ್ಲ. ಹೀಗಾಗಿ ಲಕ್ಷಾಂತರ ಜನರನ್ನು ಸೇರಿಸಿ ಕರಸೇವೆಯನ್ನು ಪ್ರಾರಂಭಿಸುವ ಭಾರೀ ಏರ್ಪಾಡು ಅಯೋಧ್ಯೆಯಲ್ಲಿ ಪ್ರಾರಂಭವಾಯಿತು.

ಈ ಸಂದರ್ಭದಲ್ಲಿ ಹಿಂದಿನ ರಾಷ್ಟ್ರಪತಿಗಳಾದ ವೆಂಕಟರಾಮನ್‌ರು ಸಂಧಾನದ ಒಂದು ಹೊಸ ಸೂತ್ರವನ್ನೂ ನನ್ನ ಮುಂದಿಟ್ಟರು. ಬಾಬ್ರಿ ಮಸೀದಿಯ ಎರಡು ಗುಂಬಜ್‌ಗಳನ್ನು ಒಡೆದು ಹಿಂದೂಗಳು ರಾಮಮಂದಿರವನ್ನು ನಿರ್ಮಿಸುವುದು. ಮೂರನೆಯ ಗುಂಬಜ್‌ವನ್ನು ಬಾಬ್ರಿ ಮಸೀದಿಯ ಸ್ಮಾರಕವಾಗಿ ಹಾಗೆಯೇ ಉಳಿಸಿಕೊಳ್ಳುವುದು. ಅಲ್ಲಿ ಪ್ರಾರ್ಥನೆಯು ನಡೆಯುವಂತಿಲ್ಲ. ಅದು ಸರಕಾರದ ರಕ್ಷಣೆಯಲ್ಲಿ ಇರಬೇಕು. ಇದಕ್ಕೆ ಹಿಂದೂಗಳ ಒಪ್ಪಿಗೆಯಿದ್ದರೆ ಮುಸ್ಲಿಮರನ್ನು ಒಪ್ಪಿಸಲು ತಾನು ಪ್ರಯತ್ನಿಸುವುದಾಗಿ ವೆಂಕಟರಾಮನ್ನರು ನನಗೆ ತಿಳಿಸಿದರು. ನಾನು ಈ ಬಗ್ಗೆ ಅದ್ವಾನಿಯವರಿಗೆ ಫೋನ್ ಮಾಡಿ ವಿಚಾರಿಸಿದೆ. ಸಂತರು ಮಾಡಿದ ತೀರ್ಮಾನಕ್ಕೆ ತಮ್ಮ ಸಮ್ಮತಿಯಿದೆಯೆಂದು ಅವರು ಹೇಳಿದರು.

ಆದರೆ ಆರ್.ಎಸ್.ಎಸ್. ಮತ್ತು ವಿಶ್ವಹಿಂದು ಪರಿಷತ್ತಿನ ಪ್ರಮುಖರು ಈ ಬಗ್ಗೆ ಅಷ್ಟು ಉತ್ಸಾಹ ತೋರಿಸಲಿಲ್ಲ. ಕರಸೇವೆಯ ನಂತರ ಇದನ್ನು ಪರಿಶೀಲಿಸೋಣವೆಂದರು. ಈ ಸಂಧಾನ ಸೂತ್ರವನ್ನು ಪರಿಶೀಲಿಸುವ ಮತ್ತು ಕರಸೇವೆಯಲ್ಲಿ ಭಾಗವಹಿಸುವ ಎರಡೂ ಉದ್ದೇಶವನ್ನಿಟ್ಟುಕೊಂಡು ನಾನು ಅಯೋಧ್ಯೆಗೆ ಬಂದೆನು. ಅದಮಾರು ಮಠದ ವಿಬುಧೇಶತೀರ್ಥರೇ ಮೊದಲಾದ ಉಡುಪಿಯ ೬, ೭ ಸ್ವಾಮಿಗಳೂ ಬಂದಿದ್ದರು. ಡಿಸೆಂಬರ್ ೪-೫ರಲ್ಲಿ ನಡೆದ ಕೆಲವೇ ಮಂದಿ ಬೆರಳೆಣಿಕೆಯ ಸಂತರು ಮತ್ತು ಆರ್. ಎಸ್. ಎಸ್., ವಿಶ್ವಹಿಂದು ಪರಿಷತ್ತಿನ ಪ್ರಮುಖರ ಅತ್ಯಂತ ರಹಸ್ಯ ಸಭೆಯಲ್ಲಿ ಕರಸೇವೆಯು ಶಾಂತಿಯುತವಾಗಿ, ಸಾಂಕೇತಿಕವಾಗಿ ನಡೆಯಬೇಕು; ಕರಸೇವೆಯು ಕೇವಲ ಸ್ವಚ್ಛೀಕರಣ ಕಾರ್ಯದಲ್ಲಿ ಸೀಮಿತವಾಗಿರಬೇಕು; ಯಾವುದೇ ಹೊಸ ಕಟ್ಟಡದ ಕೆಲಸವನ್ನು ಕರಸೇವೆಯಲ್ಲಿ ಸೇರಿಸಬಾರದು ಎಂದು ಸ್ಪಷ್ಟ ನಿರ್ಧಾರವನ್ನು ಅನೇಕರ ಆಕ್ಷೇಪದ ಮಧ್ಯದಲ್ಲಿಯೂ ಮಾಡಲಾಗಿತ್ತು. ಮಸೀದಿಯನ್ನು ಕೆಡಹುವ ವಿಚಾರವಂತೂ ಇರಲೇ ಇಲ್ಲ. ಡಿಸೆಂಬರ್ ೫ರ ರಾತ್ರಿಯಲ್ಲಿಯೂ ಇದೇ ನಿರ್ಧಾರವನ್ನು ಸ್ಪಷ್ಟಪಡಿಸಲಾಗಿತ್ತು. ಖಾಲಿ ಜಾಗದಲ್ಲಿ ಕಟ್ಟಡದ ಆರಂಭ ಮಾಡದೆ ಕೇವಲ ಸಾಂಕೇತಿಕ ಕರಸೇವೆಯ ವಿಷಯದಲ್ಲಿ ಪ್ರಮುಖರನೇಕರು ಆಕ್ಷೇಪ, ಅಸಮಾಧಾನಗಳನ್ನು ವ್ಯಕ್ತಪಡಿಸಿದ್ದರು. ಮಸೀದಿಯನ್ನು ಒಡೆಯುವುದಂತೂ ಯಾರ ಕಲ್ಪನೆಗೂ ಬಂದಿರಲಿಲ್ಲ. ಮರುದಿನ ಬೆಳಗಿನ ಪತ್ರಿಕೆಗಳಲ್ಲಿ ಸಾಂಕೇತಿಕ ಕರಸೇವೆಯ ಬಗ್ಗೆ ಕಾರ್ಯಕರ್ತರ ಭಾರೀ ಅಸಮಾಧಾನವು ವ್ಯಕ್ತಗೊಂಡದ್ದು ಪ್ರಕಟವಾಗಿತ್ತು. ಅಂತೂ ನಾವೆಲ್ಲರೂ ಕರಸೇವಾದ ಅಂಗವಾದ ಯಜ್ಞದಲ್ಲಿ ಭಾಗವಹಿಸಿದ್ದೆವು. ಆಗ ಅನಿರೀಕ್ಷಿತವಾಗಿ ಬಾಬ್ರಿ ಮಸೀದಿಯೆಂದು ಹೇಳುತ್ತಿರುವ ವಿವಾದಿತ ಕಟ್ಟಡದ ಮೇಲೆ ಕಲ್ಲು ತೂರಾಟವು ಆರಂಭವಾಯಿತು. ಕೆಲವರು ಯುವಕರು ಕಟ್ಟಡದ ಮೇಲೆ ಏರಿದರು. ಸಭೆಯು ಅಸ್ತವ್ಯಸ್ತವಾಗಿ ಗದ್ದಲ, ಕೋಲಾಹಲಗಳು ಆರಂಭವಾದವು. ನನಗೆ ಏನೆಂದೂ ಅರ್ಥವಾಗಲಿಲ್ಲ. ಕಟ್ಟಡದ ಮೇಲೆ ಏರಿದವರನ್ನು ಕೆಳಗೆ ಇಳಿಯುವಂತೆ ಒತ್ತಾಯ ಮಾಡಲು ನಾನು ಬಾಬ್ರಿ ಮಸೀದಿಯ ಬಳಿಗೆ ಧಾವಿಸಿದೆ. ಕಲ್ಲು ತೂರಾಟ ಹಾಗೂ ಮುಂದೆ ಸಂಭಾವ್ಯವಾದ ಗುಂಡಿನ ಮಳೆಗೆ ಹೆದರಿ ನನ್ನ ಜೊತೆಗೆ ಬಂದವರು ನನ್ನನ್ನು ಗಟ್ಟಿಯಾಗಿ ಹಿಡಿದು ಮುಂದೆ ಹೋಗಲು ಬಿಡಲಿಲ್ಲ. ಆ ವಿಶಾಲ ನಿವೇಶನದ ಒಂದು ಬಳಿಯಲ್ಲಿದ್ದ ಶ್ಯಾಮಿಯಾನಕ್ಕೆ ಹೋಗಿ ಅಲ್ಲಿದ್ದ ಧ್ವನಿವರ್ಧಕದಲ್ಲಿ ''ಎಲ್ಲರೂ ಶಾಂತರಾಗಿ ವರ್ತಿಸಬೇಕು. ಶಿಸ್ತನ್ನು ಅತಿಕ್ರಮಿಸಬಾರದು. ಕಟ್ಟಡವನ್ನು ಭಗ್ನಗೊಳಿಸಬಾರದು'' ಎಂದು ಗಟ್ಟಿಯಾಗಿ ಬಾರಿ ಬಾರಿ ವಿನಂತಿಸಿದೆ. ಆ ಗದ್ದಲದಲ್ಲಿ ಯಾರೂ ಅದನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ನನ್ನ ವಿನಂತಿಯೆಲ್ಲವೂ ಗಾಳಿಯಲ್ಲಿ ತೇಲಿಹೋಯಿತು. ಅಲ್ಲಿಯೇ ಪಕ್ಕದಲ್ಲಿ ನಿಂತಿದ್ದ ಅಶೋಕ್ ಸಿಂಘಲ್‌ರನ್ನು ಏನಿದು ? ಎಂದು ಕೇಳಿದೆ. ಅವರು ಗಾಬರಿಯಿಂದ ನನಗೆ ಏನೂ ತಿಳಿಯದು ಎಂದರು. ಕೇಂದ್ರ ಸರಕಾರದ ಮಿಲಿಟರಿ ಪಡೆಯು ಬಂದು ಗುಂಡಿನ ಮಳೆಯಾಗಿ ಭಾರೀ ಹಿಂಸಾಕಾಂಡವಾಗುವುದೆಂದೂ ಗಾಬರಿಯಾದೆ. ಅದೂ ನಡೆಯಲಿಲ್ಲ. ಕಟ್ಟಡದ ಮೇಲೆ ಏರಿ ಜನರನ್ನು ಕೆಳಗಿಳಿಯುವಂತೆ ಮಾಡಬೇಕೆಂದು ನಾನು ಆ ಕಡೆಗೆ ಸಾಗಿದರೆ ನಮ್ಮ ಜೊತೆಗಿನ ಇತರ ಸ್ವಾಮಿಗಳು ಮತ್ತು ಜನರು ನನ್ನನ್ನು ಆಚೆ ಹೋಗಲು ಬಿಡಲೇ ಇಲ್ಲ. ಕಟ್ಟಡದ ಒಂದು ಭಾಗ ಜರಿದು ಬಿದ್ದಾಗ ಕೇಕೆ ಹೊಡೆದು ಚಪ್ಪಾಳೆ ತಟ್ಟಿದ ನಮ್ಮ ಪರಿವಾರದ ಒಬ್ಬನಿಗೆ ಸಿಟ್ಟಿನಿಂದ ಕಪಾಲಕ್ಕೆ ಹೊಡೆದೆ. ಆದರೆ ನನ್ನ ಹೊರತು ಎಲ್ಲರೂ ಸಂತೋಷದಿಂದ ಕುಣಿಯುತ್ತಿದ್ದರು. ನಮ್ಮ ಮಠದ ಪರಿವಾರದವರು, ನಮ್ಮ ಜೊತೆಗೆ ಬಂದ ಮಹನೀಯರು, ಜೊತೆಗಿದ್ದ ಸ್ವಾಮಿಗಳು ಎಲ್ಲರೂ ಸಂತೋಷದಿಂದ ನಲಿಯುತ್ತಿದ್ದರು. ಬಹಳ ಮಂದಿ ಅಲ್ಲಿಗೆ ಹೋಗಿ ಒಂದು ಇಟ್ಟಿಗೆಯನ್ನಾದರೂ ಒಡೆದು ಶ್ರೀರಾಮನ ಸೇವೆ ಸಲ್ಲಿಸೋಣವೆಂದು ಉತ್ಸಾಹದಿಂದ ನುಗ್ಗುತ್ತಿದ್ದರು. ಅಲ್ಲಿ ಸೇರಿದ ವಿಶಾಲ ಜನಸಮುದಾಯವಂತೂ ಭಾವಪರವಶತೆಯಿಂದ ಹಾಡು, ಭಜನೆಗಳನ್ನು ಹಾಡುತ್ತ ಶಾಂತರೀತಿಯಲ್ಲಿ

ಗುಂಪುಗುಂಪಾಗಿ ಕುಣಿಯುತ್ತಿತ್ತು. ಇಡೀ ಪ್ರದೇಶದಲ್ಲಿ ಭಾವುಕ ವಾತಾವರಣವು ನಿರ್ಮಾಣವಾಗಿತ್ತು. ಇದರ ಜೊತೆಗೆ ಆ ಕಟ್ಟಡದಲ್ಲಿ ದೊರೆತ ಶಂಖ, ಜಾಗಟೆ, ಗಣೇಶನ ವಿಗ್ರಹ, ಹಿಂದೂ ದೇವಾಲಯಕ್ಕೆ ಸಂಬಂಧಿಸಿದ ಅನೇಕ ವಸ್ತುಗಳು ೧೧ನೇ ಶತಮಾನದ ಶಿಲಾಲೇಖ ಮೊದಲಾದವುಗಳನ್ನು ಪ್ರತ್ಯಕ್ಷವಾಗಿ ಕಂಡಾಗ ಇಲ್ಲಿ ಹಿಂದೂ ದೇವಾಲಯವು ಇತ್ತೆಂಬುದು ನನಗೆ ಖಾತ್ರಿಯಾಯಿತು. ಹೀಗಾಗಿ ನನ್ನ ಪ್ರತಿಭಟನೆಯ ದನಿಯು ಪೂರ್ತಿಯಾಗಿ ಅಡಗಿ ಹೋಯಿತು. ಕಟ್ಟಡ ಕೆಡಹುವುದನ್ನು ಪ್ರತಿಭಟಿಸಲೂ ಸಾಧ್ಯವಾಗಿಲ್ಲ; ಬೆಂಬಲಿಸಲೂ ಸಾಧ್ಯವಾಗಿಲ್ಲ. ಸುಮ್ಮನೆ ತಟಸ್ಥನಾಗಿ ಆ ಘಟನೆಯನ್ನು ನೋಡುತ್ತಲಿದ್ದೆ. ಮರುದಿನದಲ್ಲಿ ಅಲ್ಲಿ ಬಾಲರಾಮನ ಮೂರ್ತಿಯನ್ನು ನನ್ನ ಸಮಕ್ಷಮದಲ್ಲಿಯೇ ಪುನಃ ಸ್ಥಾಪಿಸಲಾಯಿತು. ಆಗ ಕರಸೇವೆಯನ್ನು ಸಲ್ಲಿಸಿ ಪೂಜೆಯನ್ನೂ ಮಾಡಿದೆ. ನಿರ್ಮಾಣ ಕಾರ್ಯದಲ್ಲಿ ಮಾತ್ರ ಭಾಗಿಯಾಗುತ್ತೇನೆ ವಿಧ್ವಂಸ ಕಾರ್ಯದಲ್ಲಿ ನಾನು ಸೇರಲಾರೆನೆಂದು ನನ್ನ ವಿಚಾರವಾಗಿತ್ತು.

ಅಲ್ಲಿಂದ ತಿರುಗಿ ಕರ್ನಾಟಕಕ್ಕೆ ಬಂದಾಗ ಇಡೀ ನಾಡಿನಲ್ಲಿ ಅಶಾಂತಿಯ ವಾತಾವರಣವು ನಿರ್ಮಾಣವಾಗಿತ್ತು. ಉದ್ರಿಕ್ತ ಮುಸಲ್ಮಾನರನ್ನು ಸಮಾಧಾನ ಪಡಿಸುವ ಉದ್ದೇಶದಿಂದ ದೇವಾಲಯದ ಅವಶೇಷಗಳು ಸಾಕಷ್ಟು ದೊರೆತಿರುವುದರಿಂದ ಈ ಕಟ್ಟಡದ ಹಿಂದಿನ ಇತಿಹಾಸದಲ್ಲಿ ಆಕ್ರಮಣದ ಕರಾಳ ಛಾಯೆಯಿದೆ. ಈ ಕಟ್ಟಡದ ಧ್ವಂಸವು ಆಕ್ಷೇಪಾರ್ಹ ಮತ್ತು ವಿಷಾದಕಾರಿಯಾಗಿದ್ದರೂ ಈ ಹಿನ್ನೆಲೆಯನ್ನು ಗಮನಿಸಿದಾಗ ಮುಸಲ್ಮಾನರು ಅಷ್ಟು ಉದ್ವೇಗಗೊಳ್ಳಲು ಕಾರಣವಿಲ್ಲ. ಬೇರೆಯೇ ಮಸೀದಿಯನ್ನು ಬೇರೆ ಕಡೆಗೆ ಹಿಂದುಗಳೇ ಕಟ್ಟಿಸಿಕೊಡೋಣ. ನಾನು ಧನ ಸಹಾಯವನ್ನು ಮಾಡುವುದಾಗಿ ಘೋಷಿಸಿದೆ. ಇದು ಅಪೇಕ್ಷಿತ ಪರಿಣಾಮಕ್ಕಿಂತ ವಿರುದ್ಧ ಪರಿಣಾಮವನ್ನೇ ಉಂಟುಮಾಡಿತು. ಉದ್ರೇಕಕಾರಿ ಹೇಳಿಕೆಯನ್ನು ನೀಡಿದ್ದರಿಂದ ನನ್ನನ್ನು ಬಂಧಿಸಬೇಕೆಂಬ ಧ್ವನಿಯೂ ಕೆಲವೆಡೆ ಕೇಳಿಬಂದಿತು. ಮುಸಲ್ಮಾನರಿಗೂ ನನ್ನ ಬಗ್ಗೆ ತಪ್ಪು ಕಲ್ಪನೆಯುಂಟಾಗಿ ಸಿಟ್ಟಿನ, ಬೆದರಿಕೆಯ, ಅವಾಚ್ಯನಿಂದೆಯ ಪತ್ರಗಳೂ ಬಂದವು. ನನ್ನ ಬಂಧನವಾಗಲಿದೆಯೆಂದು ಸುದ್ದಿಯೂ ಹರಡಿತ್ತು. ನನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಅನೇಕ ಬುದ್ಧಿ ಜೀವಿಗಳೂ ನನ್ನ ಬಗ್ಗೆ ವಾಕ್‌ಪ್ರಹಾರ ನಡೆಸಿದರು. ನಾನು ಯಾವುದರಿಂದಲೂ ಉದ್ವಿಗ್ನನಾಗದೆ ವಿಚಲಿತನಾಗದೆ ನನ್ನ ಕಾರ್ಯದಲ್ಲಿ ತೊಡಗಿದೆ. ಅನೇಕ ಮುಸ್ಲಿಂ ಬಂಧುಗಳನ್ನು ಕರೆಸಿ ನನ್ನ ಪಾತ್ರವನ್ನೂ ವಿವರಿಸಿದೆ. ಮಸೀದಿಗಳಿಗೂ ಭೇಟಿ ನೀಡಿದೆ. ನನ್ನ ಹಿಂದೂ ಧರ್ಮನಿಷ್ಠೆ ಮತ್ತು ಪರಮತ ಸಹಿಷ್ಣುತೆಯ ಧೋರಣೆಯನ್ನು ಹಾಗೆಯೇ ಮುಂದುವರಿಸಿದೆ.

ಮುಂದೆ ಕೆಲ ಸಮಯದ ನಂತರ ವಿಶ್ವಹಿಂದು ಪರಿಷತ್ತಿನಿಂದ ಬೇರೆಯಾಗಿ ಒಂದು ಟ್ರಸ್ಟನ್ನು ನಿರ್ಮಿಸಿ ವಿವಾದಿತ ಜಾಗವನ್ನು ಆ ಟ್ರಸ್ಟಿಗೆ ನೀಡಿ ಆ ಟ್ರಸ್ಟಿನ ಮುಖಾಂತರ ರಾಮಮಂದಿರವನ್ನು ನಿರ್ಮಿಸುವ ಹೊಸ ಯೋಜನೆಗೆ ಪ್ರಧಾನಮಂತ್ರಿ ನರಸಿಂಹರಾಯರು ಚಾಲನೆ ನೀಡಿದರು. ಶೃಂಗೇರಿ, ಕಾಂಚೀ, ದ್ವಾರಕಾ ಶಂಕರಾಚಾರ್ಯರು ಟ್ರಸ್ಟಿಗಳಾಗಿರುವ ಈ ಟ್ರಸ್ಟಿಗೆ ನಾನೂ ಟ್ರಸ್ಟಿಯಾಗಿರಬೇಕೆಂದು ಪ್ರಧಾನ ಮಂತ್ರಿಗಳು ನನ್ನಲ್ಲಿ ಕೇಳಿಕೊಂಡರು. ಈ ಹಿಂದೆ ವಿಶ್ವಹಿಂದು ಪರಿಷತ್ತಿನ ಸಂತರ ಹಾಗೂ ಪ್ರಧಾನ ಮಂತ್ರಿ ನರಸಿಂಹರಾಯರ ಮಧ್ಯವರ್ತಿಯಾಗಿ ರಾಮಜನ್ಮಭೂಮಿಯ ಸಂಧಾನ ಕಾರ್ಯದಲ್ಲಿ ನಾನು ತುಂಬ ಪ್ರಯತ್ನಿಸಿದ್ದೆ. ಈ ಟ್ರಸ್ಟಿನ ಬಗ್ಗೆ ವಿಶ್ವಹಿಂದು ಪರಿಷತ್ತಿನ ವಿರೋಧವಿತ್ತು. ವಿಶ್ವಹಿಂದು ಪರಿಷತ್ತಿನಿಂದ ಪ್ರತ್ಯೇಕವಾಗಿ ಟ್ರಸ್ಟನ್ನು ನಿರ್ಮಿಸಿ ಹಿಂದೂ ಸಂತರನ್ನು ಒಡೆಯುವ ಕುತಂತ್ರವನ್ನು ನರಸಿಂಹರಾಯರು ಮಾಡುತ್ತಿದ್ದಾರೆ ಆದುದರಿಂದ ಈ ಟ್ರಸ್ಟಿನಲ್ಲಿ ನಾನು ಸೇರಬಾರದೆಂದು ವಿಶ್ವಹಿಂದು ಪರಿಷತ್ತಿನ ತೀವ್ರ ಅಪೇಕ್ಷೆಯಾಗಿತ್ತು. ಆದರೆ ಶೃಂಗೇರಿ, ಕಾಂಚೀ ಶಂಕರಾಚಾರ್ಯರಿಬ್ಬರೂ ನಾನು ಇದರಲ್ಲಿ ಸೇರಲೇಬೇಕೆಂದು ಪ್ರೀತಿಪೂರ್ವಕವಾಗಿ ಒತ್ತಾಯಿಸಿದರು. ನಾನು ಒಂದು ರೀತಿಯಲ್ಲಿ

ಉಭಯ ಸಂಕಟದಲ್ಲಿ ಸಿಲುಕಿದೆ. ಆದರೆ ವಿಶ್ವಹಿಂದು ಪರಿಷತ್ತಿನಿಂದಾಗಲೀ ಬೇರೆ ರೀತಿಯಿಂದಾಗಲೀ ರಾಮಮಂದಿರ ನಿರ್ಮಾಣವಾಗಬೇಕೆಂದು ನನ್ನ ಪ್ರಬಲ ಆಶೆಯಾಗಿತ್ತು. ಮೂವರು ಶಂಕರಾಚಾರ್ಯರೂ ಇತರ ಅನೇಕ ಪ್ರಮುಖ ಸಂತರೂ ಇರುವ ಈ ಟ್ರಸ್ಟಿನಲ್ಲಿ ನಾನು ಇರುವುದರಿಂದ ಸಂತರಲ್ಲಿ ಒಡಕುಂಟಾಗದಂತೆ ಮಾಡಲು ನನಗೆ ಸಾಧ್ಯವಾಗುವುದೆಂದು ವಿಶ್ವಹಿಂದು ಪರಿಷತ್ತಿಗೆ ಮನವರಿಕೆ ಮಾಡಿಸಿದೆ. ಎರಡು ಮೂರು ಸಭೆಗಳು ಒಳ್ಳೇ ಸೌಹಾರ್ದ ಸಾಮರಸ್ಯದಿಂದ ನಡೆದವು. ಆದರೆ ವಿವಾದಿತ ಜಾಗವನ್ನು ಈ ಟ್ರಸ್ಟಿಗೆ ನೀಡಲು ಬೇರೆ ಬೇರೆ ರಾಜಕೀಯ ಕಾರಣದಿಂದ ನರಸಿಂಹರಾಯರಿಗೆ ಸಾಧ್ಯವಾಗದಿದ್ದುದರಿಂದ ಈ ಟ್ರಸ್ಟ್ ನಿಷ್ಕ್ರಿಯವಾಯಿತು.

ತುರ್ತುಪರಿಸ್ಥಿತಿ

ನಾನು ಕೇವಲ ಧಾರ್ಮಿಕ, ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಮಾತ್ರ ತೊಡಗಿದ್ದೇನಲ್ಲದೆ ರಾಜಕೀಯದಿಂದ ದೂರವಾಗಿಯೇ ಇದ್ದೇನೆ. ಎಲ್ಲ ರಾಜಕೀಯ ಪಕ್ಷಗಳ ಪ್ರಮುಖರು ನನ್ನ ಜೊತೆಗೆ ಉತ್ತಮ, ಆತ್ಮೀಯ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ನನಗೆ ತೋರಿದ ಸಲಹೆಗಳನ್ನೂ ಆಗಾಗ್ಗೆ ನೀಡುವುದುಂಟು. ಯಾವುದೇ ರಾಜಕೀಯ ಆಂದೋಲನ, ಚುನಾವಣಾ ರಾಜಕಾರ್ಯಗಳಲ್ಲಿ ನಾನು ಭಾಗವಹಿಸಿಲ್ಲ. ಆದರೆ ಇಂದಿರಾಗಾಂಧಿಯವರು ಅನಿರೀಕ್ಷಿತವಾಗಿ ತುರ್ತುಪರಿಸ್ಥಿತಿಯನ್ನು ಘೋಷಿಸಿ ಎಲ್ಲ ರಾಜಕೀಯ ನಾಯಕರ ಬಂಧನ, ಪತ್ರಿಕಾ ಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯದ ಅಪಹರಣ ಮುಂತಾದ ಪ್ರಜಾಪ್ರಭುತ್ವ ವಿರೋಧಿ ದಮನ ಕಾರ್ಯವನ್ನು ಆರಂಭಿಸಿದಾಗ ನಾನು ಸ್ತಬ್ಧನಾದೆ. ಇಂದಿನ ಸ್ಥಿತಿಯಲ್ಲಿ ಪ್ರಜಾಪ್ರಭುತ್ವಕ್ಕೆ ಪರ್ಯಾಯ ಬೇರೆ ಯಾವುದೂ ಇಲ್ಲವೆಂದು ನಾನು ದೃಢವಾಗಿ ನಂಬಿದವನು. ಅದಕ್ಕೆ ಧಕ್ಕೆ ಒದಗಿದಾಗ ತೀವ್ರ ಕಳವಳವಾಯಿತು. ನಾನು ಹೋದಲ್ಲೆಲ್ಲ ನನ್ನ ಪ್ರವಚನಗಳಲ್ಲಿ ಭಾರತ, ರಾಮಾಯಣದ ಅನೇಕ ಘಟನೆಗಳನ್ನು ಉದಾಹರಿಸಿ ತುರ್ತುಪರಿಸ್ಥಿತಿಯನ್ನು ಟೀಕಿಸಿ, ವ್ಯಂಗ್ಯ, ಹಾಸ್ಯಗಳೊಂದಿಗೆ ಜನರಿಗೆ, ಯುವಕರಿಗೆ ಪ್ರಚೋದನೆಯನ್ನು ನೀಡುವ ಉಪನ್ಯಾಸವನ್ನು ಮಾಡುತ್ತಿದ್ದೆ. ನನ್ನ ಭಾಷಣಗಳನ್ನು ಗುಪ್ತವಾಗಿ ಮುದ್ರಿಸಿ ಯುವಕರಿಗೆ ಹಂಚಲಾಗುತ್ತಿತ್ತು. ಹೋರಾಟಗಾರರಿಗೆ ಜಾಗ್ರತಿ, ಪ್ರಚೋದನೆಗಳನ್ನು ನೀಡುವ ಕಾರ್ಯವನ್ನು ನಿರಂತರ ಮಾಡುತ್ತಿದ್ದೆ. ಭೂಗತ ಹೋರಾಟಗಾರರು ನನ್ನಲ್ಲಿ ಮಾತುಕತೆ ನಡೆಸಲು, ನಿರ್ದೇಶನ ಪಡೆಯಲು ಗುಪ್ತವಾಗಿ ವೇಷಾಂತರದಲ್ಲಿ ರಾತ್ರಿಯಲ್ಲಿ ನನ್ನ ಭೇಟ್ಟಿಗೆ ಬರುತ್ತಿದ್ದರು. ಒಮ್ಮೊಮ್ಮೆ ಅದೇ ಸಂದರ್ಭದಲ್ಲಿ ಪ್ರಮುಖ ಸರಕಾರಿ ಅಧಿಕಾರಿಗಳೂ ಪೊಲೀಸ್ ಅಧಿಕಾರಿಗಳೂ ನನ್ನ ಭೇಟ್ಟಿಗೆ ಬರುತ್ತಿದ್ದುದುಂಟು. ಆಗ ಈ ಹೋರಾಟಗಾರರನ್ನು ನನ್ನ ಕೋಣೆಯ ಸಮೀಪದಲ್ಲಿ ಅಡಗಿಸಿ ಇವರ ಜೊತೆಗೆ ಮಾತಾಡುತ್ತಿದ್ದೆ. ಅವರು ಅಧಿಕಾರಿಗಳ ದೃಷ್ಟಿಗೆ ಬಿದ್ದರೆ ಕೂಡಲೇ ಅವರ ಬಂಧನವಾಗುತ್ತಿತ್ತು. ಭೂಗತ ಹೋರಾಟಗಾರರು ಬಂದಾಗಲೆಲ್ಲ ಅವರಿಗೆ ಮಠದಲ್ಲಿ ಆಶ್ರಯ ನೀಡುತ್ತಿದ್ದೆ. ನನ್ನ ಭಾಷಣದ ಪ್ರತಿಗಳು ಒಮ್ಮೆ ಪೊಲೀಸ್ ಅಧಿಕಾರಿಗಳಿಗೂ ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೂ ದೊರಕಿತು. ಆಗ ಅವರು ನನ್ನ ಬಳಿಗೆ ಬಂದು ಇಂತಹ ಚಟುವಟಿಕೆಗಳಿಂದ ದೂರವಿರುವಂತೆ ಪ್ರಾರ್ಥಿಸಿಕೊಂಡರು. ''ನಾನು ಬಂಧನಕ್ಕೆ ಸಿದ್ಧನಾಗಿದ್ದೇನೆ. ಆದರೆ ಸ್ನಾನ, ಪೂಜೆ, ಜಪಗಳಿಗೆ ಅನುಕೂಲವಾಗುವಂತೆ ಬಾವಿಯಿರುವ ಸ್ಥಾನದಲ್ಲಿ ನನ್ನನ್ನು ಬಂಧಿಸಿರಿ'' ಎಂದು ಸೂಚನೆ ನೀಡಿದೆ. ಆದರೆ ನಾನು ಇಷ್ಟೆಲ್ಲ ಚಟುವಟಿಕೆ ನಡೆಸಿದರೂ ಸರಕಾರ ನನ್ನನ್ನು ಬಂಧಿಸಿಲ್ಲ. ನಾನು ಬಂಧನಕ್ಕೆ ಒಳಗಾಗುತ್ತೇನೆಂದು ಎಲ್ಲರೂ ಭಾವಿಸಿದ್ದರೂ ಅಂತಹ ಸಂದರ್ಭವುಂಟಾಗಲಿಲ್ಲ. ನಾನು ತುರ್ತು ಪರಿಸ್ಥಿತಿಯಲ್ಲಿ ದೀಪಾವಳಿಯಲ್ಲಿ ಬೆಂಗಳೂರು ಕೇಂದ್ರ ಕಾರಾಗೃಹಕ್ಕೆ ಭೇಟ್ಟಿ ನೀಡಿ ಅಲ್ಲಿಯ ಕಾರಾಗೃಹವಾಸಿಗಳಿಗೆ ಸಿಹಿ ಹಂಚಿದೆ. ಆ ನೆಪದಲ್ಲಿ ಕಾರಾಗೃಹದಲ್ಲಿದ್ದ

ಹೋರಾಟಗಾರರನ್ನು ಸಂಧಿಸಿ ಅವರನ್ನು ಅಭಿನಂದಿಸಿ ಧೈರ್ಯ ತುಂಬಿದೆ. ಬೆಂಗಳೂರು ಕಾರಾಗೃಹದಲ್ಲಿದ್ದ ಅದ್ವಾನಿ, ಮಧು ದಂಡವತೆ, ಮಿಶ್ರಾ ಅವರನ್ನೂ ಭೆಟ್ಟಿಯಾದೆ. ರಾಮಕೃಷ್ಣ ಹೆಗಡೆ, ಬೊಮ್ಮಾಯಿ ಮುಂತಾದವರು ನಮ್ಮನ್ನು ಸಂಪರ್ಕಿಸುತ್ತಿದ್ದರು. ನಾನು ಅವರಿಗೆ ಉಜ್ವಲ ಭವಿಷ್ಯವಿದೆಯೆಂದು ಹೇಳಿ ಯಾವುದೇ ಕಾರಣದಿಂದ ಚಳವಳಿಯಿಂದ ಹಿಂದೆ ಸರಿಯಬಾರದೆಂದು ಹುರಿದುಂಬಿಸುತ್ತಿದ್ದೆ. ದೇವೇಗೌಡರು ಹೊಳೆನರಸೀಪುರದಲ್ಲಿ ತನ್ನ ಬಂಧನವಾಗುವ ಮುನ್ನ ನನ್ನ ಭೆಟ್ಟಿಯಾಗಿ ಫಲ-ಮಂತ್ರಾಕ್ಷತೆಯನ್ನು ಪಡೆದರು. ಹೀಗೆ ನನ್ನಿಂದ ಸಾಧ್ಯವಿದ್ದ ರೀತಿಯಲ್ಲಿ ತುರ್ತುಪರಿಸ್ಥಿತಿಯ ವಿರುದ್ಧ ಹೋರಾಟದಲ್ಲಿ ಬೆಂಬಲ, ಸಹಕಾರ ನೀಡುತ್ತಿದ್ದೆ.

ಇವೆಲ್ಲದಕ್ಕಿಂತಲೂ ಮುಖ್ಯವಾಗಿ ಆಗಿನ ಪ್ರಧಾನಮಂತ್ರಿ ಇಂದಿರಾಗಾಂಧಿಯವರಿಗೆ ಪತ್ರವನ್ನು ಬರೆದೆ. ''ನೆಹರೂಜೀಯವರ ಪುತ್ರಿಯಾಗಿ ಜನರ ಸ್ವಾತಂತ್ರ್ಯಹರಣವನ್ನು ನೀವು ಖಂಡಿತ ಮಾಡಬಾರದು. ನಿಮ್ಮ ಸುತ್ತಮುತ್ತಲೂ ನಿಮಗೆ ಇಷ್ಟವಾಗುವಂತೆ ಹೊಗಳುಭಟ್ಟರು ಇರಬಹುದು. ಆದರೆ ಅಪ್ರಿಯ ಸತ್ಯವನ್ನು ಹೇಳುವವರು ಬಹಳ ಕಡಿಮೆ. ನಾನು ನಿಮ್ಮ ಮೇಲೆ ಅಭಿಮಾನವಿಟ್ಟು ಇಂತಹ ಅಪ್ರಿಯ ಸತ್ಯದ ಪತ್ರ ಬರೆಯುತ್ತಿರುವೆನು. ನಾನು ಸನ್ಯಾಸಿ, ಭಿಕ್ಷೆ ಬೇಡುವುದು ನಮ್ಮ ಧರ್ಮ. ದೇಶದ ಪ್ರಜಾಪ್ರಭುತ್ವದ ರಕ್ಷಣೆಯ ಭಿಕ್ಷೆಯನ್ನು ಬೇಡುವೆ'' ಎಂದು ಬರೆದು ಜೊತೆಗೆ ಯಾವುದೋ ಬರಗಾಲ ಪರಿಹಾರದ ನಿಧಿಗೆ ಕಾಣಿಕೆಯನ್ನು ಇಟ್ಟು ಕಳುಹಿಸಿದೆ. ಚೆಕ್ಕಿಗೆ ರಶೀದಿ ಬಂದಿತು. ಆದರೆ ಪತ್ರಕ್ಕೆ ಉತ್ತರ ಬರಲಿಲ್ಲ. ನಂತರ ಇನ್ನೂ ಕಠಿಣವಾದ ಪದಗಳಿಂದ ಪತ್ರವನ್ನು ಬರೆದೆ. ಬಾಂಗ್ಲಾ ದೇಶದಲ್ಲಿ ಸರ್ವಾಧಿಕಾರಿಯಾಗಿ ವಿರೋಧಿ ಪಕ್ಷಗಳನ್ನು ಹತ್ತಿಕ್ಕಿದ ಮುಜಿಬರ ಭೀಕರ ಹತ್ಯೆಯು ಆಗ ತಾನೇ ಆಗಿತ್ತು. ಅದನ್ನು ಉದಾಹರಿಸಿ ಸರ್ವಾಧಿಕಾರದಲ್ಲಿ ಜನರಿಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶವಿಲ್ಲದಿದ್ದಾಗ ಇಂತಹ ಭೀಕರ ಘಟನೆಗಳು ನಡೆಯುತ್ತವೆ. ನಮ್ಮ ದೇಶದಲ್ಲಿ ಇಂತಹದ್ದು ನಡೆಯಬಾರದು. ಆದುದರಿಂದ ಜನರಿಗೆ ಇಷ್ಟರವರೆಗಿನಂತೆಯೇ ಸ್ವಾತಂತ್ರ್ಯ ನೀಡಿರಿ ಎಂದು ಒತ್ತಾಯಿಸಿ ಬರೆದೆ. ಇಷ್ಟು ಕಠೋರವಾಗಿ ಬರೆದರೂ ನನ್ನನ್ನು ಬಂಧಿಸಿಲ್ಲ. ಆನಂತರವೂ ಅನೇಕ ಬಾರಿ ಭೆಟ್ಟಿಯಾದಾಗಲೂ ನನ್ನಲ್ಲಿ ತುಂಬ ಭಕ್ತಿ ಗೌರವ ತೋರುತ್ತಿದ್ದರು. ಮುಕ್ತವಾಗಿ ನನ್ನ ಜೊತೆಗೆ ಚರ್ಚಿಸುತ್ತಿದ್ದರು. ತುರ್ತುಪರಿಸ್ಥಿತಿಯ ಬಗ್ಗೆ ನಂತರವೂ ಅವರ ಜೊತೆಗೆ ಸಾಕಷ್ಟು ತೀವ್ರ ಚರ್ಚೆಯನ್ನು ಮಾಡಿದ್ದೇನೆ. ಇಂತಹ ತೀವ್ರ ಭಿನ್ನಾಭಿಪ್ರಾಯವಿದ್ದರೂ ಅವರು ನನ್ನಲ್ಲಿ ತೋರುತ್ತಿದ್ದ ವಿಶ್ವಾಸ, ಗೌರವಗಳನ್ನು ಮರೆಯಲಾರೆ.

ಪರಿಸರ ರಕ್ಷಣೆ

ಪರಿಸರ ರಕ್ಷಣೆಯೂ ನನ್ನ ಪ್ರೀತಿಯ ವಿಷಯವಾಗಿತ್ತು. ಮರ-ಗಿಡಗಳನ್ನು ಬೆಳೆಸಬೇಕು. ಪರಿಸರಕ್ಕೆ ಹಾನಿಯಾಗದಂತೆ ಭಾರೀ ಉದ್ದಿಮೆಗಳನ್ನು ನಿರ್ಮಿಸಬೇಕು ಎಂಬುದು ನನ್ನ ವಿಚಾರವಾಗಿತ್ತು. ನನ್ನ ಅನೇಕ ಧಾರ್ಮಿಕ, ಸಾಮಾಜಿಕ ಸೇವಾ ಯೋಜನೆಯಲ್ಲಿ ಪರಿಸರದ ಬಗ್ಗೆ ಹೋರಾಟವನ್ನು ಸಂಘಟಿಸಲು ನನಗೆ ಸಾಧ್ಯವಾಗುತ್ತಿರಲಿಲ್ಲ. ಇದನ್ನು ಪರಿಸರ ಹೋರಾಟದಲ್ಲಿ ತೊಡಗಿದ ಕಾರ್ಯಕರ್ತರಲ್ಲಿ ನಾನು ಸ್ಪಷ್ಟವಾಗಿ ತಿಳಿಸಿದ್ದೆ. ''ಹೋರಾಟದ ಸಂಘಟನೆಯನ್ನು ನಾನು ಮಾಡಲಾರೆ. ಆದರೆ ಕರೆದಾಗ ನಾನು ಬಂದು ಹೋರಾಟದಲ್ಲಿ ಭಾಗವಹಿಸುವೆನು. ನನ್ನಿಂದ ಸಾಧ್ಯವಿದ್ದ ಆರ್ಥಿಕ ಸಹಾಯವನ್ನು ನೀಡುವೆನು. ಆದರೆ ನಾನೇ ಎಲ್ಲ ಜವಾಬ್ದಾರಿಯನ್ನು ಹೊತ್ತು ಚಳವಳಿಯನ್ನು ಸಂಘಟಿಸಲು ಸಾಧ್ಯವಾಗುವುದಿಲ್ಲ'' ಎಂದು ಅವರಿಗೆ ಅನೇಕ ಬಾರಿ ಹೇಳಿದ್ದೇನೆ. ಅದರಂತೆ ಕೈಗಾ

ಅಣು ಸ್ಥಾವರವನ್ನು ವಿರೋಧಿಸಿ ನಡೆದ ಜಾಥಾದಲ್ಲಿ ನಾನು ಭಾಗವಹಿಸಿದೆ. ಸ್ವಲ್ಪ ಹೊತ್ತು ಬಂಧನಕ್ಕೂ ಒಳಗಾದೆ. ಮರುದಿನ ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಅಣುಶಕ್ತಿಯ ತಜ್ಞರಾದ ಮೇಲ್ಮಟ್ಟದ ವಿಜ್ಞಾನಿಗಳು, ಅಧಿಕಾರಿಗಳನ್ನು ನನ್ನ ಮನವೊಲಿಸಲು ಕಳುಹಿಸಿದ್ದರು. ಅಣು ವಿಜ್ಞಾನಿಗಳಿಗೂ ಮತ್ತು ಪರಿಸರವಾದಿಗಳಿಗೂ ಕೈಗಾದಿಂದ ಪರಿಸರಕ್ಕೆ ಆಗುವ ಹಾನಿಯ ಬಗ್ಗೆ ಜನತೆಗೆ ಮನವರಿಕೆಯಾಗುವಂತೆ ಮುಕ್ತ ಚರ್ಚೆಯಾಗಬೇಕೆಂದು ನಾನು ಅವರಲ್ಲಿ ತಿಳಿಸಿದೆ. ಅದನ್ನು ಅವರು ಒಪ್ಪಿದರೂ ಸರಿಯಾದ ಚರ್ಚೆ ನಡೆಯಲಿಲ್ಲ. ಮತ್ತೊಮ್ಮೆ ಕೈಗಾದ ವಿರುದ್ಧವಾಗಿ ಉಪವಾಸವನ್ನು ನಡೆಸಿ ಆ ಉಪವಾಸದಲ್ಲಿಯೇ ಪರಿಸರವಾದಿಗಳ ಜೊತೆಗೆ ಅನೇಕ ಕಿಲೋಮೀಟರುಗಳವರೆಗೆ ನಡೆದುಕೊಂಡು ಹೋಗಿ ಯಾವ ಅಧಿಕಾರಿಗಳಿಗೂ ತಿಳಿಯದಂತೆ ಹಿಂಭಾಗದಿಂದ ಸ್ಥಾವರದೊಳಗೆ ಪ್ರವೇಶಿಸಿ ಅಧಿಕಾರಿಗಳನ್ನು ಚಕಿತಗೊಳಿಸಿದೆ. ನಮ್ಮ ಜೊತೆಗೆ ಬಂದ ಹೋರಾಟಗಾರರು ಘೋಷಣೆಗಳನ್ನು ಕೂಗಿದರು. ನಂತರ ಅಧಿಕಾರಿಗಳೇ ಕಾರಿನ ವ್ಯವಸ್ಥೆಮಾಡಿ ನನ್ನನ್ನು ಕಾರವಾರಕ್ಕೆ ಕಳುಹಿಸಿದರು.

ಮೂರನೇ ಬಾರಿ ಅನೇಕ ವಾಹನಗಳಲ್ಲಿ ನೂರಾರು ಚಳವಳಿಗಾರರ ಜೊತೆಗೆ ಪುನಃ ಕೈಗಾಕ್ಕೆ ಭೇಟಿ ನೀಡಿದೆ. ಅಧಿಕಾರಿಗಳು ಬಂದು ಸ್ವಾಗತಿಸಿದರು. ಕೈಗಾದ ಒಂದು ಗುಮ್ಮಟವು ಕುಸಿದು ಬಿದ್ದಿದೆ. ಇದರ ಕಾರಣವೇನೆಂಬುದು ಜನತೆಗೆ ಗೊತ್ತಾಗಿಲ್ಲ. ಹೀಗಾಗಿ ಕೈಗಾ ಅಪಾಯಕಾರಿಯೆಂಬ ಭಾವನೆಯು ಶುರುವಾಗಲು ಅವಕಾಶವಾಗಿದೆ. ಅತ್ಯಂತ ಸೂಕ್ಷ್ಮ ಸ್ಥಳದಲ್ಲಿರುವ ಕೈಗಾ ವಿಶಾಲ ಪರಿಸರಕ್ಕೆ ಭೀಕರ ಅಪಾಯಕಾರಿಯಾಗುವ ಸಾಧ್ಯತೆಯಿದೆ. ಆದುದರಿಂದ ಪರಿಸರವಾದಿಗಳ, ಅಣುವಿಜ್ಞಾನಿಗಳ ಮುಕ್ತ ಚರ್ಚೆ ನಡೆಯಬೇಕೆಂದು ನಾನು ಅಲ್ಲಿ ಒತ್ತಾಯಿಸಿದೆ. ಗುಮ್ಮಟದ ಪತನದ ಬಗ್ಗೆ ತಜ್ಞರ ವರದಿಯು ಬಂದ ನಂತರ ಈ ಚರ್ಚೆಯನ್ನು ಏರ್ಪಡಿಸುವುದಾಗಿ ಅಧಿಕಾರಿಗಳು ಆಶ್ವಾಸನೆ ನೀಡಿದರು. ಆದರೆ ಅಂತಹ ಚರ್ಚೆಯ ಏರ್ಪಾಡು ಆಗಲಿಲ್ಲ.

ನಾಗಾರ್ಜುನ ಕಂಪನಿಯಿಂದ ಕಬ್ಬಿಣಕ್ಕೆ ಸಂಬಂಧಿಸಿದ ದೊಡ್ಡ ಕಾರ್ಖಾನೆಗೆ ಪ್ರಧಾನಮಂತ್ರಿ ನರಸಿಂಹರಾಯರು ಆಗಮಿಸಿ ಶಿಲಾನ್ಯಾಸ ಮಾಡಲಿರುವರೆಂದು ಪ್ರಕಟವಾಗಿತ್ತು. ಆದರೆ ಭೂಮಿಯ ಧಾರಣಾ ಶಕ್ತಿಯನ್ನು (carrying capacity) ಪರಿಶೀಲಿಸದೆ ಹೊಸ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸ ಬಾರದೆಂದು ನಮ್ಮ ಆಗ್ರಹವಾಗಿತ್ತು. ತಜ್ಞರ ಸಮಿತಿಯನ್ನು ಕೂಡಲೇ ನೇಮಿಸಿ ಭೂಮಿ ಧಾರಣಾ ಶಕ್ತಿಯನ್ನು ಪರಿಶೀಲಿಸುವ ಏರ್ಪಾಡು ಆಗಬೇಕೆಂದು ನಾವೆಲ್ಲರೂ ಒತ್ತಾಯಿಸುತ್ತಿದ್ದೆವು. ಇದೀಗ ಅವಸರದಿಂದ ಶಿಲಾನ್ಯಾಸವನ್ನು ಏರ್ಪಡಿಸಿದ್ದರಿಂದ ಪರಿಸರವಾದಿಗಳು ಆತಂಕಗೊಂಡು ನನ್ನನ್ನು ಸಂಪರ್ಕಿಸಿದರು. ನಾನು ಪ್ರಧಾನಮಂತ್ರಿಗಳಿಗೆ ಶಿಲಾನ್ಯಾಸವನ್ನು ನಡೆಸಬಾರದೆಂದೂ ಇಲ್ಲದಿದ್ದರೆ ನಾವೆಲ್ಲ ಅನೇಕ ಮಠಾಧಿಪತಿಗಳು ಉಪವಾಸ ಕೈಗೊಳ್ಳುವೆವೆಂದೂ ಸಂದೇಶವನ್ನು ಕಳುಹಿಸಿದ್ದೆವು. ಕೂಡಲೇ ಪ್ರಧಾನಮಂತ್ರಿಗಳು ತಮ್ಮ ಕಾರ್ಯಕ್ರಮವನ್ನು ಸ್ಥಗಿತಗೊಳಿಸಿ ನಾಗಾರ್ಜುನ ಕಂಪನಿಯ ಅಧಿಕಾರಿಗಳು ನಮ್ಮನ್ನು ಸಂಪರ್ಕಿಸುವಂತೆ ತಿಳಿಸಿದರು. ಅದರಂತೆ ಕೃಷ್ಣ ಮಠದ ಬಡಗು ಮಾಳಿಗೆಯಲ್ಲಿ ಏರ್ಪಾಡಾದ ಉಡುಪಿಯ ಮಠಾಧಿಪತಿಗಳು, ನಾಗಾರ್ಜುನ ಕಂಪನಿಯ ಅಧಿಕಾರಿಗಳು, ಪರಿಸರವಾದಿಗಳು ಹಾಗೂ ನಾಗರಿಕರ ಸಭೆಯಲ್ಲಿ ವಿಶೇಷ ಚರ್ಚೆಯು ನಡೆಯಿತು. ದೊಡ್ಡ ಕೈಗಾರಿಕೆಗಳಿಗೆ ನಾನು ವಿರೋಧಿಯಲ್ಲ. ಆದರೆ ನೆಲದ ಧಾರಣಾ ಸಾಮರ್ಥ್ಯವನ್ನು ಪರಿಶೀಲಿಸದೆ ಒಂದೇ ಕಡೆ ಉದ್ಯಮಗಳನ್ನು ಕೇಂದ್ರಿಕರಿಸಿ ಪ್ರಕೃತಿಯ ಸಮತೋಲನವನ್ನು ಕೆಡಿಸಿ ಪರಿಸರವನ್ನು ಅಸ್ತವ್ಯಸ್ತಗೊಳಿಸುವುದಕ್ಕೆ ಮಾತ್ರ ನನ್ನ ವಿರೋಧವಿದೆ. ತಾತ್ಕಾಲಿಕ ಲಾಭವನ್ನು ಮಾತ್ರ ಗಮನಿಸಿ ಪ್ರಕೃತಿಯನ್ನು ಕೊಳ್ಳೆ ಹೊಡೆದು ಭಾವೀ ಪೀಳಿಗೆಯ ಭವಿಷ್ಯದ ಜೊತೆಗೆ ಚೆಲ್ಲಾಟವಾಡುವುದನ್ನು ಮಾತ್ರ ನಾನು ವಿರೋಧಿಸುತ್ತೇನೆ. ಹೀಗಾಗಿ

ನಂದಿಕೂರಿನ ಕೊಜೆಂಟ್ರಿಕ್ಸ್ ಕಾರ್ಖಾನೆಯನ್ನೂ ನಾನು ವಿರೋಧಿಸಿದೆ. ಪರಿಸರವಾದಿಗಳ ಒತ್ತಡದಿಂದ ಸರಕಾರವು ಧಾರಣಾಶಕ್ತಿಯ ಪರಿಶೀಲನೆಗಾಗಿ ಸಮಿತಿಯನ್ನೇನೋ ನೇಮಿಸಿತು. ಆದರೆ ಅದು ಕಾರ್ಯಪ್ರವೃತ್ತವೇ ಆಗಲಿಲ್ಲ. ಪರಿಸರದ ಹೋರಾಟಗಾರರು ಈ ವಿಷಯದಲ್ಲಿ ಯಾವುದೇ ಚಳವಳಿ, ಹೋರಾಟಗಳನ್ನು ಸಂಘಟಿಸಿದರೂ ಅದನ್ನು ಬೆಂಬಲಿಸಲು ಮತ್ತು ಅದರಲ್ಲಿ ಭಾಗವಹಿಸಲು ಈಗಲೂ ನಾನು ಸಿದ್ಧನಿದ್ದೇನೆ.

ಬೆಂಗಳೂರಿನ ಸಮೀಪದಲ್ಲಿ ತೆರೆಯಲು ಯೋಜಿಸಿದ ದೊಡ್ಡ ಪ್ರಮಾಣದ ಯಾಂತ್ರಿಕ ಗೋವಧಾಲಯ (ಕಸಾಯಿಖಾನೆ)ದ ವಿರುದ್ಧವಾಗಿ ಅಲ್ಲಿಯ ಜನರು ಮಾರವಾಡಿಗಳು, ಜೈನರು ನಡೆಸಿದ ಆಂದೋಲನಕ್ಕೂ ಬೆಂಬಲ ನೀಡಿದೆ. ಹೈದರಾಬಾದಿನ ಸಮೀಪದ ರುದ್ರಾರಂನಲ್ಲಿ ಪ್ರಾರಂಭಿಸಲಾದ ಬೃಹತ್ ಪ್ರಮಾಣದ ಪಶುವಧಾಲಯದ ವಿರುದ್ಧವಾಗಿ ನಡೆದ ಹೋರಾಟದಲ್ಲಿಯೂ ಭಾಗವಹಿಸಿದೆ. ಭಾರತದ ಅನೇಕ ಸಂತರೂ ವಿಶ್ವಹಿಂದು ಪರಿಷತ್ ಈ ಪಶುವಧಾಲಯದ ವಿರುದ್ಧ ಹೋರಾಟವನ್ನು ಆರಂಭಿಸಿತ್ತು. ಈ ಬೃಹತ್ತಾದ ಯಾಂತ್ರಿಕ ಕಸಾಯಿಖಾನೆಯು ಅತ್ಯಧಿಕ ಪ್ರಮಾಣದಿಂದ ಗೋಸಂಪತ್ತಿನ ಹಾಗೂ ಪಶುಸಂಪತ್ತಿನ ವಿನಾಶಕ್ಕೆ ಕಾರಣವಾಗುವುದೆಂದು ಎಲ್ಲರೂ ತಲ್ಲಣಗೊಂಡಿದ್ದರು. ಆದರೆ ಸರಕಾರವು ಈ ಖಾಸಗಿ ಕಂಪನಿಯ ಬಗ್ಗೆ ಅನಾವಶ್ಯಕ ಆಸಕ್ತಿವಹಿಸಿ ಚಳವಳಿಯನ್ನು ದಮನ ಮಾಡಲು ಸಿದ್ಧವಾಗಿತ್ತು. ಆ ಪಶುವಧಾಲಯದ ಸಮೀಪಕ್ಕೂ ಚಳವಳಿಗಾರರು ಸುಳಿಯದಂತೆ ೧೫ ಕಿಲೋಮೀಟರ ದೂರದವರೆಗೂ ಬಿಗಿ ಪೊಲೀಸ್ ಬಂದೋಬಸ್ತನ್ನು ಸರಕಾರವು ಮಾಡಿತ್ತು. ನಾನು ಆ ದಿನ ಬೆಳಿಗ್ಗೆ ವಾಹನದಲ್ಲಿ ಆ ಕಸಾಯಿಖಾನೆಯ ಹಿಂಬದಿಯ ಪ್ರದೇಶಕ್ಕೆ ಹೋಗಿ ಕಾಲ್ನಡಿಗೆಯಿಂದ ಹೊರಟೆ. ಬೆಳಗ್ಗಿನ ಪೂಜೆಯೂ ಆಗಿರಲಿಲ್ಲ. ೨-೩ ಗಂಟೆಯವರೆಗೂ ೧೦-೨೦ ಕಿಲೋಮೀಟರ್ ದೂರ ಪ್ರದೇಶವನ್ನು ಹೊಲಗದ್ದೆಗಳಲ್ಲಿ ಉಪವಾಸದಲ್ಲಿ ನಡೆದುಕೊಂಡೇ ಕ್ರಮಿಸಿದೆ. ನನ್ನ ಜೊತೆಗೆ ಸುಮಾರು ೩೦ ಜನ ಇದ್ದರು. ಕೊನೆಗೆ ಕಸಾಯಿಖಾನೆಯ ಹಿಂಬದಿಯಿಂದ ಆ ನಿರ್ಬಂಧಿತ ಪ್ರದೇಶಕ್ಕೆ ಪ್ರವೇಶಿಸಿದಾಗ ಪೊಲೀಸರು ಅಚ್ಚರಿಗೊಂಡರು. ಅಲ್ಲಿಯೇ ಕುಳಿತು ವಿಷ್ಣು ಸಹಸ್ರನಾಮ ಪಾರಾಯಣ ಮಾಡಿದೆನು. ಪೊಲೀಸರು ನಮ್ಮನ್ನು ಬಂಧಿತರೆಂದು ಘೋಷಿಸಿ ಬಸ್ಸಿನಲ್ಲಿ ಪೊಲೀಸ್ ಮುಖ್ಯಾಧಿಕಾರಿಗಳ ಕಛೇರಿಗೆ ನಮ್ಮನ್ನು ಕರೆದೊಯ್ದರು. ಪೊಲೀಸ್ ಮುಖ್ಯಾಧಿಕಾರಿಗಳು ನಮ್ಮನ್ನು ನೋಡಿದ ಕೂಡಲೇ ಗೌರವ ಸಲ್ಲಿಸಿ ನಮ್ಮನ್ನು ಬಿಡುಗಡೆಗೊಳಿಸಿ ತಮ್ಮ ಕಾರಿನಲ್ಲಿ ನಮ್ಮ ವಸತಿಗೆ ನಮ್ಮನ್ನು ಕಳುಹಿಸಿಕೊಟ್ಟರು. ನಂತರ ೫ ಗಂಟೆಯ ಮೇಲೆ ಪೂಜಾದಿಗಳನ್ನು ನೆರವೇರಿಸಿ ಆಹಾರವನ್ನು ಸ್ವೀಕರಿಸಿದೆ. ಹೀಗೆ ಪೊಲೀಸರ ಸರ್ಪಗಾವಲನ್ನು ಭೇದಿಸಿ ಆ ಪ್ರದೇಶಕ್ಕೆ ಪ್ರವೇಶಿಸಿ ಪ್ರತಿಭಟನೆಯನ್ನು ವ್ಯಕ್ತಪಡಿಸುವ ಅಪೂರ್ವ ಅನುಭವವು ನನಗೆ ಅಂದು ದೊರಕಿತು.

ಉಡುಪಿಯಿಂದ ೭ ಕಿಲೋಮೀಟರ್ ದೂರದಲ್ಲಿರುವ ಪಾಜಕ ಕ್ಷೇತ್ರವು ಮಧ್ವಾಚಾರ್ಯರ ಪಾವನ ಜನ್ಮಭೂಮಿಯಾಗಿದೆ. ಸುತ್ತಲೂ ಕಾಡು ಬೆಟ್ಟಗಳಿಂದ ಆವೃತ್ತವಾದ, ಪ್ರಸಿದ್ಧ ಕುಂಜಾರುಗಿರಿಯಿಂದ ಕಂಗೊಳಿಸುವ ರಮಣೀಯ ಪ್ರದೇಶವು ಅಧಿಕೃತ, ಅನಧಿಕೃತ ಗನಿಗಾರಿಕೆಗಳಿಂದಾಗಿ ಉಧ್ವಸ್ತವಾಗುವ ಸನ್ನಿವೇಶವನ್ನು ತಲುಪಿತ್ತು. ಪಾಜಕದ ಪವಿತ್ರ ಪರಿಸರದ ಮೇಲೆ ನಡೆಯುತ್ತಿರುವ ಈ ಹಲ್ಲೆ, ವಿಧ್ವಂಸದ ಕಾರ್ಯದಿಂದ ಜನತೆಯು ಜಾಗೃತವಾಯಿತು. ಮಠಾಧಿಪತಿಗಳು ಈ ಬಗ್ಗೆ ಏನೂ ಕ್ರಮ ಕೈಗೊಳ್ಳದೆ ಯಾಕೆ ನಿಷ್ಕ್ರಿಯರಾಗಿದ್ದಾರೆಂಬ ಆಕ್ಷೇಪದ ದನಿಯೂ ಕೇಳಲಾರಂಭವಾಯಿತು. ಆಗ ನಾನು ಈ ಗನಿಗಾರಿಕೆಯನ್ನು ನಿಲ್ಲಿಸುವ ಬಗ್ಗೆ ಎಲ್ಲ ಪ್ರಯತ್ನಗಳನ್ನೂ ಆರಂಭಿಸಿದೆ. ಸಚಿವರನ್ನು, ಅಧಿಕಾರಿಗಳನ್ನು ಸಂದರ್ಶಿಸಿ ಅವರಿಗೆ ಒತ್ತಡವನ್ನೂ ತಂದೆ. ವಿಧಾನಸಭೆಯಲ್ಲಿಯೂ ಈ ಬಗ್ಗೆ ಪ್ರಶ್ನೆಗಳನ್ನು ಕೇಳಲಾಯಿತು. ಯುವಕರ ಉತ್ಸಾಹದಿಂದ ಎಲ್ಲ

ಪೀಠಾಧಿಪತಿಗಳ ಸಹಕಾರ ಹಾಗೂ ಕೂಡುವಿಕೆಯಿಂದ ದೊಡ್ಡ ಜಾಥಾವನ್ನೂ ಏರ್ಪಡಿಸಲಾಯಿತು. ಸರಕಾರದಿಂದ ಆಶ್ವಾಸನೆಗಳು ದೊರೆತರೂ ಗನಿಗಾರಿಕೆಯು ಸ್ಥಗಿತಗೊಳ್ಳಲಿಲ್ಲ. ಕೊನೆಗೆ ಅನಿರ್ದಿಷ್ಟ ಅವಧಿಯವರೆಗೆ ಉಪವಾಸವನ್ನು ನಡೆಸುವುದಾಗಿ ಘೋಷಣೆ ಮಾಡಿದೆನು. ಉತ್ತರಾದಿ ಮಠದ ಸತ್ಯಾತ್ಮತೀರ್ಥರು ತಾನೂ ಉಪವಾಸ ಆರಂಭಿಸುವುದಾಗಿ ತಿಳಿಸಿದರು. ಆಗ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಜೆ. ಎಚ್. ಪಟೇಲರು ತಮ್ಮ ಸಂಪುಟದ ಸಹೋದ್ಯೋಗಿಯಾದ ರಮೇಶ್ ಜಿಗಜಿಣಗಿಯವರನ್ನು ಕಳುಹಿಸಿ ಉಪವಾಸ ನಿಲ್ಲಿಸುವಂತೆ ಮನವಿ ಮಾಡಿದರು. ಗನಿಗಾರಿಕೆಯನ್ನು ನಿಲ್ಲಿಸುವ ಬಗ್ಗೆ ಎಲ್ಲ ಕ್ರಮಗಳನ್ನು ಕೈಗೊಂಡರು. ಇದೀಗ ಗಣಿಗಾರಿಕೆಯು ಪೂರ್ಣವಾಗಿ ಸ್ಥಗಿತಗೊಂಡು ಅಭಿವೃದ್ಧಿಕಾರ್ಯವು ಆರಂಭಗೊಂಡಿದೆ.

ಪಂಜಾಬದ ಶಾಂತಿ ಯಾತ್ರೆ

ಪಂಜಾಬದಲ್ಲಿ ಸ್ವತಂತ್ರ ಸಿಖ್ಖ್ ರಾಜ್ಯ ಸ್ಥಾಪನೆಗಾಗಿ ಭಯೋತ್ಪಾದಕ ಕಾರ್ಯವು ನಡೆಯುತ್ತಿತ್ತು. ಭಯೋತ್ಪಾದಕರಾದ ದಾರಿತಪ್ಪಿದ ಯುವಕರು ಮುಗ್ಧ ಅಮಾಯಕ ಜನರ ಹಿಂಸಾಕೃತ್ಯದಲ್ಲಿ ತೊಡಗಿದ್ದರು. ಇಡೀ ಪಂಜಾಬಿನಲ್ಲಿ ಅಶಾಂತಿ, ಭಯಾನಕ ವಾತಾವರಣ ಉಂಟಾಗಿತ್ತು. ಆಗ ವಿಶ್ವಹಿಂದು ಪರಿಷತ್ತು ಸುಮಾರು ೧೯೮೫ರಲ್ಲಿ ನಂತರ ಶಾಂತಿ ಯಾತ್ರೆಯನ್ನು ಪಂಜಾಬಿನಲ್ಲಿ ಏರ್ಪಡಿಸಿತ್ತು. ನಾನೂ ಅದರಲ್ಲಿ ಭಾಗವಹಿಸಿದ್ದೆ. ಸುಬ್ರಹ್ಮಣ್ಯ ಸ್ವಾಮೀಜಿಯವರು, ಬೇಲಿಮಠ ಸ್ವಾಮೀಜಿಯವರು ನಮ್ಮ ಜೊತೆಗೆ ಇದ್ದರು. ಬೃಂದಾವನದ ಸ್ವಾಮಿ ವಾಮದೇವಜೀ, ಭಾರತ್‌ಮಾತಾ ಮಂದಿರದ ಸತ್ಯಮಿತ್ರಾನಂದಜೀ ಮುಂತಾದವರು ಭಾಗವಹಿಸಿದ್ದರು. ಪಂಜಾಬದ ಪ್ರಮುಖ ನಗರಗಳಿಗೆಲ್ಲ ಈ ಶಾಂತಿ ಯಾತ್ರೆಯ ಕಾರ್ಯಕ್ರಮವಿತ್ತು. ಪ್ರತಿಯೊಂದು ಊರುಗಳಲ್ಲಿಯೂ ಗುರುದ್ವಾರ ಮತ್ತು ಹಿಂದೂ ದೇವಾಲಯಗಳಲ್ಲಿ ನಮ್ಮ ಶಾಂತಿ, ಸೌಹಾರ್ದದ ಕರೆಯ ಉಪನ್ಯಾಸಗಳು, ಮೆರವಣಿಗೆಗಳು ನಡೆಯುತ್ತಿದ್ದವು. ಎಲ್ಲ ಕಡೆಗಳಲ್ಲಿ ಗುರುದ್ವಾರಗಳಲ್ಲಿ ಬಹಳ ಆತ್ಮೀಯ ಸ್ವಾಗತವು ನಮಗೆ ದೊರೆಯುತ್ತಿತ್ತು. ಈ ಸಂದರ್ಭದಲ್ಲಿ ಜನಸಂಪರ್ಕದ ದೃಷ್ಟಿಯಿಂದ ಸಾಮೂಹಿಕ ಕಾರ್ಯಕ್ರಮದ ಹೊರತಾಗಿ ನಾವು ಪ್ರತ್ಯೇಕವಾಗಿ ಬೇರೆ ಬೇರೆ ಗುರುದ್ವಾರಗಳಿಗೆ ಭೆಟ್ಟಿ ನೀಡಿದೆವು. ಅಲ್ಲಲ್ಲಿ ಜನರ ಜೊತೆಗೆ ಮಾತುಕತೆಗಳನ್ನು ನಡೆಸಿದೆವು. ನಾವು ಗುರುದ್ವಾರಕ್ಕೆ ಬಂದಾಗ ಅಲ್ಲಿಯ ಜನರು ತೋರಿಸಿದ ಆದರ, ಆತಿಥ್ಯಗಳು ಅವಿಸ್ಮರಣೀಯವಾಗಿದ್ದವು.

ರೈತರು, ಯುವಕರು, ಮಹಿಳೆಯರು ಎಲ್ಲಾ ವರ್ಗದ ಜನರನ್ನೂ ನಾವು ಮೂವರೂ ಭೇಟಿಯಾಗಿದ್ದೆವು. ಕೆಲವೆಡೆ ಭಯೋತ್ಪಾದಕರೂ ನಮಗೆ ಸಿಕ್ಕಿದ್ದರು. ನಮ್ಮ ಜೊತೆಗಿದ್ದ ಭದ್ರತಾ ಪಡೆಯ ಸಹಾಯವೂ ಇಲ್ಲದೆ ಸ್ವತಂತ್ರವಾಗಿ ನಾವು ಹೋಗಿದ್ದೆವು. ಜನರಲ್ಲಿ ಹಿಂದುಗಳ ಬಗ್ಗೆ ಸ್ನೇಹವೇ ಕಂಡು ಬರುತ್ತಿತ್ತು. ಸಂತರ ಬಗ್ಗೆ ವಿಶೇಷ ಭಕ್ತಿ ಆದರಗಳನ್ನು ತೋರುತ್ತಿದ್ದರು. ಹಿಂದುಗಳು ಬೇರೆ, ಸಿಖ್ಖರು ಬೇರೆ ಎಂಬ ಭಾವನೆಯೇ ನಮಗೆ ಬರುತ್ತಿರಲಿಲ್ಲ. ಕೇಂದ್ರ ಸರಕಾರದ ಬಗ್ಗೆ ಮಾತ್ರ ಭಾರೀ ಅಸಮಾಧಾನ ಎದ್ದು ಕಾಣುತ್ತಿತ್ತು. ದಕ್ಷಿಣ ಭಾರತದ ಸಂತರ ಬಗ್ಗೆ ಹೆಚ್ಚಿನ ನಂಬಿಕೆ, ವಿಶ್ವಾಸಗಳನ್ನು ತೋರಿಸುತ್ತಿದ್ದರು. ಅಮೃತಸರದ ಸುವರ್ಣ ಮಂದಿರದಲ್ಲಿ ಸಿಖ್ಖ ಧಾರ್ಮಿಕ ನಾಯಕರ ಜೊತೆಗೆ ನಮ್ಮ ಶಾಂತಿಯಾತ್ರೆಯ ಪ್ರಮುಖ ಸಂತರು ಮಾತುಕತೆ ನಡೆಸಿದೆವು. ಇದು ಅಷ್ಟು ಯಶಸ್ವಿಯಾಗದಿದ್ದರೂ ಇದರಿಂದ ನಮಗೆ ಅಪೂರ್ವ ಅನುಭವ ಒದಗಿತು. ಹಿಂದೂ ಸಿಖ್ಖ ಸಮುದಾಯದಲ್ಲಿ ಪರಸ್ಪರ ಪ್ರೀತಿ, ನಂಬಿಕೆಗಳು ಬೆಳೆಯಲು ಇದರಿಂದ ಸಹಾಯವಾಯಿತು. ಸುವರ್ಣ ಮಂದಿರದ ಮಾತುಕತೆಯ ನಂತರ ಮಂದಿರದ ಕೆಳಗಿನ ಅಂತಸ್ತಿನಲ್ಲಿ ಬಹಳ ಮಂದಿ ಭಯೋತ್ಪಾದಕರಿದ್ದಾರೆಂದು ನಮಗೆ ತಿಳಿಯಿತು. ಅವರನ್ನು ಭೆಟ್ಟಿಯಾಗಿ

ಮಾತುಕತೆ ನಡೆಸಬೇಕೆಂದು ನಾನೊಬ್ಬನೇ ಹೊರಟೆನು. ನಮ್ಮ ಜೊತೆಗಿದ್ದ ಸ್ವಾಮಿಗಳೂ ವಿಶ್ವ ಹಿಂದು ಪರಿಷತ್ತಿನ ಪ್ರಮುಖರೂ ಆತಂಕದ ಭಯದಿಂದ ನಮ್ಮನ್ನು ಹೋಗದಂತೆ ಒತ್ತಾಯಿಸಿ ತಡೆದರು.

ಗೋಕಾಕ ಚಳವಳಿ

ಕನ್ನಡದ ಸ್ಥಾನಮಾನಕ್ಕಾಗಿ ನಡೆದ ಗೋಕಾಕ ಚಳವಳಿಯು ಪ್ರಸಿದ್ಧವಾಗಿದೆ. ಇದರಲ್ಲಿ ನನ್ನ ಪಾತ್ರದ ಬಗ್ಗೆ ತುಂಬಾ ತಪ್ಪು ಕಲ್ಪನೆಗಳು ಮೂಡಿದ್ದವು. ಅದನ್ನು ಕೆಲವು ಮಾತುಗಳಿಂದ ವಿವರಿಸುತ್ತಿದ್ದೇನೆ. ರಾಜ್ಯದ ಹೈಸ್ಕೂಲು ಶಿಕ್ಷಣದಲ್ಲಿ ದ್ವಿತೀಯ ಭಾಷೆಯಾಗಿ ಇಂಗ್ಲಿಷನ್ನು ಎಲ್ಲರೂ ತೆಗೆದುಕೊಳ್ಳುತ್ತಿದ್ದರು. ಪ್ರಥಮ ಭಾಷೆಯಾಗಿ ಐಚ್ಛಿಕವಾಗಿ ಕನ್ನಡ, ಸಂಸ್ಕೃತ, ಹಿಂದಿ, ಉರ್ದು ಮುಂತಾದ ೮ ಭಾಷೆಗಳಿಗೆ ಅವಕಾಶವಿತ್ತು. ತೃತೀಯ ಭಾಷೆಯಾಗಿಯೂ ಇವುಗಳಲ್ಲಿ ಒಂದನ್ನು ತೆಗೆದುಕೊಳ್ಳಬಹುದಿತ್ತು. ಪ್ರಥಮ, ದ್ವಿತೀಯ ಭಾಷೆಗಳಿಗೆ ೧೦೦ ಅಂಕಗಳಾಗಿದ್ದರೆ ತೃತೀಯ ಭಾಷೆಗೆ ೫೦ ಅಂಕಗಳು ಮಾತ್ರ. ಪ್ರಥಮ ಭಾಷೆಯಾಗಿ ಕನ್ನಡವನ್ನು ಮಾತ್ರ ಕಲಿಯಬೇಕು. ಉಳಿದ ಭಾಷೆಯನ್ನು ತೃತೀಯ ಭಾಷೆಯಾಗಿ ಮಾತ್ರ ಕಲಿಯಬಹುದೆಂದು ಸರ್ಕಾರವು ಒಂದು ಮಾರ್ಪಾಡು ಮಾಡಿತು. ಇದರಿಂದ ಸಾಕಷ್ಟು ಪಾಠಗಳಿಲ್ಲದೇ ಸಂಸ್ಕೃತ ಶಿಕ್ಷಕರನ್ನು ನೇಮಿಸುವುದೇ ಅಸಾಧ್ಯವಾಗಿ ರಾಜ್ಯದಲ್ಲಿ ಸಂಸ್ಕೃತ ಶಿಕ್ಷಣವೇ ಕುಸಿದು ಹೋಗುತ್ತದೆ. ಆದುದರಿಂದ ಶಾಲೆಗಳಲ್ಲಿ ಸಂಸ್ಕೃತವನ್ನು ಉಳಿಸುವ ಪ್ರಯತ್ನ ಮಾಡಬೇಕೆಂದು ಸಂಸ್ಕೃತ ಅಭಿಮಾನಿಗಳು ಕೇಳಿಕೊಂಡರು. ಆಗ ಗುಂಡೂರಾಯರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದರು. ಉಡುಪಿ ಸಂಸ್ಕೃತ ಕಾಲೇಜಿನ ಅಮೃತ ಮಹೋತ್ಸವಕ್ಕೆ ಆಗಮಿಸಿದ ಗುಂಡೂರಾಯರಲ್ಲಿ ಇದನ್ನು ಪ್ರಸ್ತಾಪಿಸಿದೆ. ಅವರು ಮತ್ತು ಆಗಿನ ಶಿಕ್ಷಣ ಮಂತ್ರಿ ಶಂಕರ ರಾಯರೂ ಮಾತಾಡಿ ವಿ. ಕೆ. ಗೋಕಾಕರ ಅಧ್ಯಕ್ಷತೆಯಲ್ಲಿ ಈ ಸಮಸ್ಯೆಯನ್ನು ವಿಮರ್ಶಿಸಿ ವರದಿಯನ್ನು ನೀಡಲು ಒಂದು ಸಮಿತಿಯನ್ನು ನೇಮಿಸಿದರು. ಈ ಸಮಿತಿಯು ಕನ್ನಡಕ್ಕೆ ವಿರುದ್ಧವಾಗಿ ವರದಿ ನೀಡಬಹುದೆಂಬ ಆತಂಕದಿಂದ ಅಲ್ಲಲ್ಲಿ ವಿರೋಧ, ಪ್ರತಿಭಟನೆಗಳನ್ನು ಎದುರಿಸಬೇಕಾಯಿತು. ಈ ಸಮಿತಿಯು ಕನ್ನಡ ಭಾಷೆಯನ್ನೇ ಕಡ್ಡಾಯವಾಗಿ ಪ್ರಥಮ ಭಾಷೆಯಾಗಿ ಕಲಿಯಬೇಕು. ಸಂಸ್ಕೃತ ಮುಂತಾದ ಇತರ ಭಾಷೆಗಳನ್ನು ೫೦ ಅಂಕಗಳ ತೃತೀಯ ಭಾಷೆಯಾಗಿ ಕಲಿಯಬಹುದೆಂದು ವರದಿ ನೀಡಿತು. ಇದರಿಂದ ಸಂಸ್ಕೃತ ಶಿಕ್ಷಣಕ್ಕೆ ಪೂರ್ತಿ ಹಾನಿಯಾಗುತ್ತದೆ. ಸಂಸ್ಕೃತವನ್ನು ಕಲಿಯಬೇಕೆಂದಿದ್ದವರಿಗೂ ಅದಕ್ಕೆ ಅವಕಾಶ ದೊರೆಯುವುದಿಲ್ಲವೆಂದು ನಾನೂ ಸಂಸ್ಕೃತ ಅಭಿಮಾನಿಗಳೂ ವಾದಿಸಿದೆವು. ಉರ್ದುವಿಗೆ ಅನ್ಯಾಯವಾಗುವುದೆಂದು ಮುಸಲ್ಮಾನರೂ ಪ್ರತಿಭಟಿಸಿದರು. ಕೊನೆಗೆ ಸಾಹಿತಿಗಳೂ, ಶಿಕ್ಷಣತಜ್ಞರೂ ಮುಂತಾದ ಬೇರೆ ಬೇರೆ ಕ್ಷೇತ್ರದ ಪ್ರಮುಖರ ಸಮಾಲೋಚನಾ ಸಭೆಯು ಶಿಕ್ಷಣ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ನಾವೂ ಆ ಸಭೆಯಲ್ಲಿ ಭಾಗವಹಿಸಿದ್ದೆವು. ''ಕನ್ನಡದ ಸ್ಥಾನಕ್ಕೆ ಯಾವುದೇ ಧಕ್ಕೆಯಾಗಬಾರದು. ಅದು ಪ್ರಥಮ ಭಾಷೆಯಾಗಿ ಕಡ್ಡಾಯವಾಗಿರಲಿ. ಆದರೆ ಸಂಸ್ಕೃತ ಮುಂತಾದ ಇತರ ಭಾಷೆಗಳನ್ನು ೧೦೦ ಅಂಕದ ತೃತೀಯ ಭಾಷೆಯಾಗಿ ಐಚ್ಛಿಕವಾಗಿ ಕಲಿಯುವ ಅವಕಾಶವಿರಲಿ. ಇದರಿಂದ ಕನ್ನಡಕ್ಕೆ ಯಾವುದೇ ಅನ್ಯಾಯವಾಗುವುದಿಲ್ಲ ಅದು ಕಡ್ಡಾಯವಾಗಿ ಪ್ರಥಮ ಭಾಷೆಯಾಗಿ ಉಳಿಯುವುದರಿಂದ ಅದರ ಸ್ಥಾನವು ಭದ್ರವಾಗಿರುತ್ತದೆ'' ಎಂದು ನಾನು ಆ ಸಭೆಯಲ್ಲಿ ಪ್ರತಿಪಾದಿಸಿದೆ. ಕೆಲವೊಂದು ಅಭಿಪ್ರಾಯ ಭೇದಗಳಾದರೂ ತತ್ತ್ವಶಃ ಅದನ್ನೇ ಎಲ್ಲರು ಒಪ್ಪಿದರು. ಅದರಂತೆ ಸರಕಾರವೂ ಗೋಕಾಕ ವರದಿಯನ್ನು ಸ್ವಲ್ಪ ಬದಲಾಯಿಸಿ ಆದೇಶ ನೀಡಿತು.

ಆದರೆ ಇದರ ವಿರುದ್ಧವಾಗಿ ಕನ್ನಡಕ್ಕೆ ಅನ್ಯಾಯವಾಗಿದೆಯೆಂಬ ತಲೆಪಟ್ಟಿ ಹಚ್ಚಿ ಉದ್ದೇಶಪೂರ್ವಕವಾಗಿ ಭಾರೀ ಚಳವಳಿಯನ್ನು ಹುಟ್ಟುಹಾಕಲಾಯಿತು. ಮೆರವಣಿಗೆಗಳಲ್ಲಿ ನನ್ನ ವಿರುದ್ಧ ಘೋಷಣೆಗಳು ಮೊಳಗಿದವು. ನನ್ನನ್ನೂ, ಗುಂಡೂರಾಯರನ್ನು ಅಣಕಿಸಿ ಬೀದಿ ನಾಟಕಗಳೂ ನಡೆದಿದ್ದವು.

ಪತ್ರಿಕೆಗಳಲ್ಲಿ ನನ್ನ ವಿರುದ್ಧ ಟೀಕೆಗಳೂ ಪ್ರಾರಂಭವಾದವು. ''ಕನ್ನಡಕ್ಕೆ ಏನು ಅನ್ಯಾಯವಾಗಿದೆ?'' ಎಂದು ನಾನು ಬಾರಿ ಬಾರಿ ಪ್ರಶ್ನಿಸಿದೆ. ಇದನ್ನು ವಿಮರ್ಶಿಸುವ ಗೋಜಿಗೇ ಯಾರೂ ಹೋಗಲಿಲ್ಲ. ಕನ್ನಡವು ಕಡ್ಡಾಯವಾದರೆ ಸಾಲದು. ಎಲ್ಲಾ ಭಾಷೆಗಳಿಗೂ ೧೦೦ ಅಂಕಗಳ ಸಮಾನ ಸ್ಥಾನ ನೀಡದೇ ಕನ್ನಡಕ್ಕೇ ಹೆಚ್ಚು ಅಂಕ ನೀಡಿ ಅಗ್ರಸ್ಥಾನ ಕೊಡಬೇಕೆಂಬ ಸೂಚನೆಗಳು ಬಂದವು. ಕನ್ನಡವು ೧೨೫ ಅಂಕಗಳ ಕಡ್ಡಾಯ ಪ್ರಥಮ ಭಾಷೆಯಾಗಬೇಕೆಂಬ ಸೂಚನೆಯನ್ನೂ ನಾನು ಮಂಡಿಸಿದೆ. ಇದನ್ನೂ ಒಪ್ಪುವಂತೆ ಗುಂಡೂರಾಯರನ್ನೂ ಒತ್ತಾಯಿಸಿದೆ. ಮತ್ತೊಮ್ಮೆ ಮುಖ್ಯಮಂತ್ರಿಗಳು ಸಮಾಲೋಚನೆಯನ್ನು ನಡೆಸಿ ನನ್ನ ಸೂಚನೆಯನ್ನೇ ಸ್ವೀಕರಿಸಿ ಮೊದಲಿನ ಆದೇಶವನ್ನು ಪರಿಷ್ಕರಿಸಿದಾಗ ಆಂದೋಲನವು ಶಾಂತವಾಯಿತು. ಹೀಗೆ ನಾನು ಸಂಸ್ಕೃತ ಪರವಾಗಿ ವರ್ತಿಸಿದರೂ ಮೊದಲಿನಿಂದ ಕೊನೆಯವರೆಗೂ ಕನ್ನಡಕ್ಕೆ ಸ್ವಲ್ಪವೂ ಅನ್ಯಾಯವಾಗದಂತೆ ಅದಕ್ಕೆ ಅನುಕೂಲವಾಗುವಂತೆಯೇ ವರ್ತಿಸಿದ್ದೇನೆ. ಗೋಕಾಕ ವರದಿಯಲ್ಲಿ ನನ್ನ ಪಾತ್ರವನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿದರೆ ನನ್ನ ವಿರುದ್ಧವಾಗಿ ಯಾವ ತಪ್ಪು ಕಲ್ಪನೆಗಳಿಗೂ ಅವಕಾಶವಿಲ್ಲ. ಕನ್ನಡ ಸಂಸ್ಕೃತ ಇವೆರಡರ ಪರವಾಗಿಯೇ ನಾನು ಪ್ರಯತ್ನಿಸಿದ್ದೇನೆಂದು ಎಲ್ಲರಿಗೂ ಅರಿವಾಗದಿರದು.

ಈ ಮುಂಚೆ ಕನ್ನಡವು ೧೦೦ ಅಂಕಗಳ ಐಚ್ಛಿಕ ಭಾಷೆಗಳಲ್ಲಿ ಒಂದಾಗಿತ್ತು. ಕಡ್ಡಾಯವಾಗಿರಲಿಲ್ಲ. ಗೋಕಾಕ ವರದಿಯ ನಂತರ ೧೦೦ ಅಂಕಗಳ ಕನ್ನಡವು ಕಡ್ಡಾಯವಾಗಿತ್ತು. ಸಂಸ್ಕೃತ ಮುಂತಾದ ಭಾಷೆಗಳಿಗೆ ೧೦೦ ಅಂಕಗಳಿದ್ದರೂ ಅವು ಕಡ್ಡಾಯವಾಗಿರಲಿಲ್ಲ. ಬರೆ ಐಚ್ಛಿಕವಾಗಿದ್ದವು. ಹೀಗಾಗಿ ಕನ್ನಡಕ್ಕೇ ಮಹತ್ವ ನೀಡಲಾಗಿತ್ತು. ಮುಂಚೆಗಿಂತ ಕನ್ನಡದ ಸ್ಥಾನವು ಹೆಚ್ಚೇ ಆಗಿತ್ತು. ಆದರೂ ಕನ್ನಡಕ್ಕೆ ಅನ್ಯಾಯವಾಗಿದೆ ಎಂದು ಭಾರೀ ಚಳವಳಿಯು ಯಾಕೆ ನಡೆಯಿತೆಂದು ನನಗೆ ಅರ್ಥವಾಗಲಿಲ್ಲ. ಕೊನೆಗೆ ೨೫ ಅಂಕಗಳನ್ನು ಹೆಚ್ಚಿಸಿದ್ದರಿಂದ ಚಳವಳಿಯು ಶಾಂತವಾಯಿತು. ಇಷ್ಟಕ್ಕೇ ಇಷ್ಟು ದೊಡ್ಡ ಚಳವಳಿಯ ಅಗತ್ಯವಿರಲಿಲ್ಲ. ಮಾತುಕತೆಯಿಂದ ಇದನ್ನು ಸುಲಭವಾಗಿ ಸಾಧಿಸಬಹುದಿತ್ತು. ಜನ ಸಾಮಾನ್ಯರಿಗಂತೂ ಕನ್ನಡಕ್ಕೆ ಏನು ಅನ್ಯಾಯವಾಗಿದೆಯೆಂಬ ಕಲ್ಪನೆಯೇ ಇರಲಿಲ್ಲ.

ಧುರೀಣರು ಅವರಲ್ಲಿ. ಅಂತಹ ಕಲ್ಪನೆಯನ್ನು ಮೂಡಿಸಿದ್ದರಿಂದ ಕೇವಲ ಪ್ರಚಾರದ ಭರಾಟೆಯಿಂದಾಗಿ ಈ ಚಳವಳಿಯ ಪ್ರಾರಂಭವಾಯಿತು. ಏನೇ ಇರಲಿ ಈ ಚಳಿವಳಿಯಿಂದ ಕನ್ನಡ ಜಾಗೃತಿಗೆ ಅನುಕೂಲವಾಯಿತು.

(ಈ ಅಪೂರ್ಣ ಆತ್ಮಕಥನವನ್ನು ಶ್ರೀ ವಿಶ್ವೇಶತೀರ್ಥರು ಈ ಗ್ರಂಥಕ್ಕಾಗಿ, ೧೯೯೯ರಲ್ಲಿ, ಬರೆದಿದ್ದಾರೆ ಅನುಬಂಧ ನೋಡಿ – ಸಂ.)

●

೨-೨

ಪೇಜಾವರ ಶ್ರೀಪಾದರು

ಒಂದು ಸಿಂಹಾವಲೋಕನ

ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಈ ಮಠದ ಗುರುಪರಂಪರೆಯಲ್ಲಿ ೩೩ನೆಯ ಯತಿಗಳಾಗಿ ವೇದಾಂತ ಪೀಠವನ್ನೇರಿದರು.

ಅನೇಕ ಮಂದಿ ವಿದ್ವಾಂಸ ಯತಿಗಳನ್ನು ಸಮಾಜಕ್ಕೆ ನೀಡಿದ ಈ ಮಠದ ಪರಂಪರೆಗೆ ಬಹಳ ದೊಡ್ಡ ಇತಿಹಾಸ ಉಂಟು.

ಈ ಮಠದ ಎರಡನೆಯ ಯತಿ, ಆಚಾರ್ಯ ಮಧ್ವರ ಪ್ರಶಿಷ್ಯ ಶ್ರೀಕಮಲಾಕ್ಷ ತೀರ್ಥರು ಗೀತಕಾವ್ಯಗಳನ್ನು ಬರೆದು ಪ್ರಸಿದ್ಧರಾದವರು. ಅವರು ಬರೆದ 'ಹರಿಗಾಥಾ' ಎಂಬ ಹಾಡುಗಬ್ಬವೊಂದು ಮಾಧ್ವರ ಸಂಕೀರ್ತನೆಯಲ್ಲಿ ಬಳಸುವ 'ಚತುರ್ದಶ ಸ್ತೋತ್ರ' ಗಳಲ್ಲಿ ಪರಿಗಣಿತವಾಗಿದೆ.

ವಿಜಯಧ್ವಜತೀರ್ಥರ ಪರಮ ಗುರುಗಳೆಂದು ನಂಬಲಾದ ವಿಜಯತೀರ್ಥರು ಭಾಗವತಕ್ಕೆ ಟೀಕೆ ಬರೆದಿದ್ದಾರೆ ಎಂಬ ಐತಿಹ್ಯ ಉಂಟು. ವಿಜಯಧ್ವಜರು ಅವರನ್ನು ಕೃತಿಕಾರರೆಂದು ಉಲ್ಲೇಖಿಸಿದ್ದೂ ಉಂಟು. ಆದರೆ ಭಾಗವತಕ್ಕೆ ವ್ಯಾಖ್ಯಾನ ಬರೆದ ವಿಜಯತೀರ್ಥರು ಪೇಜಾವರ ಮಠದ ಯತಿಗಳು ಹೌದೇ ಎನ್ನುವುದು ತೀರ್ಮಾನವಾಗಿಲ್ಲ. ಅವರು ವಿಜಯಧ್ವಜತೀರ್ಥರ ಪರಮ ಗುರುಗಳು ಎನ್ನುವುದೂ ವಿವಾದಗ್ರಸ್ತ ಸಂಗತಿ.

ಪರಂಪರೆಯಲ್ಲಿ ಆರನೆಯವರಾದ ಶ್ರೀ ವಿಜಯಧ್ವಜತೀರ್ಥರಂತೂ ಸಂಸ್ಕೃತ ಸಾಹಿತ್ಯದಲ್ಲೇ ಒಂದು ಅಪೂರ್ವ ಗ್ರಂಥವಾದ ಭಾಗವತದ ಟೀಕೆಯನ್ನು ಬರೆದು ಖ್ಯಾತರಾದರು. ಈ ಮಹಾನ್ ಗ್ರಂಥವಲ್ಲದೆ ಹಲವು ಸ್ತೋತ್ರಗಳನ್ನೂ ವಿಜಯಧ್ವಜರು ಬರೆದಿದ್ದಾರೆ. ಇನ್ನೂ ಕೆಲವು ಅಪೂರ್ವ ಗ್ರಂಥಗಳು ಇತ್ತೀಚೆಗೆ ಸಿಕ್ಕಿವೆ.

ಅನಂತರ ಈ ಪರಂಪರೆಯಲ್ಲಿ ಗಮನಕ್ಕೆ ಬಂದ ಗ್ರಂಥಕಾರರೆಂದರೆ ಆಚಾರ್ಯರಿಂದ ೧೬ನೆಯವರಾದ ಶ್ರೀ ವಿಶ್ವೇಶ್ವರತೀರ್ಥರು. ಇವರು ಬರೆದ ಐತರೇಯ ಭಾಷ್ಯದ ಟೀಕೆ ಮತ್ತು ಗೀತೆಯ ಮೇಲಣ ಟಿಪ್ಪಣಿ ಉಪಲಬ್ಧವಿದ್ದರೂ ಈ ತನಕ ಮುದ್ರಣಗೊಂಡಿಲ್ಲ.

ಪರಂಪರೆಯಲ್ಲಿ ೨೧ನೆಯವರಾದ ವಿಶ್ವಪತಿತೀರ್ಥರು ಅನೇಕ ಗ್ರಂಥಗಳಿಗೆ ಸುಲಭ ಶೈಲಿಯಲ್ಲಿ ಟೀಕೆಗಳನ್ನು ಬರೆದು ಪ್ರಸಿದ್ಧರಾದವರು. ಇವರು ದ್ವಾದಶ ಸ್ತೋತ್ರ, ಚತುರ್ದಶ ಸ್ತೋತ್ರ ಮತ್ತು ಪಂಚಸ್ತುತಿಗಳಿಗೆ ಟೀಕೆ ಬರೆದಿದ್ದಾರೆ. ಮಧ್ವವಿಜಯ, ಮಣಿಮಂಜರಿ ಮತ್ತು ಸಂಗ್ರಹ ರಾಮಾಯಣಗಳಿಗೂ ಟೀಕೆಗಳನ್ನು ಬರೆದಿದ್ದಾರೆ. ಸಂಗ್ರಹ ರಾಮಾಯಣದ ಮೇಲಣ ಟೀಕೆ ಅನೇಕ ಅಪೂರ್ವ ವಿಷಯಗಳನ್ನೊಳಗೊಂಡಿದ್ದು ಇನ್ನೂ ಮುದ್ರಣಕ್ಕಾಗಿ ದಾರಿ ಕಾಯುತ್ತಿದೆ.

ಇಂಥ ಈ ಪರಂಪರೆಯ ಉಜ್ವಲ ಇತಿಹಾಸವನ್ನು ಜ್ವಲಂತವಾಗಿಯೆ ಉಳಿಸಿ ಬೆಳೆಸುತ್ತಿರುವ ಕೀರ್ತಿ, ಪರಂಪರೆಯಲ್ಲಿ ೩೩ನೆಯವರಾಗಿ ಪೀಠವನ್ನೇರಿದ ಈಗಣ ಪೀಠಾಧಿಪತಿ ಶ್ರೀವಿಶ್ವೇಶತೀರ್ಥರಿಗೆ ಸಲ್ಲುತ್ತದೆ.

ಶ್ರೀಪಾದರ ಪೂರ್ವಾಶ್ರಮದ ಹೆಸರು ವೆಂಕಟರಮಣ. ಹುಟ್ಟೂರು ರಾಮಕುಂಜ ಎಂಬ ಪುಟ್ಟ ಹಳ್ಳಿ, ೧೩ನೆಯ ಶತಕದಲ್ಲಿ ಆಚಾರ್ಯ ಮಧ್ವರು ನಡೆದಾಡಿದ ಹಳ್ಳಿ. ಉಡುಪಿಯಿಂದ ೧೨೦ ಕಿ.ಮೀ. ದೂರದಲ್ಲಿ, ಸುಬ್ರಹ್ಮಣ್ಯದ ಸಮೀಪದಲ್ಲಿ ಸಿಗುವ ಒಂದು ಹಳ್ಳಿ. ಈ ಹಳ್ಳಿಯಲ್ಲಿ ವಾಸವಾಗಿದ್ದ ದಂಪತಿಗಳು: ದಿ। ಎಂ. ನಾರಾಯಣಾಚಾರ್ಯ ಮತ್ತು ಕಮಲಮ್ಮ. ಈ ದಂಪತಿಗಳ ಎರಡನೆಯ ಶಿಶುವಾಗಿ (ತಾ. ೨೭-೪-೧೯೩೧) ಪ್ರಜಾಪತಿ ಸಂವತ್ಸರದ ವೈಶಾಖ ಶುದ್ಧ ದಶಮಿಯಂದು ಸೋಮವಾರ ವೆಂಕಟರಮಣನ ಶುಭ ಜನನ.

ರಾಮಕುಂಜದ ಹಳ್ಳಿಯ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. ೮ನೇ ವರ್ಷದಲ್ಲೇ ಉಪನಯನ.

ಉಪನಯನದ ಪೂರ್ವದಲ್ಲಿ ತಂದೆ-ತಾಯಿ ಮಗುವನ್ನು ಉಡುಪಿಗೆ ಕರೆತಂದರು. ಆಗ ಪೇಜಾವರ ಮಠದ ಪರ್ಯಾಯವೇ ನಡೆದಿತ್ತು. ಹುಡುಗ ವೆಂಕಟರಮಣ ಮಠದ ಸ್ವಾಮಿಗಳು ಕೃಷ್ಣಪೂಜೆ ಮಾಡುವುದನ್ನು ಬಹು ಆಸಕ್ತಿಯಿಂದ ಗಮನಿಸಿದ. ಕೃಷ್ಣನ ಗುಡಿ ಬಾಲಕನಿಗೆ ಹಿರಿಯ ಆಕರ್ಷಣೆಯ ಕೇಂದ್ರವಾಯಿತು. ಹೀಗೆ ಬಾಲ್ಯದಲ್ಲೇ ಭವಿಷ್ಯದ ಜೀವನಕ್ಕೆ ಬೀಜಕ್ಷೇಪವಾಯಿತು.

ಒಮ್ಮೆ ಸ್ವಾಮಿಗಳನ್ನು ನಮಸ್ಕರಿಸಲು ಹೋದಾಗ ಆಗಣ ಗುರುಗಳು ಬಾಲಕನ ಮುಗ್ಧಮುಖವನ್ನು ಕಂಡು 'ನೀನು ನನ್ನಂತೆಯೇ ಸ್ವಾಮಿಯಾಗುತ್ತೀಯಾ?' ಎಂದು ಕೇಳಿದರಂತೆ. ಆಗ ಹುಡುಗ 'ಹ್ಞೂ, ಆಗುತ್ತೇನೆ' ಎಂದನಂತೆ. ವಿನೋದಕ್ಕಾಗಿ ಆಡಿದ ಈ ಸಂಭಾಷಣೆಗೆ ದೇವತೆಗಳು 'ತಥಾಸ್ತು' ಎಂದುಬಿಟ್ಟರು.

ಮುಂದೆ ಸಂಚಾರಕ್ಕೆ ಹೊರಟ ಆಗಣ ಪೇಜಾವರ ಮಠಾಧೀಶರಾಗಿದ್ದ ಶ್ರೀವಿಶ್ವಮಾನ್ಯತೀರ್ಥರು ಈ ಹುಡುಗನನ್ನೇ ಉತ್ತರಾಧಿಕಾರಿಯಾಗಿ ಸ್ವೀಕರಿಸಲು ಬಯಸಿದರು. ಮಠಾಧಿಪತ್ಯದ ಬಗ್ಗೆ ಮೊದಲಿನಿಂದಲೂ ಅನಾಸಕ್ತಿ ಬೆಳೆಸಿಕೊಂಡಿದ್ದ ಅವರು ವಿಳಂಬ ಮಾಡದೆ ತಾನು ಯಾತ್ರಾ ಮಾರ್ಗವಾಗಿ ತಂಗಿದ್ದ ಹಂಪೆಗೆ ವೆಂಕಟರಮಣನನ್ನು ಕರೆಸಿಕೊಂಡರು.

ಬಹುಧಾನ್ಯ ಸಂವತ್ಸರದ ಮಾರ್ಗಶಿರ ಶುದ್ಧ ದಶಮಿಯಂದು ಶುಕ್ರವಾರ ವೆಂಕಟರಮಣನಿಗೆ ಹಂಪೆಯ ಯಂತ್ರೋದ್ಧಾರ ಮುಖ್ಯಪ್ರಾಣನ ಸನ್ನಿಧಿಯಲ್ಲಿ ಆಶ್ರಮದೀಕ್ಷೆ ನಡೆಯಿತು. ರಾಮಕುಂಜದ ಹಳ್ಳಿಯ ಮುಗ್ಧ ಬಾಲಕ ಪೇಜಾವರ ಮಠದ ಅಧೋಕ್ಷಜ ತೀರ್ಥರ ಸಂಸ್ಥಾನಕ್ಕೆ ಉತ್ತರಾಧಿಕಾರಿಯಾಗಿ ಆಚಾರ್ಯ ಮಧ್ವರ ವೇದಾಂತ ಪೀಠವನ್ನೇರಿದ. ವೆಂಕಟರಮಣ ವಿಶ್ವೇಶತೀರ್ಥರಾದರು.

ಸಂಸ್ಕೃತದ ಪ್ರಾರಂಭದ ಶಿಕ್ಷಣ ಉಡುಪಿಯ ಮಠದ ವಿದ್ವಾಂಸರುಗಳಲ್ಲಿಯೇ ನಡೆಯಿತು.

ಈ ದಿನಗಳಲ್ಲಿ ಒಮ್ಮೆ ಭಂಡಾರಕೇರಿ ಮಠಾಧೀಶರಾದ (ಈಗಣ ಪಲಿಮಾರು ಮಠಾಧೀಶರು ಕೂಡ) ಶ್ರೀವಿದ್ಯಾಮಾನ್ಯತೀರ್ಥರು ಉಡುಪಿಗೆ ಚಿತ್ತೈಸಿದರು. ತಪಸ್ವಿಗಳೂ ಹಿರಿಯ ವಿದ್ವಾಂಸರುಗಳೂ ಆದ ಈ ಯತಿಪುಂಗವರನ್ನು ಬಾಲಯತಿ ವಿಶ್ವೇಶತೀರ್ಥರು ತಮ್ಮ ಮಠಕ್ಕೆ ಕರೆಯಿಸಿ ಸತ್ಕರಿಸಿದರು. ಆಗಲೇ

ಬಾಲಯತಿಯ ಚುರುಕು ಚಾಲಾಕುಗಳನ್ನು ಕಂಡು ಪ್ರಭಾವಿತರಾದ ಶ್ರೀವಿದ್ಯಾಮಾನ್ಯತೀರ್ಥರು ಮುಂದಿನ ವರ್ಷ ತಾನು ಪ್ರಾರಂಭಿಸಿದ ಮಧ್ವರಾದ್ಧಾಂತ ಸಂವರ್ಧಿನೀ ಸಭೆಯ ಅಧ್ಯಕ್ಷತೆಗೆ ಬಾಲಯತಿ ಪೇಜಾವರ ಶ್ರೀಪಾದರನ್ನೇ ಕರೆದರು.

ಕರ್ನಾಟಕದಾದ್ಯಂತದಿಂದ ಹಿರಿಯ ವಿದ್ವಾಂಸರೆಲ್ಲ ಬಂದು ನೆರೆದಿದ್ದ ಆ ವಿದ್ವತ್ ಸಭೆಯಲ್ಲಿ ಈ ಪುಟ್ಟ ಯತಿ ನೀಡಿದ ಪುಟ್ಟ ಭಾಷಣಕ್ಕೆ ಇಡಿಯ ಸಭೆಯೇ ತಲೆದೂಗಿತು. ಜತೆಗೆ ಅವರು ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ಒಂದು ಪದ್ಯವನ್ನೂ ರಚಿಸಿ ಪಠಿಸಿದ್ದು ಎಲ್ಲರನ್ನೂ ಬೆರಗುಗೊಳಿಸಿತು.

ಹೀಗೆ ಬೆಸೆದ ಬಾಂಧವ್ಯ ಬೆಳೆದು ಪೇಜಾವರ ಶ್ರೀಪಾದರು ವಿದ್ಯಾಮಾನ್ಯತೀರ್ಥರಲ್ಲಿಯೇ ವ್ಯಾಸಂಗಕ್ಕೆ ನಿಂತರು. ಭಂಡಾರಕೇರಿಯ ಗುರುಕುಲವಾಸ ಅವರ ಏಕಾಂತ ಚಿಂತನೆಗೆ, ಆಳವಾದ ಅಧ್ಯಯನಕ್ಕೆ ಉತ್ತಮವಾದ ವಾತಾವರಣವನ್ನು ಒದಗಿಸಿತು. ಸತ್ಯಧ್ಯಾನತೀರ್ಥರಲ್ಲಿ ಸಮಗ್ರ ಅಧ್ಯಯನ ನಡೆಸಿದ, ಮಾಧ್ವ ವಿದ್ವಾಂಸರಲ್ಲಿ ಅಗ್ರಮಾನ್ಯ ಸ್ಥಾನಪಡೆದ ವಿದ್ಯಾಮಾನ್ಯ ತೀರ್ಥರ ಮಾರ್ಗದರ್ಶನದಲ್ಲಿ ಪೇಜಾವರ ಶ್ರೀಪಾದರ ಅಧ್ಯಯನ ಅಖಂಡವಾಗಿ ನಡೆಯಿತು.

ಎಂಟು ವರ್ಷಗಳ ಅವಿಚ್ಛಿನ್ನ ಅಧ್ಯಯನ, ಮಾಧ್ವಸಿದ್ಧಾಂತದ ಮೇರುಕೃತಿ ನ್ಯಾಯಸುಧಾವನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿದ್ದಾಯಿತು. ಉಡುಪಿಯ ಮಠದಲ್ಲೇ ಅದ್ದೂರಿಯ ಸುಧಾಮಂಗಲ.

ಅಷ್ಟರಲ್ಲಿ ಪೇಜಾವರ ಶ್ರೀಪಾದರು ಯೌವನದ ಹೊಸ್ತಿಲಲ್ಲಿ ಕಾಲಿರಿಸಿದ್ದರು. ಪರ್ಯಾಯವೂ ಸಮೀಪಿಸಿತ್ತು. ಅದಕ್ಕೆ ಪೂರ್ವಭಾವಿಯಾಗಿ ಮೊದಲು ಕರ್ನಾಟಕದ ಎಲ್ಲೆಡೆ ಸಂಚಾರ. ಈ ಅವಧಿಯಲ್ಲೇ ಉತ್ತರಾದಿ ಮಠದ ಶ್ರೀ ಸತ್ಯಪ್ರಮೋದತೀರ್ಥರು ಮತ್ತು ವ್ಯಾಸರಾಜ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥರೊಡನೆ ಭೇಟಿ, ಶಾಸ್ತ್ರಾರ್ಥ ಗೋಷ್ಠಿ. ಮಹತ್ತ್ವದ ವಿಚಾರವಿನಿಮಯಗಳು ನಡೆದವು.

ಶ್ರೀಪಾದರಿಗೆ ೨೦ರ ಹರೆಯ. ಬೆಂಗಳೂರು-ಮೈಸೂರಿನ ಸುತ್ತಮುತ್ತ ಸಂಚಾರ ನಡೆದಿತ್ತು. ಈ ಸಂಚಾರದ ಸಂದರ್ಭದಲ್ಲಿ ನಂಜನಗೂಡಿನಲ್ಲಿ ಆಗಮತ್ರಯ ಸಮ್ಮೇಳನ ನಡೆಯಿತು (೧೯೫೧). ಅದರ ಅಧ್ಯಕ್ಷತೆಯನ್ನು ವಹಿಸಬೇಕಾಗಿದ್ದ ವಿದ್ವಾಂಸರು ಕೊನೆಯ ಕ್ಷಣದಲ್ಲಿ ಆಕಸ್ಮಿಕವಾಗಿ ಬರುವುದು ಅಸಾಧ್ಯವಾಯಿತು. ಇದರಿಂದ ಕಂಗೆಟ್ಟ ಸಮ್ಮೇಳನದ ಸಂಯೋಜಕರು ಜನಾಭಿಪ್ರಾಯವನ್ನು ಗಮನಿಸಿ ಸಮ್ಮೇಳನದ ಅಧ್ಯಕ್ಷತೆ ವಹಿಸುವಂತೆ ಪೇಜಾವರ ಶ್ರೀಪಾದರನ್ನು ಪ್ರಾರ್ಥಿಸಿಕೊಂಡರು. ಈ ಸಮ್ಮೇಳನದಲ್ಲಿ ಆಗಣ ಮೈಸೂರು ಮಹಾರಾಜರಾಗಿದ್ದ ದಿ। ಜಯಚಾಮರಾಜೇಂದ್ರ ಒಡೆಯರೂ ಉಪಸ್ಥಿತರಿದ್ದರು.

ಅಂದು ಶ್ರೀಪಾದರು ಅಧ್ಯಕ್ಷಪೀಠದಿಂದ ಮಾತನಾಡುತ್ತ 'ರಾಜಸತ್ತೆಯೂ ಗುರುಪೀಠಗಳೂ ಜತೆಯಾಗಿ ಧಾರ್ಮಿಕ ಜಗತ್ತಿನಲ್ಲಿ ಹೊಸ ಜಾಗೃತಿ ನಿರ್ಮಾಣವಾಗಲಿ' ಎಂದು ಕರೆಯಿತ್ತರು. ಈ ವಿದ್ವತ್‌ಪೂರ್ಣ ಭಾಷಣದಿಂದ ಇಡಿಯ ಸಭೆ ಪ್ರಭಾವಿತವಾಯಿತು. ಸಭೆಯಲ್ಲಿ ಉಪಸ್ಥಿತರಿದ್ದ ಮಹಾರಾಜರು ಶ್ರೀಪಾದರನ್ನು ಅರಮನೆಗೆ ಆಹ್ವಾನಿಸಿದರು. ಶ್ರೀಪಾದರು ಆಹ್ವಾನವನ್ನೊಪ್ಪಿ ಅರಮನೆಗೆ ಭೇಟಿಯಿಟ್ಟು ರಾಜದಂಪತಿಗಳನ್ನು ಹರಸಿಬಂದರು.

೧೯೫೨ನೆಯ ಜನವರಿ ೧೮ರಂದು ಮೊದಲ ಪರ್ಯಾಯ ಪೀಠಾರೋಹಣ. ಅನ್ನದಾನ, ಜ್ಞಾನದಾನ ಎಲ್ಲದರಲ್ಲೂ ಈ ಪರ್ಯಾಯ ಅಭೂತಪೂರ್ವ ಖ್ಯಾತಿಯನ್ನು ಗಳಿಸಿತು. ದೇಶದಾದ್ಯಂತ ಭಕ್ತರು, ಭಾವುಕರು, ವಿದ್ವಾಂಸರು, ಕಲಾವಿದರು ಉಡುಪಿಗೆ ಸಂದರ್ಶನವಿತ್ತರು.

ಈ ಪರ್ಯಾಯದ ಅವಧಿಯಲ್ಲೇ ಶ್ರೀಪಾದರು ವಿದ್ಯಾರ್ಥಿಗಳಿಗೆ ಮೊದಲ ಬಾರಿಗೆ ಸುಧಾ ಪ್ರವಚನ ನಡೆಸಿ ಶ್ರೀಕೃಷ್ಣ ಸನ್ನಿಧಿಯಲ್ಲಿ ವಿಜೃಂಭಣೆಯ ಮಂಗಲ ಮಹೋತ್ಸವ ನಡೆಸಿದರು.

ಈ ಪರ್ಯಾಯದ ಕಾಲದಲ್ಲೇ ನಡೆದ ಇನ್ನೊಂದು ಐತಿಹಾಸಿಕ ಕಾರ್ಯಕ್ರಮ ಮಾಧ್ವರೆಲ್ಲರ

ಸಂಘಟನೆಗೆ ನಾಂದಿ ಹಾಡಿದ ಮಾಧ್ವತತ್ತ್ವಜ್ಞಾನ ಸಮ್ಮೇಳನ; ಈ ಸಮ್ಮೇಳನವನ್ನು ಆಗಣ ಮಹಾರಾಜ ದಿ। ಜಯಚಾಮರಾಜ ಒಡೆಯರ್‌ರವರೇ ಉದ್ಘಾಟಿಸಿದರು (೪-೧-೧೯೫೩). ಇಲ್ಲೇ ಅಖಿಲ ಭಾರತ ಮಾಧ್ವಮಹಾಮಂಡಲ ಸ್ಥಾಪನೆಗೊಂಡಿತು. ಅಂದಿನಿಂದ ಇಂದಿನ ತನಕವೂ ಹೆಚ್ಚು ಹೆಚ್ಚು ವ್ಯಾಪಕವಾಗಿ ಬೆಳೆಯುತ್ತಿರುವ ಈ ಸಂಸ್ಥೆ ತನ್ನ ಅನೇಕ ಚಟುವಟಿಕೆಗಳ ಜತೆಗೆ ದೇಶದ ನಾನಾ ಕೇಂದ್ರಗಳಲ್ಲಿ ಎರಡು ವರ್ಷಗಳಿಗೊಮ್ಮೆ ತಪ್ಪದೆ ಮಾಧ್ವತತ್ತ್ವಜ್ಞಾನ ಸಮ್ಮೇಳನವನ್ನು ನಡೆಸುತ್ತಿದೆ. ಮಾಧ್ವ ಜನತೆಯಲ್ಲಿ ಈ ಸಮ್ಮೇಳನ ಒಂದು ಹೊಸ ಸ್ಫೂರ್ತಿಯನ್ನೂ ಚೈತನ್ಯವನ್ನೂ ಚಿಮ್ಮಿಸಿತು.

ಮಾಧ್ವತತ್ತ್ವದ ಪ್ರಸಾರಕ್ಕಾಗಿ 'ತತ್ತ್ವವಾದ' ಪತ್ರಿಕೆ ಪ್ರಾರಂಭವಾಯಿತು. ಹೈದರಾಬಾದಿನ ಮಾಧ್ವ ಜನತೆ ಇದರ ತೆಲುಗು ಆವೃತ್ತಿಯನ್ನು ಪ್ರಕಟಿಸುತ್ತಿದ್ದಾರೆ.

ಪ್ರಾಚೀನ ವಿದ್ಯೆಯನ್ನು ಗುರುಕುಲದ ಮಾದರಿಯಲ್ಲಿ ೧೨ ವರ್ಷಗಳ ಕಾಲ ಹೇಳಿಕೊಡುವ ಸಲುವಾಗಿ ಬೆಂಗಳೂರಿನಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠದ ಸ್ಥಾಪನೆಗೊಂಡಿತು. ಖ್ಯಾತ ವಿದ್ವಾಂಸರಲ್ಲದೆ ಸ್ವತಃ ಶ್ರೀಪಾದರೆ ಇಲ್ಲಿನ ವಿದ್ಯಾರ್ಥಿಗಳಿಗೆ ಉಚ್ಚಗ್ರಂಥಗಳ ಶಿಕ್ಷಣ ನೀಡಿದರು.

ಕಳೆದ ಹತ್ತಾರು ವರ್ಷಗಳಲ್ಲಿ ಕೊಯಮತ್ತೂರು, ಹೈದರಾಬಾದು, ವಿಜಯವಾಡ, ಮದ್ರಾಸು, ಬೆಂಗಳೂರು, ಮೈಸೂರು, ಉಡುಪಿ, ಹುಬ್ಬಳ್ಳಿ , ಕೇರಳದ ಎರ್ನಾಕುಳಂ ಮುಂತಾದ ಕಡೆ ಸಮ್ಮೇಳನಗಳು ಜರುಗಿವೆ.

ಮೊದಲ ಪರ್ಯಾಯವನ್ನು ಮುಗಿಸಿದ ಪೇಜಾವರ ಶ್ರೀಪಾದರು ಕೇರಳದತ್ತ ಪಯಣ ಬೆಳೆಸಿದ್ದಾಗ ಅಲ್ಲಿ ಕೊಚ್ಚಿಯ ಮಹಾರಾಜರ ಜತೆಗೆ ಸಂಸ್ಕೃತದಲ್ಲಿ ನಡೆದ ವಿದ್ವದ್ಗೋಷ್ಠಿ ಒಂದು ಮಹತ್ತ್ವದ ಘಟನೆ. ಸ್ವಯಂ ನ್ಯಾಯಶಾಸ್ತ್ರದಲ್ಲಿ ಹಿರಿಯ ವಿದ್ವಾಂಸರಾದ ಕೊಚ್ಚಿಯ ಮಹಾರಾಜರು ಸ್ವತ: ಶ್ರೀಪಾದರೊಡನೆ ವಾದಮಾಡಿ ಅವರ ವಿದ್ವತ್ತನ್ನು ಕಂಡು ಬೆರಗಾಗಿ ಸಮ್ಮಾನಿಸಿದರು. ಶ್ರೀಪಾದರು ಅರಮನೆಯಲ್ಲಿ ಆತಿಥ್ಯ ಸ್ವೀಕರಿಸಿದಾಗ ರಾಜಮನೆತನದ ಪಂಡಿತ ಮಹಿಳೆಯೊಬ್ಬರು ಭಾಗವತದ ವಿಜಯಧ್ವಜೀಯ ಟೀಕೆಯ ಬಗ್ಗೆ ತನಗಿದ್ದ ಜಿಜ್ಞಾಸೆಗಳನ್ನು ಶ್ರೀಪಾದರ ಮುಂದಿಟ್ಟರು. ಶ್ರೀಪಾದರು ಅದಕ್ಕೆ ಸಮರ್ಪಕವಾಗಿ ಉತ್ತರಿಸಿದಾಗ 'ವಿಜಯಧ್ವಜರನ್ನೇ ಕಂಡಷ್ಟು ಸಂತಸವಾಯಿತು' ಎಂದು ಆಕೆಯು ಶ್ರೀಪಾದರ ಕಾಲಿಗೆರಗಿದರು.

ಈ ಸಂದರ್ಭದಲ್ಲೇ ದಕ್ಷಿಣ ದೇಶದಲ್ಲಿ ಪಾದಯಾತ್ರೆಗೆ ಹೊರಟಿದ್ದ ವಿನೋಬಾಜಿಯ ಜತೆ ಶ್ರೀಪಾದರ ಭೇಟಿ ಮತ್ತು ತಾತ್ತ್ವಿಕ ಚರ್ಚಾವಿನಿಮಯ ಒಂದು ಅವಿಸ್ಮರಣೀಯ ಘಟನೆ.

ಮುಂದೆ ಪುಣೆಯತ್ತ ಪಯಣ. ಅಲ್ಲಿಯೂ ವಿದ್ವದ್‌ಗೋಷ್ಠಿಯಲ್ಲಿ ಶಾಸ್ತ್ರಾರ್ಥ ವಿಚಾರ. ಇವರ ಪಾಂಡಿತ್ಯಕ್ಕೆ ಮನಸೋತ ಪುಣೆಯ ಮಹಾ ಪಂಡಿತರಿಂದ ಸಮ್ಮಾನಪತ್ರ ಸಮರ್ಪಣೆ.

ಅಲ್ಲಿಂದ ಕಾಶಿಗೆ ಪಯಣ. ಸಂಸ್ಕೃತ ಶಾಸ್ತ್ರಾಧ್ಯಯನದ ಕೇಂದ್ರವಾದ ಈ ಪುರಾತನ ನಗರಿಯ ವಿದ್ವಾಂಸರು ಶ್ರೀಪಾದರ ವಿದ್ವತ್ತಿಗೆ ಮಣಿದು ಗೌರವಿಸಿದರು.

ಅಲ್ಲಿಂದ ಹರಿದ್ವಾರದತ್ತ ಪಯಣ. ಅಲ್ಲಿಯೇ ಬ್ರಹ್ಮಸೂತ್ರ ಭಾಷ್ಯ ಪ್ರವಚನ ಪ್ರಾರಂಭಿಸಿ ಮುಂದೆ ಬದರಿಯಲ್ಲಿ ಅದರ ಮಂಗಲಮಾಡಿ ಶ್ರೀನಾರಾಯಣನಿಗೆ ಅರ್ಪಿಸಿದರು (೧೯೫೯).

ದಿಲ್ಲಿ ಮುಂತಾದ ನಗರಗಳಲ್ಲಿ ಸಂಚರಿಸಿ, ಧಾರ್ಮಿಕ ಪ್ರವಚನಗಳನ್ನು ನೀಡಿ, ವಿಶ್ವಕಲ್ಯಾಣ ಯಾಗವನ್ನು ಆಚರಿಸಿ, ಶ್ರೀಪಾದರು ನಡೆಸಿದ ಚಟುವಟಿಕೆ ಅಪಾರ. ಇದನ್ನೆಲ್ಲಾ ಈ ಪುಟ್ಟ ಲೇಖನದಲ್ಲಿ ಸಂಗ್ರಹಿಸುವುದು ಅಸಾಧ್ಯ.

ಪ್ರತಿ ವರ್ಷವೂ ನಾಡಿನ ಬೇರೆ ಬೇರೆ ಕಡೆ ಬೇಸಗೆ ಕಾಲದಲ್ಲಿ ಆಧ್ಯಾತ್ಮ ಶಿಬಿರವನ್ನು ಏರ್ಪಡಿಸುವ ಮೂಲಕ ತರುಣರಲ್ಲಿ ಆಧ್ಯಾತ್ಮ ಜಾಗೃತಿಗಾಗಿಯೂ ಶ್ರೀಪಾದರು ಶ್ರಮಿಸುತ್ತಿದ್ದಾರೆ.

ಪೇಜಾವರ ಶ್ರೀಪಾದರ ಸರ್ವಸಂಗ್ರಾಹಕದ ಸಹೃದಯತೆಯನ್ನು ಗುರುತಿಸಿದ ಶೃಂಗೇರಿ ಶ್ರೀಪಾದರು ಪೇಜಾವರ ಶ್ರೀಪಾದರನ್ನು ತಮ್ಮ ಮಠಕ್ಕೆ ಕರೆಸಿ ಸತ್ಕರಿಸಿದ್ದುಂಟು. ಪೇಜಾವರ ಶ್ರೀಪಾದರ ವಿದ್ಯಾಪೀಠಕ್ಕೆ ಭೇಟಿಯಿತ್ತು ವಿಚಾರವಿನಿಮಯ ನಡೆಸಿದ್ದುಂಟು.

ಬಡ ವಿದ್ಯಾರ್ಥಿಗಳಿಗಾಗಿ ರಾಜ್ಯದ ನಾನಾ ಕಡೆಗಳಲ್ಲಿ ಮಾತ್ರವಲ್ಲದೆ ಮುಂಬಯಿಯಂಥ ನಗರದಲ್ಲಿ ಕೂಡ ವಿದ್ಯಾರ್ಥಿನಿಲಯಗಳನ್ನು ಶ್ರೀಪಾದರು ಕಟ್ಟಿಸಿದ್ದಾರೆ. ಉಡುಪಿಯಲ್ಲಿ ಎರಡನೆಯ ಪರ್ಯಾಯ ಕಾಲದಲ್ಲಿ ೧೯೬೯ರಲ್ಲಿ ನಡೆದ ವಿಶ್ವಹಿಂದೂ ಸಮ್ಮೇಳನವನ್ನು ತಾನು ಅಧ್ವರ್ಯುವಾಗಿ ನಿಂತು ನಡೆಸಿದ್ದಲ್ಲದೆ, ಪ್ರಯಾಗದಲ್ಲಿ ನಡೆದ ವಿಶ್ವಹಿಂದೂ ಸಮ್ಮೇಳನದಲ್ಲೂ ಮುಂಚೂಣಿಯಲ್ಲಿ ನಿಂತು ಹಿಂದೂ ಸಂಘಟನೆಗೆ ಹೊಸ ಸ್ಫೂರ್ತಿ ನೀಡಿದರು.

ಶ್ರೀಪಾದರ ಸಾಮಾಜಿಕ ಕಳಕಳಿ ಬಹುಮುಖಿ. ಉಡುಪಿಯಲ್ಲಿ, ಬೆಂಗಳೂರಿನಲ್ಲಿ ಉಚಿತ ಚಿಕಿತ್ಸಾಲಯಗಳು; ಮಡಿಕೇರಿಯಲ್ಲಿ ವಿಶ್ವಹಿಂದೂ ಪರಿಷತ್ತಿನ ಹಿನ್ನೆಲೆಯಲ್ಲಿ ಅಶ್ವಿನೀ ಆಸ್ಪತ್ರೆ; ಕಲಬುರ್ಗಿಯಲ್ಲಿ ಬರಗಾಲ ತನ್ನ ಕರಾಳಹಸ್ತವನ್ನು ಚಾಚಿದಾಗ ಪಾದಯಾತ್ರೆಯಿಂದ ಧನಸಂಗ್ರಹಿಸಿ, ಬರಗಾಲಪೀಡಿತರಿಗೆ ಅನ್ನ, ವಸ್ತ್ರ ವಿತರಣೆ ; ಆಂಧ್ರದ ಹಂಸಲದೀವಿಯನ್ನು ಬಿರುಗಾಳಿ ಮತ್ತು ಕಡಲಗಾಳಿ ಕಬಳಿಸಿದಾಗ ಅತ್ತ ಧಾವಿಸಿ ಲಕ್ಷಾಂತರ ರೂಪಾಯಿಗಳ ವೆಚ್ಚದಿಂದ ಅಲ್ಲಿ ಹೊಸ ನಿವೇಶನವನ್ನೇ ನಿರ್ಮಿಸಿ, ಮನೆ ಕಳಕೊಂಡವರಿಗೆ ಆಶ್ರಯದಾನ – ಹೀಗೆ ಶ್ರೀಪಾದರ ಸಾಮಾಜಿಕ ಚಟುವಟಿಕೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಹರಿಜನರನ್ನು ಅಸ್ಪೃಶ್ಯರೆಂದು ಕಾಣುವುದರಿಂದ ಹಿಂದೂ ಸಮಾಜಕ್ಕೆ ಆಗುವ ಹಾನಿಯನ್ನು ಗುರುತಿಸಿದ ಮಠಾಧಿಪತಿಗಳಲ್ಲಿ ಶ್ರೀಪಾದರು ಮೊದಲಿಗರಾದರು. ಅವರು ಹರಿಜನ ಕೇರಿಗಳಿಗೆ ತೆರಳಿ ಅವರಿಗೆ ಆಧ್ಯಾತ್ಮ ಸಂದೇಶ ನೀಡಿ ಭರವಸೆ ತುಂಬಿ ಸಂತೈಸಿದರು. ಇದರಿಂದ ಸಾಂಪ್ರದಾಯಿಕ ವರ್ಗ ಶ್ರೀಪಾದರ ಮೇಲೆ ಸಿಡಿದೆದ್ದರೂ ಅವರು ಕಂಗೆಡಲಿಲ್ಲ. ಒಂದಲ್ಲ ಒಂದು ದಿನ ಈ ಮಂದಿಗೂ ವಸ್ತುಸ್ಥಿತಿ ತಿಳಿದೇ ತಿಳಿಯುತ್ತದೆ ಎನ್ನುವ ಅಚಲ ಧೈರ್ಯದಿಂದ ಅವರು ಮುಂದಡಿಯಿಟ್ಟರು. ಈ ಧೀರ ಹೆಜ್ಜೆಯಿಂದ ಧರ್ಮದ ಬಗ್ಗೆ ಆಸಕ್ತಿಯಿಲ್ಲದ, ಸ್ವಾಮಿಜಿಯವರನ್ನು ಸಂಶಯ ದೃಷ್ಟಿಯಿಂದಲೇ ಕಾಣುತ್ತಿದ್ದ ಮಂದಿ ಕೂಡ ಶ್ರೀಪಾದರನ್ನು ಗೌರವಿಸತೊಡಗಿದರು.

ಪಾಜಕಕ್ಷೇತ್ರ ಆಚಾರ್ಯ ಮಧ್ವರ ಜನ್ಮಭೂಮಿ. ಈ ಪ್ರದೇಶ ಈ ತನಕವೂ ಅಲಕ್ಷಿತವಾಗಿ ಉಳಿದಿತ್ತು. ಇದರ ಜೀರ್ಣೋದ್ಧಾರಕ್ಕಾಗಿ ಇತ್ತೀಚೆಗೆ ಒಂದು ಪ್ರತಿಷ್ಠಾನ ಸ್ಥಾಪನೆಗೊಂಡು, ಪೇಜಾವರ ಶ್ರೀಪಾದರು, ಅದಮಾರು ಶ್ರೀಪಾದರು, ಕಾಣಿಯೂರು ಶ್ರೀಪಾದರು ಉಪಾಧ್ಯಕ್ಷರಾಗಿರುವ ಈ ಸಂಸ್ಥೆಗೆ ಪಲಿಮಾರು ಶ್ರೀಪಾದರು ಅಧ್ಯಕ್ಷರಾಗಿದ್ದಾರೆ. ಅದರ ಸಮಗ್ರ ನವೀಕರಣ ಅವರ ಮುಂದಿನ ಕನಸು.

ಮೀನಾಕ್ಷಿಪುರದ ಘಟನೆಯ ಅನಂತರ ಅತ್ತ ಧಾವಿಸಿ ಅಲ್ಲಿನ ಹರಿಜನರನ್ನು ಸಂತೈಸಿ, ಹೆಚ್ಚಿನವರು ಹಿಂದೂಗಳಾಗಿಯೇ ಉಳಿಯುವಂತೆ ಮಾಡಿದರು. ಕರ್ನಾಟಕದಾದ್ಯಂತ ನೂರಾರು ಮಂದಿ ಕ್ರೈಸ್ತಮತಕ್ಕೆ ಸೇರಿದ ಹರಿಜನರು ಪೇಜಾವರ ಶ್ರೀಪಾದರ ಮಾರ್ಗದರ್ಶನದಲ್ಲಿ ಮಾತೃಧರ್ಮಕ್ಕೆ ಮರಳಿದರು. ಅಸ್ಸಾಮಿನಂಥ ಗಡಿನಾಡುಗಳಲ್ಲೂ ಸಂಚರಿಸಿದ ಶ್ರೀಪಾದರು ಅಲ್ಲಿ ಹಿಂದೂ ಧರ್ಮ ಜಾಗೃತವಾಗಿರುವಂತೆ ಪ್ರಯತ್ನಿಸುತ್ತಿದ್ದಾರೆ. ಅಲ್ಲಿನ ಗುಡ್ಡಗಾಡು ನಿವಾಸಿಗಳು ಶ್ರೀಪಾದರನ್ನು ಭೇಟಿಯಾಗಿ 'ನಾವು ಕ್ರಿಶ್ಚಿಯನ್ನರಾಗಿ ಪರಿವರ್ತಿತರಾಗುವುದಿಲ್ಲ. ನಾವು ಗುಡ್ಡಗಾಡು ಜನಾಂಗವಾಗಿಯೇ ಈ ನೆಲದ ಸ್ವಂತಿಕೆಯನ್ನು ಬೆಳೆಸಬಯಸುತ್ತೇವೆ. ವಿದೇಶದ ಅನುಕರಣೆಯಿಂದ ಪರಧರ್ಮಾವಲಂಬಿಗಳಾಗುವುದು ನಮಗೆ ಬೇಕಿಲ್ಲ' ಎಂದು ನಿವೇದಿಸಿಕೊಂಡಿರುವುದು ನಿಜಕ್ಕೂ ಸಂತಸದ ಸಂಗತಿ.

ಅಸ್ಸಾಮಿನಲ್ಲಿ ನಡೆಯುತ್ತಿರುವ ಚಳವಳದ ಮುಖಂಡರೂ ಪೇಜಾವರ ಶ್ರೀಪಾದರನ್ನು

ಭೇಟಿಯಾಗಿ ತಮ್ಮ ಸಮಸ್ಯೆಯನ್ನು ತೋಡಿಕೊಂಡಿದ್ದಾರೆ. ಕೇಂದ್ರ ಸರಕಾರದ ಜತೆಗೆ ಒಂದು ಸೂಕ್ತ ಸಂಧಾನಕ್ಕೆ ಬರುವ ಮಾರ್ಗವನ್ನು ಶ್ರೀಪಾದರು ಅವರಿಗೆ ಸಲಹೆ ಮಾಡಿದ್ದು ಇದರಿಂದ ಅಸ್ಸಾಮಿನ ಉಗ್ರಗಾಮಿಗಳು ಪ್ರಭಾವಿತರಾಗಿದ್ದಾರೆ ಎಂದೂ ತಿಳಿದು ಬಂದಿದೆ.

ನಿಜವಾದ ಪರಿವ್ರಾಜಕನಂತೆ ಸಮಾಜದ ಏಳಿಗೆಗಾಗಿ ಜೋಳಿಗೆ ಹಿಡಿದ ಶ್ರೀಪಾದರು ಸ್ವಂತ ಜೀವನದಲ್ಲಿ ಅತ್ಯಂತ, ನಿಸ್ಪೃಹರು. ನಿರಾಡಂಬರಿಗಳು. ಅದಕ್ಕೆಂದೇ ಅವರ ನಿಸ್ವಾರ್ಥ ಸೇವೆಯ ಕಳಕಳಿಯನ್ನು ಗುರುತಿಸಿಯೇ ಸಮಾಜ ಅವರ ಹಿಂದೆ ನಿಲ್ಲುವ ನಿರ್ಧಾರ ಮಾಡಿದೆ. ಅದರ ಸಂಕೇತವಾಗಿ ಶ್ರೀಪಾದರ ೬೦ರ ಹುಟ್ಟುಹಬ್ಬವನ್ನು ನಾಡಿನಾದ್ಯಂತ ಜನತೆ ಇನ್ನಿಲ್ಲ ಎಂಬ ಸಂಭ್ರಮದಿಂದ ಆಚರಿಸಿದರು.

ಉಡುಪಿ ಶ್ರೀಪಾದರ ಹೊಸ ಪರ್ಯಾಯದ ಸಂಭ್ರಮದ ಸಡಗರಕ್ಕೆ ಅಣಿಯಾಗಿ ನಿಂತಿದೆ.

('ದೀಕ್ಷಾ' ಪೇಜಾವರ ಮಠ, ಉಡುಪಿ – ೧೯೮೪)

●

ಲಕ್ಷ್ಮೀಶ ತೋಳ್ಪಾಡಿ

೨ - ೩

ಕೊಟ್ಟ ಕುದುರೆಯನೇರಿ ಗಡಿದಾಟಿದವರು

ಪ್ರಭುದೇವರ ಒಂದು ವಚನ ಹೀಗೆ ನುಡಿಯುತ್ತದೆ.

''ಕೊಟ್ಟ ಕುದುರೆಯನೇರಲರಿಯದೆ
ಮತ್ತೊಂದು ಕುದುರೆಯ ಬಯಸುವರು ವೀರರೂ ಅಲ್ಲ;
ಧೀರರೂ ಅಲ್ಲ. ಇದು ಕಾರಣ ನೆರೆ
ಮೂರುಲೋಕವೆಲ್ಲವೂ ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ''.

ಅನುಭಾವಿಗಳಿಗೆ ಗಡಿದಾಟುವುದು ಮುಖ್ಯ. ಹಾಗೆಯೇ ಕೊಟ್ಟ ಕುದುರೆಯನ್ನೇರಿಯೇ ಗಡಿದಾಟುವುದು ಮುಖ್ಯ. ಅದನ್ನೇರಿಯೇ ಗಡಿದಾಟುವುದು ಸಾಧ್ಯ ಎಂದವರು ಬಲ್ಲರು. ಅದರಿಂದಾಗದಿದ್ದರೆ ಇನ್ನೊಂದು ಕುದುರೆಯಿಂದ ಸಾಧ್ಯವೆಂದು ಅವರು ನಂಬಲಾರರು. ಈ ಅನುಭಾವಿಗಳಿಗೆ ಕ್ರಾಂತಿಯ ಕಾಣ್ಕೆ ಇದೆ. ಆದರದು ಜನಜನಿತವಾದ ಕ್ರಾಂತಿಯ ಕಾಣ್ಕೆಗಿಂತ ಬೇರೆಯಾದದ್ದು. ಏಕೆಂದರೆ ಅನುಭಾವಿಗಳ ಕಾಣ್ಕೆ ಆಧ್ಯಾತ್ಮಿಕ ಮೂಲವುಳ್ಳದ್ದು.

ಪೂಜ್ಯ ಪೇಜಾವರ ಶ್ರೀಪಾದರನ್ನು ನೆನೆಯುವಾಗ ಈ ಮೇಲಿನ ಪ್ರಭುವಿನ ವಚನಕೂಡ ನೆನಪಿಗೆ ಬರುತ್ತದೆ. ಅವರಿಗೆ ಎದುರಾದ ಸವಾಲು, ಅದನ್ನವರು ಉತ್ತರಿಸಿದ ರೀತಿ, ಮಾಡುತ್ತಿರುವ ಸಾಧನೆಗಳು, ಚೌಕಟ್ಟನ್ನೇ ಮುರಿಯಬೇಕೆನ್ನುವವರಿಗೆ ಚೌಕಟ್ಟನ್ನು ವಿಸ್ತರಿಸುತ್ತ ನಡೆಯುವುದು ಚೌಕಟ್ಟನ್ನು ಮುರಿಯುವ ಒಂದು ರೀತಿ ಎಂದು ಅವರು ಶ್ರುತಪಡಿಸುತ್ತಿರುವುದು; ಇವೆಲ್ಲವನ್ನೂ ಮಠಗಳ, ಬ್ರಾಹ್ಮಣ ಸಮುದಾಯದ ಮತ್ತು ಒಟ್ಟು ಭಾರತದ ಸಾಂಸ್ಕೃತಿಕ ಸಂದರ್ಭದಲ್ಲಿ ಇಟ್ಟುನೋಡಿದಲ್ಲದೆ ಅದರ ಮಹತ್ತ್ವ ತಿಳಿಯುವುದು ಕಷ್ಟ.

ಅವರ ಸನ್ಯಾಸದ ಸಂದರ್ಭವನ್ನೇ ನೋಡಿ.

ಇನ್ನೂ ಎಂಟು ವರ್ಷ ತುಂಬದ (ಜನನ ೨೭-೪-೧೯೩೧ ಮತ್ತು ಸನ್ಯಾಸ ಸ್ವೀಕಾರ ೨-೧೨-೧೯೩೮) ಹುಡುಗನ ಮುಂದೆ ಬಂದು ನಿಂತದ್ದು ಕಠೋರವಾದ ಇಂದ್ರಿಯಸಂಯಮವನ್ನು ಅಪೇಕ್ಷಿಸುವ ಯತ್ಯಾಶ್ರಮ. ಇಲ್ಲಿ ಆಯ್ಕೆಯ ಪ್ರಶ್ನೆಯೇ ಇಲ್ಲ. ಆ ಸ್ವಾತಂತ್ರ್ಯವೇ ಇಲ್ಲ. ''ದತ್ತ ಸ್ವಾತಂತ್ರ್ಯ'' ಕೂಡ ಇಲ್ಲ. ಎಲ್ಲವೂ ಹಿರಿಯರ ಸಂಯೋಜನೆಯಂತೆ ನಡೆದದ್ದು. ಹಿರಿಯರಾದರೂ

ಸ್ವತಂತ್ರರಲ್ಲ. ಸ್ವತಂತ್ರವಿಚಾರಪರರೂ ಅಲ್ಲ. ಬ್ರಾಹ್ಮಣ ಸಮುದಾಯದ ಬಹುತೇಕ ಎಲ್ಲರಂತೆ ವಿಚಿತ್ರವೂ ಸಂಕೀರ್ಣವೂ ಆದ ನಾನಾ ಸೆಳೆತಗಳಿಂದ ಇಬ್ಬಂದಿಯಾದವರು. ಈ ಇಬ್ಬಂದಿತನ ಒಂದು ರೀತಿಯಿಂದ ಎಲ್ಲರಿಗೂ ಅನಿವಾರ್ಯ. ಏಕೆಂದರೆ ಇದು ನಮ್ಮೊಳಗೇ ನಡೆಯುವ ಪ್ರಕೃತಿ ಮತ್ತು ಸಂಸ್ಕೃತಿಗಳ ನಡುವಣ ತಿಕ್ಕಾಟದಲ್ಲೇ ಅಡಗಿದೆ. ಎಲ್ಲ ಸಂಘರ್ಷವೂ ಈ ಮೂಲ ಸಂಘರ್ಷದ ಮುಂದುವರಿಕೆಯೇ ಅಲ್ಲವೆ?

ಬ್ರಾಹ್ಮಣರಿಗಾದರೋ ತಲೆಮಾರುಗಳಿಂದ ಹರಿದುಬಂದ ಧಾರ್ಮಿಕ, ಆಧ್ಯಾತ್ಮಿಕ ಪರಂಪರೆಯ ಬಗೆಗೆ ಸಹಜವಾದ ಗೌರವಾದರಗಳು; ಎಳವೆಯಿಂದಲೇ ಬಿದ್ದ ಧಾರ್ಮಿಕ ಪ್ರಭಾವ, ಅದರ ಜತೆಗೆ ಈ ಪರಂಪರೆಯು ಮಠಗಳ ರೂಪದಲ್ಲಿ ಸಾಂಸ್ಥಿಕವಾದಾಗ ಲೌಕಿಕವೇ ಆಗಿ ಪಡೆದುಕೊಂಡ ಭಯಾನಕವಾದ ಅಧಾರ್ಮಿಕ ತಿರುವುಗಳೂ ಅವರ ತೆರೆದ ಕಣ್ಣಿಗೆ ಕಾಣಿಸುತ್ತಿವೆ. ಇದರೊಡನೆ ಬಡತನ ಬೇರೆ. ಹೆಚ್ಚಾಗಿ ಅರ್ಚಕ ವೃತ್ತಿ, ನೆಮ್ಮದಿವಂತರು ಕಡಮೆ. ಮಠಗಳ ನೆರಳಲ್ಲಿ ನೆಮ್ಮದಿ ಇರಬಹುದಾದರೂ ಆ ನೆಮ್ಮದಿಯನ್ನು ಕದಡುವ ಸನ್ನಿವೇಶಗಳೂ ಅಧಿಕ. ಇವೆಲ್ಲ ಸೇರಿ ಒಳಗಿಂದಲೇ ಗುದುಮುರಿಗೆ ನಡೆಯುತ್ತಿರುವಾಗ ಯಾರು ತಾನೆ ಇಬ್ಬಂದಿಯಲ್ಲ?

ನನ್ನ ಎಳೆವೆಯ ಕೆಲವು ನೆನಪುಗಳನ್ನು ಹೇಳುತ್ತೇನೆ.

ನನ್ನ ಎಳೆವೆಯಲ್ಲಿ ನಮ್ಮ ಮನೆಯಲ್ಲಿ ಪೇಜಾವರ ಶ್ರೀಪಾದರ ಕುರಿತು ಬಹಳ ಮಾತುಗಳು ನಡೆಯುತ್ತಿದ್ದವು. ಶ್ರೀಪಾದರ ಬಗೆಗೆ ಎಲ್ಲರಿಗೂ ಅಭಿಮಾನ. ನಾವು ಪೂರ್ವಾಶ್ರಮ ಸಂಬಂಧಿಗಳಾದುದರಿಂದ ಇದು ಸಹಜ ಕೂಡ. ಶ್ರೀಪಾದರ ಪಾಂಡಿತ್ಯ, ಅನೇಕ ದಿಗ್ಗಜ ಪಂಡಿತರನ್ನು ಇವರು ಕಂಗೆಡಿಸಿದ್ದು, ಜತೆಗೆ ಶ್ರೀಪಾದರ ಸಂಘಟನಾ ಚಾತುರ್ಯ, ಪ್ರಥಮ ಪರ್ಯಾಯ ಕಾಲದಲ್ಲಿ ನಡೆದ ಮೊದಲ ಮಾಧ್ವಸಮಾವೇಶದ ಸವಾಲುಗಳು – ಈ ಬಗೆಗೆಲ್ಲ ಮಾತು ನಡೆಯುತ್ತಿತ್ತು. ಆದರೆ ನಾನು ಗಮನಿಸಿದಂತೆ, ಎಲ್ಲಕ್ಕಿಂತ ಹೆಚ್ಚಾಗಿ ಒಂದು ವಿಶಿಷ್ಟ ಸಂಗತಿಯ ಬಗೆಗೆ ಅಭಿಮಾನದ ಮಹಾಪೂರ ಹರಿಯುತ್ತಿತ್ತು. ಅದೆಂದರೆ ಶ್ರೀಪಾದರು ಅನ್ಯಾದೃಶವೆನ್ನಿಸುವಂತೆ ಸನ್ಯಾಸ ನಿಯಮಗಳನ್ನು ಪಾಲಿಸುತ್ತಿರುವುದರ ಬಗೆಗೆ. ಇದೇಕೆಂದರೆ ಮಠಗಳಲ್ಲಿ ನಡೆಯುತ್ತಿರುವ ವ್ಯವಹಾರಗಳ ಕುರಿತು, ಸ್ವಯಂ ವಿಶ್ವೇಶತೀರ್ಥರು ಸನ್ಯಾಸ ಸ್ವೀಕಾರ ಮಾಡುವಾಗ ಇದ್ದ ಸಂದರ್ಭದ ಕುರಿತು ಹಿರಿಯರೆಲ್ಲ ಬಲ್ಲವರಾಗಿದ್ದರು. ನಮ್ಮ ಅಜ್ಜಿಯವರೊಡನೆ (ಪೇಜಾವರ ಶ್ರೀಪಾದರ ತಂದೆಯವರ ಅಕ್ಕ) ಅವರ ಒಬ್ಬ ಮಗನನ್ನು ಪೇಜಾವರ ಮಠಕ್ಕೆ ಉತ್ತರಾಧಿಕಾರಿಯಾಗಿ ಮಾಡೋಣವೇ ಎಂದಾಗ ಅವರು ಕಟುವಾಗಿ ನಿರಾಕರಿಸಿದರಂತೆ. ''ಭಿಕ್ಷೆ ಬೇಡಿಯಾದರೂ ಹೊಟ್ಟೆಹೊರೆದುಕೊಳ್ಳಬಹುದು; ಮಠಗಳ ಸಹವಾಸ ಬೇಡ'' ಎಂದರಂತೆ. ಇದು ಕಟುವಾಗಿ ಕಂಡರೂ ಆಗ ಪರಿಸ್ಥಿತಿ ಹಾಗೆ ಇತ್ತು ಎಂಬುದೂ ಸತ್ಯವೇ. ಇಂತಹ ವಿಕಟ ಸನ್ನಿವೇಶದಲ್ಲಿ ಪೇಜಾವರ ಶ್ರೀ ಪಾದರು ಯತ್ಯಾಶ್ರಮವನ್ನು ಲೀಲೆಯಿಂದೆಂಬಂತೆ ಸಾಧಿಸಿ; ಉದಾತ್ತತೆಯನ್ನು ಮೆರೆದದ್ದು ಅವರ ಪಾಲಿಗೆ ಮಾತ್ರವಲ್ಲ, ಸಂಬಂಧಿಸಿದ ಎಲ್ಲರ ಪಾಲಿಗೂ ತಮ್ಮ ಇಬ್ಬಂದಿತನದಿಂದ ಬಿಡುಗಡೆ ಎಂಬಂತೆ ಕಂಡರೆ ಅಚ್ಚರಿ ಇಲ್ಲ. ಪೂರ್ವಾಶ್ರಮದ ಮಂದಿಗೆ ಮಾತ್ರ ಅಲ್ಲ; ಇಡಿಯ ಸಮಾಜದ ಪಾಲಿಗೆ ಇದೊಂದು ಸಾಧನೆಯಾಗಿ, ಸಮರ್ಥನೆಯಾಗಿ ಪರಿಣಮಿಸಿತು. ತಮಗೆ ಅರಿವಿದ್ದೋ ಇಲ್ಲದೆಯೋ ಪೇಜಾವರ ಶ್ರೀಪಾದರು ಎಲ್ಲರನ್ನೂ ಗಡಿದಾಟಿಸಿದ್ದರು.

ನನಗೆ ಅನಿಸುತ್ತದೆ: ಪೇಜಾವರ ಶ್ರೀಪಾದರ ಅವಿಶ್ರಾಂತವಾದ ಅನೇಕಾನೇಕ ಚಟುವಟಿಕೆಗಳು ಅವರು ಸನ್ಯಾಸವನ್ನು ನೈಜವಾಗಿ ಒಪ್ಪಿಕೊಂಡುದರ ಸಹಜ; ಉಪಪರಿಣಾಮಗಳು ಎಂದು ತನ್ನ ಮುಂದೆ ಬಂದು ನಿಂತ ಕುದುರೆಯನ್ನು ಹಾರ್ದಿಕವಾಗಿ ಒಪ್ಪಿ ಅಂಗೀಕರಿಸುವುದು ಮೊದಲ ಮುಖ್ಯಸಂಗತಿ. ಆಮೇಲಿನ ಸವಾರಿ ಸಹಜವಾಗಿ ನಡೆಯುವಂಥದು. ಸವಾರನೂ ಕುದುರೆಯೂ ಪರಸ್ಪರ ಒಪ್ಪಿ ನಡೆಯುವ ನಡಿಗೆಯಲ್ಲಿ ಎಂಥ ಸಹಜತೆ ಇರುತ್ತದೆಂದರೆ ಅಲ್ಲಿ ಯಾವುದೇ ಚಡಪಡಿಕೆ (Tension) ಹುಟ್ಟುವುದಿಲ್ಲ.

ಯಾವುದೇ ಅರಕೆ ಇದ್ದಲ್ಲಿ ಚಡಪಡಿಕೆ ಇರುತ್ತದೆ. ಅದನ್ನು ಪೂರೈಸುವವರೆಗೆ ಚಡಪಡಿಕೆಯೇ. ಇಲ್ಲಿ ಅದಿಲ್ಲ. ಈ ಸಹಜತೆ ಪೇಜಾವರ ಶ್ರೀಪಾದರಲ್ಲಿ ಇರುವುದರಿಂದಲೇ ಇಷ್ಟೆಲ್ಲ ಕಾರ್ಯಗಳು ಹೆಚ್ಚಿನ ಆಯಾಸ ಇಲ್ಲದೆ ಅವರಿಂದ ನಡೆಯುತ್ತಿವೆ. ಮಾಧ್ವ ಸಂಘಟನೆಯ ಕೆಲಸದಲ್ಲಿ ಶ್ರೀಪಾದರು ಮೊದಮೊದಲು ಎದುರಿಸಿದ ವಿರೋಧ ಎಷ್ಟಿತ್ತೆಂದರೆ ಅಂತರಂಗದಲ್ಲಿ ಸನ್ಯಾಸಿಯಾಗಿ ನಿರಾಳವಾದವನು ಮಾತ್ರ ಈ ವಿರೋಧವನ್ನು ನಿಭಾಯಿಸಬಹುದಿತ್ತು. ಇತರ ಯಾರೇ ಆದರೂ ಒತ್ತಡಕ್ಕೆ ಕುಸಿದು ಬೀಳುತ್ತಿದ್ದರು. ಒಂದೇ ಒಂದು ಸಂದರ್ಭದಲ್ಲಿ, ಅಪವಾದವೆಂಬಂತೆ, ಶ್ರೀಪಾದರು ಒತ್ತಡಕ್ಕೆ ಒಳಗಾದುದನ್ನು ಕಂಡಿದ್ದೇನೆ. ಅದೆಂದರೆ ವಿಶ್ವಕರ್ಮ ಸಮುದಾಯದ ಸೋದರರಿಗೆ ಪ್ರತ್ಯೇಕ ಪೀಠ ಸ್ಥಾಪನೆಯ ವಿವಾದ ಸಂದರ್ಭದಲ್ಲಿ. ಆಗ ಎಲ್ಲ ಕಡೆಯಿಂದಲೂ ಪೇಜಾವರ ಶ್ರೀಪಾದರ ಮೇಲೆ ಒತ್ತಡ ಕವಿಯುತ್ತಿತ್ತು. ಪತ್ರಿಕೆಗಳಲ್ಲಿ ನಿತ್ಯ ಟೀಕೆಗಳು ಪ್ರಕಟವಾಗುತ್ತಿದ್ದವು . ಮಾತುಕೊಟ್ಟವರೇ ಮಾತು ಬದಲಿಸಿದ ಸಂದರ್ಭಗಳು ನಡೆದವು. ಈ ಒತ್ತಡಗಳಿಗೆ ಶ್ರೀಪಾದರು ಕುಸಿಯುವಂತಾಯಿತು. ಆದರೆ ಕೆಲದಿನಗಳಲ್ಲೇ ಅವರು ಚೇತರಿಸಿಕೊಂಡರು. ಅಚ್ಚರಿ ಎಂದರೆ ಶ್ರೀಪಾದರನ್ನು ಸದಾ ಟೀಕೆ ಮಾಡುತ್ತಿದ್ದ ಕೆಲವರು, ಶ್ರೀಪಾದರು ಮಾನಸಿಕವಾಗಿ ಕುಸಿದಾಗ, ತಮ್ಮ ಸ್ತಿಮಿತವನ್ನೇ ಕಳೆದುಕೊಂಡು ದುಃಖಾಕ್ರಾಂತರಾದುದನ್ನು ಕಂಡಿದ್ದೇನೆ. ಇದು ಶ್ರೀಪಾದರ ನಿಜವಾದ ಮಹತಿಯನ್ನು ತೋರಿಸುತ್ತದೆ.

ಈಗ ಎಲ್ಲವೂ ಒಂದು ವಿಸ್ಮಯವಾಗಿ ಕಾಣುತ್ತಿದೆ.

ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಪೇಜಾವರ ಶ್ರೀಪಾದರು ಪೂಜ್ಯ ವಿದ್ಯಾಮಾನ್ಯತೀರ್ಥರಲ್ಲಿ ಪ್ರೌಢ ವ್ಯಾಸಂಗಮಾಡಬೇಕೆಂದು ಅಪೇಕ್ಷಿಸಿದ್ದು, ವಿದ್ಯಾಮಾನ್ಯರ ಗಾಢ ಪ್ರಭಾವಕ್ಕೆ ಒಳಗಾದದ್ದು, ಒಳಗಾಗಿಯೂ ಅವರಿಂದ ಭಿನ್ನವಾಗಿ ವಿಚಾರಮಾಡಬಲ್ಲ ಸ್ವಾತಂತ್ರ್ಯವನ್ನು ಉಳಿಸಿಕೊಂಡದ್ದು; ಇದು ತಮ್ಮನ್ನು ಸಾಮಾಜಿಕವಾಗಿ ತೊಡಗಿಸಿಕೊಂಡ ಮೇಲೆ ಬಂದ ಲೋಕಾನುಭವದಿಂದ ಮಾತ್ರವಲ್ಲ, ಅದಕ್ಕಿಂತ ಮುಂಚಿತವಾಗಿಯೇ ವಿಶ್ವೇಶತೀರ್ಥರು ವಿದ್ಯಾಮಾನ್ಯರಿಂದ ಭಿನ್ನವಾಗಿ ಯೋಚಿಸುತ್ತಿದ್ದರು. ಹರಿಜನರ ಬಗೆಗಿನ ಅವರ ಕಾಳಜಿ ವಿದ್ಯಾಮಾನ್ಯರಲ್ಲಿ ಅಧ್ಯಯನ ನಡೆಯಿಸುತ್ತಿರುವಾಗಲೇ ವ್ಯಕ್ತವಾಗುತ್ತಿತ್ತು. ಭಂಡಾರಕೇರಿಯಲ್ಲಿರುವ ಹರಿಜನರ ವಸತಿಗಳನ್ನು ತೋರಿಸಿ ವಿದ್ಯಾಮಾನ್ಯರು ಪೇಜಾವರ ಶ್ರೀಪಾದರೊಡನೆ ಹೇಳುತ್ತಿದ್ದರಂತೆ, ''ನೋಡಿ; ನಿಮ್ಮವರ ಮನೆಗಳು.'' ಆಗಿನ್ನೂ ಪೇಜಾವರ ಶ್ರೀಪಾದರಿಗೆ ಹದಿಹರೆಯ.

ಇಲ್ಲಿಂದ ಗಾಂಧೀಜಿ ಬಗೆಗೆ ಒಲವು ಬೆಳೆಯುವುದು ಸತಾರ್ಕಿಕವಾಗಿತ್ತು. ಇಲ್ಲಿಯ ಜಟಿಲತೆಯನ್ನು ನೋಡಿ ಗಾಂಧೀಜಿಯವರ ಅನೇಕ ಕಾರ್ಯಗಳು ಸನಾತನಿಗಳಿಗೆ ಸಿಟ್ಟುತರಿಸುತ್ತಿದ್ದವು. ಹರಿಜನರ ದೇವಾಲಯ ಪ್ರವೇಶ, ''ಜಾತಿ''ಯನ್ನು ಮೀರಿ ವಿವಾಹ ಇತ್ಯಾದಿ. ಗಾಂಧೀಜಿಗಿಂತ ಇಂಗ್ಲೀಷರೇ ವಾಸಿ ಎಂದು ಸನಾತನಿಗಳು ತಿಳಿದುಕೊಂಡಿದ್ದರೂ ಅಚ್ಚರಿ ಇಲ್ಲ. ಇನ್ನೊಂದೇ ಕಾರಣಕ್ಕೆ ಬ್ರಾಹ್ಮಣೇತರ ಜಾತಿಗಳೂ ಇಂಗ್ಲೀಷರೇ ತಮ್ಮನ್ನು ದಡಕಾಣಿಸುವವರು ಎಂದು ನೆಚ್ಚಿಕೊಳ್ಳುತ್ತಿದ್ದರು. ಜ್ಯೋತಿಬಾ ಫುಲೆಯವರಂಥ ರಾಷ್ಟ್ರಭಕ್ತರೂ, ಕೆಳಜಾತಿಪರ ಹೋರಾಟಗಾರರೂ ೧೮೫೭ರ ಮೊದಲ ಸ್ವಾತಂತ್ರ್ಯ ಹೋರಾಟದಲ್ಲಿ ಇಂಗ್ಲೀಷರ ವಿರೋಧವಾಗಿ ನಿಲುವು ಪ್ರಕಟಿಸಲಿಲ್ಲ. ಹಾಗೆಂದು ಇಂಗ್ಲಿಷ್‌ಪರವೂ ಇರಲಿಲ್ಲ. ತಟಸ್ಥವಾಗುಳಿದರು. ಇವೆಲ್ಲ ಸಂಕೀರ್ಣವಾದ ಐತಿಹಾಸಿಕ; ಸಾಮಾಜಿಕ ''ಗತಿ''ಗಳು. ಇದರ ನಡುವೆ ಏಕಕಾಲಕ್ಕೆ ಇಂಗ್ಲೀಷರನ್ನೂ, ಸನಾತನಿಗಳನ್ನೂ ಎದುರುಹಾಕಿಕೊಂಡು, ಮುಖ್ಯವಾಗಿ ಆಧುನಿಕ ನಾಗರಿಕತೆಯ ವಿರುದ್ಧ ಆಧ್ಯಾತ್ಮಿಕತೆಯನ್ನು ಮುಖಾಮುಖಿಯಾಗಿಸಿ ಗಾಂಧೀಜಿ ಹೋರಾಡುತ್ತಿದ್ದರು. ಗಾಂಧೀಹೋರಾಟದ ಈ ಮರ್ಮ ಹಿಂದೂ, ಮುಸ್ಲಿಂ ಸನಾತನಿಗಳಿಗಾಗಲಿ, ಆಧುನಿಕತೆಯಿಂದಲೇ ಮೋಕ್ಷವೆನ್ನುವ ಕೆಳಜಾತಿ ಹೋರಾಟಗಾರರಿಗಾಗಲೀ ಅರ್ಥವಾಗುವುದು ಅಷ್ಟರಲ್ಲೇ

ಇದೆ. ಈ ಅರ್ಥವಾಗದಿರುವಿಕೆಯಲ್ಲಿಯೂ ಒಂದು 'ಜಾಣತನ' ಇರಬಹುದು. ಪೇಜಾವರ ಶ್ರೀಪಾದರು ಈ ಮರ್ಮವನ್ನು ಹಿಡಿದದ್ದೇ ಒಂದು ವಿಸ್ಮಯ.

ಅರ್ಥಪೂರ್ಣವಾದ ಒಂದು ಘಟನೆ ಕಾಣಿಸಬೇಕು.

ಜನವರಿ ೩೧ನೇ ದಿನಾಂಕ ೧೯೪೮. ವಿದ್ಯಾಮಾನ್ಯರೊಂದಿಗೆ ಪೇಜಾವರ ಶ್ರೀಪಾದರು ಮಧ್ಯಾಹ್ನದ 'ಭಿಕ್ಷೆ'ಮಾಡುತ್ತಿದ್ದರು. ನಿತ್ಯದಂತೆ ಪಂಡಿತರು, ವಿದ್ಯಾರ್ಥಿಗಳು, ಇತರ ಗಣ್ಯರೂ ಜತೆಗೆ ಭೋಜನ ಮಾಡುತ್ತಿದ್ದರು. ಆಗ ತಲಪಿತು ಹಿಂದಿನ ದಿನ ಸಂಜೆ ಪ್ರಾರ್ಥನೆಯ ವೇಳೆಯಲ್ಲಿ ಗಾಂಧೀಜಿಯವರ ಹತ್ಯೆಯಾದ ಸುದ್ದಿ. ಈ ಸುದ್ದಿಯಿಂದ ಸಂತುಷ್ಟಗೊಂಡ ಪಂಡಿತರೂ ಅಲ್ಲಿದ್ದರು. ಹೀಗಾಗಬಾರದಿತ್ತು ಎಂದು ಪರಿತಪಿಸುವವರೂ ಇದ್ದರು. ಪೇಜಾವರ ಶ್ರೀಪಾದರು ಮಾತ್ರ ತೀವ್ರ ಕಳವಳಗೊಂಡರು. ಅವರಿಗೆ ಮುಂದೆ ಉಣ್ಣುವುದಾಗಲಿಲ್ಲ. ಏನೋ ಖಿನ್ನತೆ ಮನಸ್ಸಿಗೆ ಕವಿಯಿತು. ಹಾಗೆಂದು ಊಟಬಿಟ್ಟು ಎದ್ದು ಹೋಗಲಾಗಲಿಲ್ಲ. ಸುಮ್ಮನೆ ಉಣ್ಣುತ್ತಿರುವಂತೆ ನಟಿಸಿದರು. ಎದ್ದು ಹೋಗುತ್ತಿದ್ದರೆ ಎಲ್ಲರ ಊಟ ನಿಲ್ಲುತ್ತಿತ್ತು. ಆಮೇಲೆ ವಾದವಿವಾದಗಳೂ ನಡೆಯಬಹುದಿತ್ತು. ಇವಾವುದೂ ಶ್ರೀಪಾದರಿಗೆ ಬೇಕಿರಲಿಲ್ಲ. ಅವರಿದ್ದ ಸನ್ನಿವೇಶ ಮತ್ತವರ ವ್ಯಕ್ತಿತ್ವ- ಇವೆರಡನ್ನೂ ಈ ಘಟನೆ ಧ್ವನಿಸುತ್ತದೆ.

ಆಗ ಪೇಜಾವರ ಶ್ರೀಪಾದರಿಗೆ ಹದಿನೇಳರ ಹರಯ.

ಗಾಂಧೀಜಿಯವರ ಸಿದ್ಧಾಂತಗಳನ್ನು ಪರಂಪರೆಯೊಂದಿಗೆ ಬೆಸೆಯುವುದು ಪೇಜಾವರ ಶ್ರೀಪಾದರಿಗೆ ಅನಿವಾರ್ಯವಾಗಿತ್ತು. ಅಚ್ಚರಿ ಎಂದರೆ ಅದಕ್ಕವರು ತಿಣುಕಾಡ ಬೇಕಾಗಲಿಲ್ಲ. ಆಚಾರ್ಯಮಧ್ವರು 'ಕರ್ಮ'ಕ್ಕೆ ವ್ಯಾಖ್ಯಾನ ಮಾಡುತ್ತ ''ನಾನಾ ಜನಸ್ಯ ಶುಶ್ರೂಷಾ ಕರ್ತವ್ಯಾ ಕರ್ಮಾಖ್ಯಾ ಕರವನ್ಮಿತೇಃ'' ಎಂದರು. 'ಜನಸೇವೆ'ಗೆ ಕರ್ಮ ಎಂದು ಹೆಸರು. ಇದು ರಾಜನಿಗೆ ತೆರಿಗೆ ಪಾವತಿಸುವಂತೆ ಪ್ರತಿಯೊಬ್ಬನ ಕರ್ತವ್ಯ- ಇದು ಈ ಮಾತಿನ ಅರ್ಥ. ಪಾರಂಪರಿಕ ವರ್ಣಾಶ್ರಮದ ಚೌಕಟ್ಟಿನಲ್ಲಿ 'ಸೇವೆ' ಅಥವಾ 'ಶುಶ್ರೂಷೆ' ಎನ್ನುವುದು 'ಶೂದ್ರ'ನ ಕರ್ತವ್ಯ ಎಂದು ನೆನೆದೆವಾದರೆ ಆಚಾರ್ಯರ ಈ ಮಾತಿನ ಗಂಭೀರತೆ ಮತ್ತು ಸಂಸ್ಕೃತಿಯನ್ನು ಉಜ್ಜೀವಿಸುವ ಶಕ್ತಿ ಅರ್ಥವಾದೀತು. ತಾತ್ಪರ್ಯವೇನೆಂದರೆ; ನಾಲ್ಕು ವರ್ಣಗಳನ್ನೂ ತನ್ನಲ್ಲಿಯೇ ಅನುಭವಿಸಬಲ್ಲವನು ಮಾತ್ರ ಗಡಿದಾಟಬಲ್ಲನು. ಹೀಗೆ ಅನುಭವಿಸಬೇಕಾದರೆ ಆಧ್ಯಾತ್ಮಿಕದೃಷ್ಟಿ ಸಹಜವಾಗಿ ಇರಬೇಕು. ಕೇವಲ ಲೌಕಿಕ ದೃಷ್ಟಿಗೆ ಇದು ಸಾಧ್ಯವಲ್ಲ. ಜಾಗತಿಕ ವೈಶ್ಯರಾದ ಇಂಗ್ಲಿಷ್ ಮಂದಿ ತಮ್ಮ ವಾಣಿಜ್ಯ ವ್ಯವಹಾರಗಳ ಮೂಲಕವೇ ಸಾಮ್ರಾಜ್ಯ ಕಟ್ಟಿ ಕ್ಷತ್ರಿಯರಾದಾಗ ಒಂದು ಆಧುನಿಕ combination ಸಮೀಕರಣ ರೂಪಗೊಂಡಿತು. ವೈಶ್ಯ +ಕ್ಷತ್ರಿಯ ಸಮೀಕರಣ ಇದು. ಇಲ್ಲಿ ಮಾರುಕಟ್ಟೆಯೇ ಯುದ್ಧಕ್ಷೇತ್ರ. ಕುರುಕ್ಷೇತ್ರ. ನಾನಾರೂಪಗಳಲ್ಲಿ ಇದೇ ಸಮೀಕರಣವೇ ಈಗಲೂ ಮುಂದುವರೆಯುತ್ತಿದೆ. ಇದಕ್ಕೆ ಪ್ರತಿಯಾಗಿ ಆಧ್ಯಾತ್ಮಿಕಪರಂಪರೆಯ ಸೂತ್ರಗಳನ್ನು ಹಿಡಿದೇ ಗಾಂಧೀಜಿ ರೂಪಿಸಿದ ಸಮೀಕರಣವೆಂದರೆ ಜನಸೇವೆ ಮತ್ತು ಸಂಯಮ; ತ್ಯಾಗಗಳ ಸಮೀಕರಣ. ಇದನ್ನು ಶೂದ್ರ+ ಬ್ರಾಹ್ಮಣ ಸಮೀಕರಣ ಎನ್ನಬಹುದು. ಇದನ್ನು ಪ್ರತಿ ಸಮೀಕರಣ ಎನ್ನುವುದಕ್ಕಿಂತ ಪರ್ಯಾಯ ಸಮೀಕರಣ ಎನ್ನುವುದು ಉಚಿತ. ಏಕೆಂದರೆ ಈ ಸಮೀಕರಣ ನಾಗರಿಕತೆಯನ್ನು ಇನ್ನೊಂದು ದೃಷ್ಟಿಯಿಂದ ನೋಡಲು ಒತ್ತಾಯಿಸುತ್ತದೆ. 'ಭಕ್ತಿ'ಯೇ ಬಿಡುಗಡೆಗೆ ದಾರಿ ಎಂದು ಒತ್ತಿ ಹೇಳುವ ಆನಂದತೀರ್ಥರ ಪರಂಪರೆಯ ಪೇಜಾವರ ಶ್ರೀಪಾದರಿಗೆ ಈ ಪರ್ಯಾಯ ಸಮೀಕರಣವೇ ಹೃದಯಂಗಮ. ಇದು ನನಗೆ ಖಚಿತವಾಗಿದೆ.

ಇದನ್ನು ಸಾಧಿಸುವುದು ಸುಲಭವಲ್ಲ ಎನ್ನುವ ಅರಿವೂ ಶ್ರೀಪಾದರಿಗಿದೆ. ಅವರು ಮಠದ ಕಟ್ಟುಪಾಡುಗಳು; ಮಾಧ್ವಸಂಘಟನೆ ಮತ್ತು ಬ್ರಾಹ್ಮಣ ವಲಯಗಳನ್ನು ಬಿಟ್ಟುಕೊಡದೇ ಈ

ಸಮೀಕರಣವನ್ನು ಸಾಧಿಸಬೇಕಾಗಿದೆ. ೭೦ರ ದಶಕದಲ್ಲಿ ಶ್ರೀಪಾದರು ಹರಿಜನಕೇರಿಗೆ ಭೇಟಿಕೊಟ್ಟಾಗ ಕೆಲವು ವಲಯಗಳಲ್ಲಿ ಎದ್ದ ಕೋಲಾಹಲ ನನಗಿನ್ನೂ ನೆನಪಿದೆ. ಬೆಂಗಳೂರಿನ ವಿದ್ಯಾಪೀಠಕ್ಕೆ ಚೇಮನಹಳ್ಳಿ ರಘುನಾಥಾಚಾರ್ಯರೆಂಬ ಪಂಡಿತರು ಈ ವಿಷಯದಲ್ಲಿ ಕುರಿತಾಗಿ ವಾದ ಮಾಡುವುದಕ್ಕಾಗಿ ಕೆಲವು ಗ್ರಂಥಗಳನ್ನು ಹೊತ್ತುಕೊಂಡೇ ಬಂದಿದ್ದರು. ಅವರು ಶ್ರೀಪಾದರು ಮಾಡುತ್ತಿರುವ ಕೆಲಸ 'ಅಶಾಸ್ತ್ರೀಯ' ಎಂದು ಮನಗಾಣಿಸಲು ಬಂದವರಾಗಿದ್ದರು. ಕೋಣೆಯ ಹೊರಗೆ ಕುಳಿತು ಈ ವಾದಗಳನ್ನು ಅರ್ಧಾರ್ಧವಾಗಿ ಆಲಿಸುತ್ತಿದ್ದ ನನಗೆ, ಶ್ರೀಪಾದರ ಸಮರ್ಥನೆಯ ಮುಂದೆ ಆಚಾರ್ಯರು ನಿರುತ್ತರರಾದುದಕ್ಕಿಂತ ಹೆಚ್ಚಾಗಿ ಆಚಾರ್ಯರ ಕೋಪವೂ ತಣಿದುದು ಕುತೂಹಲಕಾರಿಯಾಗಿತ್ತು. ಅದು ಪೂರ್ತಿ ತಣಿದಿದೆಯೋ ಇಲ್ಲವೋ ಗೊತ್ತಿಲ್ಲ. ಇದು ಶ್ರೀಪಾದರ ದಾರಿ. ಇದನ್ನು ಸಮನ್ವಯದ ದಾರಿ ಎಂದರೆ ಸರಿಯಾದೀತೋ ? ಎಲ್ಲೆಡೆ ಇರುವ ಅತಿವಾದಿಗಳಿಗೆ ಇದು ಅತೃಪ್ತಿಮೂಡಿಸುವ ದಾರಿ ಮಾತ್ರ ಹೌದು. ಅದರಲ್ಲೂ ವೈಚಾರಿಕ ರಂಗದಲ್ಲಿ ಗೆರಿಲ್ಲಾಮಾದರಿಯ ದಾಳಿ ನಡೆಸುವವರಿಗೆ ಇಂತಹ ಸಮನ್ವಯಕಾರರು ಮೂಲಭೂತವಾಗಿ ತಮ್ಮ ಶತ್ರುಗಳ ಪರವೆಂದೇ ಕಾಣಬಹುದು. ಆದರೆ ದೇಶದಲ್ಲಿ ಪ್ರಜಾತಂತ್ರವಿರುವುದೂ, ಬಹುಸಂಖ್ಯಾಕರಾಗಿರುವ ಹಿಂದುಗಳ ಪರಂಪರೆ ಮೂಲತಃ ನಾನಾ ಸ್ವರಗಳ ಮೇಳವಾಗಿರುವುದೂ ನಮ್ಮ ಪುಣ್ಯವೆಂದೇ ಹೇಳಬೇಕು. ಇಲ್ಲಿ ತನ್ನ ನಂಬಿಕೆಯನ್ನು ಬಿಡದೆ ಇನ್ನೊಬ್ಬನ ಜತೆ ಹೊಂದಿಕೆ ಸಹಜವಾಗಿದೆ. ಅಕೃತಕವಾಗಿದೆ. ಯಾವುದೇ ಕ್ರಾಂತಿಕೂಡ ಒಂದು ಮಿತಿಗಿಂತ ಹೆಚ್ಚು ಬಲಾತ್ಕಾರಗೊಳ್ಳುವಂತಿಲ್ಲ.

ಇಲ್ಲಿನ ಕೊಡುಕೊಳೆಗಳನ್ನು ನೋಡಿ. ''ಸೇವೆ''; ''ಶುಶ್ರೂಷೆ''ಗಳ ವಿಷಯ ಹಿಂದೆಯೇ ಪ್ರಸ್ತಾವಿಸಿದ್ದೇನೆ. ಚಾರ್ವಾಕ ಕೂಡ ಪೂರ್ತಿ ನಿರಾಕೃತನಾಗಿಲ್ಲ. ''ಕಾಮ ಏವ ಪುರುಷಾರ್ಥಃ'' ಎನ್ನುವುದು ಚಾರ್ವಾಕನ ಮತ. ಬಯಕೆಗಳು ಮತ್ತು ಅದರ ಈಡೇರಿಕೆ, ಈ ಪ್ರಕ್ರಿಯೆಗಿಂತ ಹೆಚ್ಚಿನ ಅರ್ಥ ಬದುಕಿಗೆ ಇಲ್ಲ ಎಂಬುದು ಇದರರ್ಥ. ಭಗವದ್ಗೀತೆ ಇದೇ ಮಾತನ್ನು ಇನ್ನೊಂದು ರೀತಿಯಲ್ಲಿ, ಪರಿಷ್ಕರಿಸಿ ಹೇಳುತ್ತದೆ. ''ಧರ್ಮಾವಿರುದ್ಧೋಭೂತೇಷು ಕಾಮೋಽಸ್ಮಿ ಭರತವರ್ಷಭ'' ಇದು ಕೃಷ್ಣನ ಮಾತು. ''ಧರ್ಮ''ವನ್ನು ಅತಿಕ್ರಮಿಸದ ''ಕಾಮ''ವೇ ನನ್ನ ನೆಲೆಯಾಗಿದೆ. ಚಾರ್ವಾಕ ಇಲ್ಲಿ ಧರ್ಮದ ಚೌಕಟ್ಟಿನಲ್ಲಿ ನಿಂತಿದ್ದಾನೆ ಅಷ್ಟೆ.

ಗಾಂಧೀಜಿಯವರ ಜತೆ ಬಹುಮುಖ್ಯ ಪ್ರಶ್ನೆಗಳನ್ನೆತ್ತಿಕೊಂಡು ಸೆಣಸಾಡಿದ ಡಾ। ಅಂಬೇಡ್ಕರ್ ಕೊನೆಗೆ ಸಾಂಪ್ರದಾಯಿಕ ಹಿಂದೂಧರ್ಮದಲ್ಲಿ ಇರಲು ಸಾಧ್ಯವೇ ಇಲ್ಲ ಎಂದು ಬೌದ್ಧ ಧರ್ಮವನ್ನು ಅಂಗೀಕರಿಸಿದರಷ್ಟೆ. ಅಚ್ಚರಿ ಎಂದರೆ ವೈದಿಕ ಚೌಕಟ್ಟಿನಲ್ಲಿಯೇ ವೇದಾಂತದ ಒಂದು ಶಾಖೆಯಾದ ''ದ್ವೈತ''ವು ಇನ್ನೊಂದು ಶಾಖೆಯಾದ ''ಅದ್ವೈತ''ವನ್ನು 'ಪ್ರಚ್ಛನ್ನ ಬೌದ್ಧ'ಎಂದು ದೂಷಿಸುತ್ತದೆ. ಇಲ್ಲಿ ಕೊಡುಕೊಳೆ ಹೇಗಿದೆ ಎಂದರೆ ವೈದಿಕವು ಪ್ರಚ್ಛನ್ನ ಬೌದ್ಧವಾಗಿಯೂ ಬೌದ್ಧವು ಪ್ರಚ್ಛನ್ನವೈದಿಕವಾಗಿಯೂ ಕಂಡರೆ ಅಚ್ಚರಿ ಇಲ್ಲ. ಶಾಂಕರ ಸಿದ್ಧಾಂತವನ್ನು 'ಪ್ರಚ್ಛನ್ನ ಬೌದ್ಧ'ರೆಂದು ಕರೆದುದಕ್ಕೆ ಪ್ರತಿಯಾಗಿ ಮಾಧ್ವಸಿದ್ಧಾಂತವು ''ಪ್ರಚ್ಛನ್ನಜೈನ'' ಎನ್ನಬಹುದು ಎಂದು ಕವಿ ಬೇಂದ್ರೆಯವರು ಹೇಳುತ್ತಿದ್ದರು. ಏಕೆಂದರೆ ಜೈನ ಸಿದ್ಧಾಂತದ ಪ್ರಸಿದ್ಧವಾದ ''ಸ್ಯಾದ್ವಾದ''ದಲ್ಲಿ ಎಲ್ಲೋ ಒಂದೆಡೆ ದ್ವೈತವನ್ನು ಕಾಣಲು ಬರುತ್ತದೆ.

ಪರಂಪರೆಯ ಈ 'ಸತ್ತ್ವ' ಅರ್ಥವಾದವನು ಹೇಗೆ ಅತಿವಾದಿಯಾದಾನು ?

ಮಂದಿರ; ಮಸೀದಿ ವಿವಾದದಲ್ಲಿ ಬಹುಜನಕ್ಕೆ ತಿಳಿಯದ ಒಂದು ಘಟನೆಯನ್ನು ಹೇಳಬೇಕೆನಿಸುತ್ತದೆ. ಈ ಚಳವಳಿಯ ಒಂದು ಹಂತದಲ್ಲಿ, ವಿವಾದವನ್ನು, ಎರಡೂ ಕಡೆಯ ಸಂತರೇ ಸೇರಿ ಪರಿಹರಿಸಿಕೊಳ್ಳಬೇಕು ಎನ್ನುವುದು ಪೇಜಾವರ ಶ್ರೀಪಾದರ ನಿಲುವಾಗಿತ್ತು. ಆದರಂತೆ ಸಂತರ ಸಭೆ ಸೇರಿದಾಗ ಶ್ರೀಪಾದರು ಮುಸ್ಲಿಂ ಸಂತರೊಡನೆ ಈ ವಾದಗ್ರಸ್ತ ಕಟ್ಟಡವನ್ನು ತಮಗೆ, ಸನ್ಯಾಸಿಗೆ

ಕೊಡುತ್ತಿರುವ 'ಭಿಕ್ಷೆ' ಎಂದು ಪರಿಗಣಿಸಿ ಭಿಕ್ಷೆ ನೀಡಬೇಕು ಎಂದು ಕೇಳಿಕೊಂಡರು. ಸನ್ಯಾಸಿಗೆ ಮಾನಾಪಮಾನಗಳಿಲ್ಲ. ಅವನು 'ಭಿಕ್ಷು'. ಈಗ 'ಭಿಕ್ಷೆ'ಯಾಗಿ ಅವನು 'ರಾಮಮಂದಿರ'ವನ್ನು ಬೇಡುತ್ತಿದ್ದಾನೆ ಎಂದರು. 'ಭಿಕ್ಷೆ'ನೀಡಬೇಕಾದರೆ ಅದರ ಮೇಲೆ ಪೂರ್ಣ ಸ್ವಾಮಿತ್ತ್ವ ಬೇಕು. ಈಗ ಸ್ವಾಮಿತ್ತ್ವ ಸಿಕ್ಕಿಲ್ಲ. ಏಕೆಂದರೆ ಒಡೆತನದ ವಿಷಯ ನ್ಯಾಯಾಲಯದಲ್ಲಿದೆ ಎಂದು ಮುಸ್ಲಿಂ ಸಂತರು ಉತ್ತರಿಸಿದರು. ನ್ಯಾಯಾಲಯದಿಂದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳೋಣವಂತೆ. ಹಾಗೆ ಹಿಂತೆಗೆದುಕೊಂಡಮೇಲೆ ''ಭಿಕ್ಷೆ'' ನೀಡಲು ನೀವು ವಚನ ಬದ್ಧರಾಗಬೇಕು ಎಂದಾಗ ಆಮೇಲೆ ನೋಡೋಣ ಎಂದುತ್ತರ ಬಂತು. ಇಲ್ಲಿಗೆ ಆ ಪ್ರಸ್ತಾವ ಕೊನೆಗೊಂಡಿತು.

ಈ ಸಂಗತಿಯನ್ನು ನಮಗೆ ಬೇಕೆಂದಂತೆ ವ್ಯಾಖ್ಯಾನಿಸಬಹುದು. ಆದರೆ ನಿಜವಾಗಿ ಸನ್ಯಾಸಿಯಲ್ಲದ ಇತರರಿಗೆ ಇದು ಅಕಲ್ಪನೀಯ ಎಂಬುದು ಮಾತ್ರ ನಿಜ. ಪರಂಪರೆ 'ಸಂಗ್ರಹ'ಕ್ಕಿಂತ ಹೆಚ್ಚಾಗಿ 'ದಾನ'ವನ್ನು ಮೌಲ್ಯವಾಗಿ ಕೀರ್ತಿಸಿದೆ. ಅದಕ್ಕನುಗುಣವಾಗಿ ಮಾನಪಮಾನಾತೀತರಾದ ''ಭಿಕ್ಷು''ಗಳನ್ನು ದಾನಪಾತ್ರ-ರನ್ನಾಗಿಯೂ ರೂಪಿಸಿದೆ. ಹೀಗೆ 'ಗಾರ್ಹಸ್ಥ್ಯ ಮತ್ತು 'ಸನ್ಯಾಸ'ಗಳನ್ನು ಜತೆಜತೆಯಾಗಿ ಇಟ್ಟುಪ್ರಯೋಗ ಮಾಡುತ್ತಿದೆ. ಇಸ್ಲಾಮ್ 'ಗೃಹಸ್ಥ'ರ ಧರ್ಮ ಎಂಬ ಮಾತನ್ನು ಕೇಳಿದ್ದೇನೆ. ಅವರೊಡನೆ ಭಿಕ್ಷೆಯನ್ನು ಯಾಚಿಸಿ ಈ ಸನ್ಯಾಸಿ ತನ್ನ ಪರಂಪರೆಯ ಸತ್ತ್ವವನ್ನು ಬದುಕಿನಲ್ಲಿ ಪ್ರಯೋಗಕ್ಕೆ ತಂದಿದ್ದಾರೆ ಎಂದು ಮಾತ್ರ ಹೇಳಬೇಕೆನಿಸುತ್ತದೆ.

(ಈ ಗ್ರಂಥಕ್ಕಾಗಿ ಬರೆದ ಲೇಖನ – ಸಂ.)

